Mr. SPEAKER.—The Mysore Industrial Areas Development Bill, 1966 is introduced.

Sri H. R. ABDUL GAFFAR (Deputy Minister for finance).—Sir, I beg to introduce the Mysore Entertainment Tax (Amendment) Bill, 1966.

Mr. SPEAKER.—The Mysore Entertainment Tax (Amendment) Bill, 1966 is introduced.*

Sri D. DEVARAJ URS (Minister for Transport).—Sir, I beg to introduce the Mysore Motor Vehicles (Taxation on Passengers and Goods) (Amendment) Bill, 1966.

Mr. SPEAKER.—The Mysore Motor Vehicles (Taxation on Passengers and Goods) (Amendment) Bill, 1966 is introduced.*

BUDGET ESTIMATES FOR 1966-67—DEMANDS FOR GRANTS

Demand Nos. 2, 7, 8, 22, 33 and 42

(Debate continued)

†ಶ್ರೀ ಸಂಜೀವನಾಥ ಐಕಲ.—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳು ಎಂದರೆ, 2, 7, 8, 22 ಹಾಗೂ 33 ಮತ್ತು 42ನೆಯ ಡಿಮಾಂಡುಗಳನ್ನು ವಿರೋಧಿಸುತ್ತ ಇದರಲ್ಲಿ ಮೊದಲಿಗೆ ಪಶುಸಂಗೋಪನ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಮಾತನಾಡಲು ಬಯಸುತ್ತೇನೆ. ಇದರ ವಿಚಾರ ಗಳನ್ನು ಮಾತನಾಡುವುದಕ್ಕೆ ಮುನ್ನ ಈ ಒಂದು ಇಲಾಖೆ ಯಾವ ರೀತಿಯ ಅವ್ಯವಸ್ಥೆಯಾಗಿದೆ ಎಂಬುದರ ಬಗ್ಗೆ ಇತ್ತೀಚೆಗೆ ಎಂದರೆ 12-10-1965 ಹೈಕೋರ್ಟಿನವರು ಕೊಟ್ಟಿರುವ ಒಂದು ತೀರ್ಪಿನಲ್ಲಿರುವ ಮೂರು ನಾಲ್ಕು ವಾಕ್ಯಗಳನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ಅದು ಹೀಗಿದೆ :

> "The facts of the case discloses a sorry state of affairs in this Animal Husbandry Department at present. In that department the seniority list is not prepared and junior officers are put in senior and important posts as stop gap arrangement. Hence, there is naturally complaint of mal-practice. This Court had occasion to refer to the state of affairs in another case that came up before us for decision. Yet, there has been no improvement."

ಪಶುಸಂಗೋಪನ ಇಲಾಖೆಯ ಬಗ್ಗೆ ಹೈಕೋರ್ಟಿನವರು ಹೇಳಿದ ಮಾತುಗಳು ಇವು. ಆದರೆ ಈಚಿನ ನಾಲ್ಕೈದು ತಿಂಗಳಲ್ಲಿ ಇಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸಿ, ಸುಧಾರಣೆಗಳಾಗಿವೆ ಎಂದು ಹೇಳುತ್ತಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಈಗ ಅಭಿನಂದಿಸಬಹುದು. ಇದು ಪ್ರಾಯಶಃ ಎರಡು ಮೂರು ವರ್ಷಕ್ಕೆ ಮೊದಲು ಇದ್ದಂತಹ ಅವ್ಯವಸ್ಥೆಗಳ ಬಗ್ಗೆ ಹೇಳಿರಬಹುದು. ಈಗ ಮಾನ್ಯ ರೆವಿನ್ಯೂ ಮಂತ್ರಿಗಳು ಸುಧಾರಣೆ ಗಳಾಗಿವೆ ಎಂದು ಇಲ್ಲಿ ಈಗ ಹೇಳುತ್ತಾರೆ. ಅದರಿಂದ ಅವರ ಮಾತುಗಳನ್ನೂ ಸ್ವಾಗತಿಸುತ್ತೇನೆ.

ಈ ಇಲಾಖೆಯಲ್ಲಿ ಅತಿ ಮುಖ್ಯವಾದ ಮಾರ್ಪಾಡುಗಳಿಂದ ನಡೆಯುತ್ತಿರುವ ಡೈರಿ ಪ್ರಾಜೆಕ್ಟು ಸ್ಕೀಮು ಗಳು ಬಹುಮುಖ್ಯವಾದದ್ದು. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮಿಲ್ಕ್ ಪ್ರಾಜೆಕ್ಟ್ ಸ್ಕೀಂ

---

* Introduced upon the recommendation of the Governor.

ಮಾಡಿರುವ ಬಗ್ಗೆ ಮೂರು ನಾಲ್ಕು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇಲ್ಲಿ ಏನಾಗಿದೆ ಎಂದರೆ, ಡೈರಿ ಪ್ರಾಜೆಕ್ಟ್‌ಗಾಗಿ ಕಟ್ಟಡಗಳನ್ನು ಕಟ್ಟೋಣ ಎಲ್ಲವೂ ಆಗಿದೆ. ಆ ಸ್ಥಳಕ್ಕೆ ಹೋಗುವ ಜಾಗದಲ್ಲಿ ಸುಮಾರು 120 ಅಡಿಗಳಷ್ಟು ಭಾಗ ಇನ್ನೂ ಅಕ್ವಿಸಿಷನ್ನು ಆಗಿಲ್ಲ. ಸುಮಾರು ಎರಡು ವರ್ಷ ಗಳಿಂದಲೂ ಅಕ್ವಿಸಿಷನ್ನು ಪ್ರೊಸೀಡಿಂಗ್ಸ್ ನಡೆಯುತ್ತಿತ್ತು. ಮತ್ತು ಇದಕ್ಕೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ.

ಅಧ್ಯಕ್ಷರು.—ಇದು ತಪ್ಪು. ನೀರಿನ ಸೌಕರ್ಯಗಳನ್ನೆಲ್ಲಾ ಅಲ್ಲಿನ ಮುನಿಸಿಪಾಲಿಟಿಯವರೇ ಕೊಡು ತ್ತಾರೆ.

ಶ್ರೀ ಸಂಜೀವನಾಥ ಐಕಳ.—ಇಲ್ಲಿ ಬಾವಿಗಳನ್ನು ಮಾಡಲು ಮುನಿಸಿಪಾಲಿಟಿಯವರು ಪ್ರಯತ್ನ ಮಾಡಿದ್ದರೆ ಇಲ್ಲಿ ನೀರಿನ ತೊಂದರೆ ತಪ್ಪುತ್ತಿತ್ತು. ಇಲ್ಲಿ ಹಾಗೆ ಆಗಲಿಲ್ಲ. ಈ ಬಾವಿಗಳನ್ನು ಆದಷ್ಟುಬೇಗ ಮಾಡಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮುನಿಸಿಪಾಲಿಟಿಯ ಛೇರ್ಮನ್ನರೂ ಸರಕಾರದವರೂ ಇಬ್ಬರೂ ಒಪ್ಪಿಕೊಂಡು ಈ ಪ್ರಾಜೆಕ್ಟ್ ಆಗಿದೆ.

ಶ್ರೀ ಸಂಜೀವನಾಥ ಐಕಳ.—ಬೋರ್‌ವೆಲ್ಸ್‌ಗಳನ್ನು ಆದಷ್ಟುಬೇಗ ಮಾಡಿ ಇಲ್ಲಿ ನೀರು ಸಿಗುವಂತೆ ಮಾಡಿ ಇಲ್ಲಿನ ಮಂಗಳೂರು ಮಿಲ್ಕ್ ಪ್ರಾಜೆಕ್ಟ್ ಸ್ಕೀಮನ್ನು ಆದಷ್ಟು ಬೇಗನೆ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟೇ ಅಲ್ಲ. ಇಲ್ಲಿ ಹತ್ತು ಹನ್ನೆರಡು ಕೋ-ಆಪರೇಟೀವ್ ಸೊಸೈಟಿಗಳಾಗಿದೆ ಇವರುಗಳೇ ಹಾಲನ್ನು ತಂದುಕೊಡುತ್ತಿದ್ದಾರೆ. ಇಲ್ಲಿರುವ ಮಿಲ್ಕ್ ಪ್ರಾಜೆಕ್ಟ್ ಅಧಿಕಾರಿಗಳ ಪ್ರಯತ್ನದಿಂದ ಒಂದು ದಿನಕ್ಕೆ ಸುಮಾರು ಎರಡು ಸಾವಿರ ಲೀಟರುಗಳಷ್ಟು ಹಾಲನ್ನು ಒದಗಿಸಿ ಕೊಡುತ್ತಿದ್ದಾರೆ. ಇವರಿಗೆ ಇನ್ನೂ ಹೆಚ್ಚು ಪ್ರೋತ್ಸಾಹಗಳು ಸಿಕ್ಕಿದರೆ ಮುಂದೆ ಇದರಿಂದ ಐದಾರು ಸಾವಿರ ಲೀಟರುಗಳಷ್ಟು ಹಾಲನ್ನು ಇಲ್ಲಿರುವ ಸಹಕಾರ ಸಂಘಗಳಿಂದ ಕೊಡಲಿಕ್ಕೆ ಸಾಧ್ಯವಾದೀತು. ಮಿಲ್ಕ್ ಪ್ರಾಜೆಕ್ಟ್ ಸ್ಕೀಂ ಮೆಷಿನರಿಗಳನ್ನು ಇನ್ನೂ ಹೆಚ್ಚು ಮಾಡಿದರೆ ಹೆಚ್ಚು ಹಾಲನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದು ಮುಖ್ಯವಾಗಿ ಆಗ ಬೇಕಾದ ಕೆಲಸ ಸಹಕಾರ ಸಂಘಗಳಿಗೆ ಬೇಕಾಗುವ ಸಾಲಗಳು ಸರಿಯಾಗಿ ದೊರಕುತ್ತಿಲ್ಲ. ರಿಸರ್ವ್ ಬ್ಯಾಂಕಿ ನವರು ಇತರ ಸೊಸೈಟಿಗಳಿಗೆ ಸಾಲಕೊಡುವ ರೀತಿಯಲ್ಲಿ ಈ ಮಿಲ್ಕ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಸಾಲ ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ, ಈಗಿರುವ ನಿಯಮಗಳಂತೆ ರಿಸರ್ವ್ ಬ್ಯಾಂಕಿ ನವರು ಈ ಮಿಲ್ಕ್ ಸೊಸೈಟಿಗಳಿಗೆ ಸಾಲ ಕೊಡಲಾಗುತ್ತಿಲ್ಲ. ಇದರಿಂದ ಇವರಿಗೆ ಸಾಲ ಸಿಗದಹಾಗೆ ಆಗಿದೆ. ಪ್ರೈಮರಿ ಸೊಸೈಟಿಗಳಿಗೆ ಮಾತ್ರ ಸಾಲ ಕೊಡುವಂತೆ ಈ ಮಿಲ್ಕ್ ಸೊಸೈಟಿಗಳಿಗೂ ಸಾಲ ಕೊಡಲು ಪ್ರತ್ಯೇಕ ವಾಗಿ ಒದಗಿಸಿಕೊಡಲು ಸಹಾಯ ಮಾಡಬೇಕು. ಬೇರೆ ಯಾರಲ್ಲೂ ಇವರಿಗೆ ಸಾಲ ಸಿಗುತ್ತಿಲ್ಲ. ಇದರಿಂದಾಗಿ ಇಲ್ಲಿರುವ ಹತ್ತು ಹನ್ನೆರಡು ಹಾಲಿನ ಸೊಸೈಟಿಗಳು ಬಹಳ ಕಷ್ಟಪಡುತ್ತಿವೆ. ಸಾಲ ಸಿಗುವಹಾಗೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸರಕಾರ ಈಚೆಗೆ ಸಹಾಯ ಮಾಡಿರುವುದರಿಂದ ತಾವು ಸರಕಾರಕ್ಕೆ ಚಿರಋಣಿಗಳಾಗಿರ ಬೇಕು.

ಶ್ರೀ ಸಂಜೀವನಾಥ ಐಕಳ.—ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಸಹಾಯ ಕೊಟ್ಟಿದ್ದಕ್ಕಾಗಿ ಅವರೂ ಸರಕಾರಕ್ಕೆ ಚಿರಋಣಿಗಳಾಗಿದ್ದಾರೆ. ಅದೇ ರೀತಿ ಅಂತಹ ಪ್ರಾಜೆಕ್ಟುಗಳು 3—4 ಕಡೆ ಇವೆ. ಅವು ಅಷ್ಟು ಪ್ರಗತಿಯಾಗಿಲ್ಲ.

ಬೆಂಗಳೂರು ಡೈರಿ ಪ್ರಾಜೆಕ್ಟು ವಿಷಯದಲ್ಲಿ ಒಂದು ಮಾತು. ಒಂದು ಲಕ್ಷಕ್ಕೂ ಹೆಚು ಲೀಟರ್ಸ್ ಹಾಲಿನ ವ್ಯವಸ್ಥೆಗೊಳಿಸತಕ್ಕ ಬೆಂಗಳೂರು ಡೈರಿ ಪ್ರಾಜೆಕ್ಟು ಏನಿದೆ ಅದರಲ್ಲಿ ಈಗ ಕೇವಲ 12—13 ಸಾವಿರ ಲೀಟರ್ಸ್ ಹಾಲನ್ನು ಮಾತ್ರ ಸಂಗ್ರಹ ಮಾಡತಕ್ಕ ಕಾರ್ಯ ನಡೆದಿದೆ. ಅದೂಸಹ ಇಲ್ಲಿಯ ಸಹಕಾರ ಸಂಘಗಳಿಗೆ ಕೊಡುವುದಿಲ್ಲ. ವ್ಯಕ್ತಿಗಳಿಗೆ ಮಾತ್ರ ಕೊಡುತ್ತಾರೆ. ಏಕೆಂದರೆ ಅವರು ಕೊಡುತ್ತಾ ಇರುವ ರೇಟ್ ಬಹಳ ಕಡಿಮೆಯಾಗಿದೆ. 65—68 ಪೈಸೆ ಒಂದು ಲೀಟರ್‌ಗೆ ಕೊಡುತ್ತಾರೆ. ಇಷ್ಟು ದೊಡ್ಡ ದೊಡ್ಡ ಪ್ರಾಜೆಕ್ಟ್ ಯೂನಿಸೆಫ್ ಪ್ರಾಜೆಕ್ಟ್ ಆದ ಇದು ಯಶಸ್ವಿಯಾಗಿ ಬೆಂಗಳೂರಿನ ನಾಗರಿಕರಿಗೆ ಬೇಕಾದ ಎಲ್ಲಾ ಹಾಲೂ ಕೂಡ ಅವರಿಂದಲೇ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡಲು ಅಲ್ಲಿನ ಅಧಿಕಾರಿಗಳು ಯಾರಿದ್ದಾರೋ ಅವರು ತ್ವರಿತ ವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 45 ಮೈಲಿ ಒಳಗೆ ಇರತಕ್ಕ ಮಿಲ್ಕ್ ಷೆಡ್ ಏರಿಯಾ ದಲ್ಲಿ ಎಲ್ಲಾ ಸೊಸೈಟಿಗಳಿಗೂಕೊಟ್ಟು ಅವರಿಗೆ ಸಾಲ ಸಿಕ್ಕುವ ಏರ್ಪಾಡು ಮಾಡಿ ಅವರಿಂದಲೇ ಹಾಲಿನ ಸರಬ ರಾಯಿ ಆಗುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

(ಶ್ರೀ ಸಂಜೀವನಾಥ ಐಕಳ)

ಪಶುವೈದ್ಯ ಇಲಾಖೆಯ ಸ್ಟಾಕ್‌ಮೆನ್‌ಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಿಜವಾಗಿಯೂ ಇವರು ಒಂದು ವರ್ಷ ಎರಡು ತಿಂಗಳು ಟ್ರೈನಿಂಗ್ ಪಡೆದು ಅವರಿಗೆ ಸಿಕ್ಕತಕ್ಕ ಪಗಾರ ನೋಡಿದರೆ ಬಹಳ ಕಡಿಮೆ. ಲೋಯರ್ ಡಿವಿಜನ್ ಕ್ಲಾರ್ಕಗಳಿಗೆ ಕೊಡತಕ್ಕ ಸಂಬಳ ಕೊಡುತ್ತಾ ಇದ್ದೀರಿ. ಅವರು ಅನೇಕ ಮನವಿಗಳನ್ನು ಈ ಬಗ್ಗೆ ತಮಗೆ ಕೊಟ್ಟಿದ್ದಾರೆ ಮತ್ತು ಅನೇಕ ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳಲಾಗಿದೆ. ಈ ಸ್ಟಾಕ್‌ಮನ್ ಯಾರಿದ್ದಾರೆ ಇವರು ವೆಟರ್ನರಿ ಡಿಪಾರ್ಟ್‌ಮೆಂಟಿನಲ್ಲಿ ಕೀ ಪೋಸ್ಟ್ ಇದ್ದಹಾಗೆ ಇದ್ದಾರೆ. ಇವರ ವೇತನವನ್ನು ಪರಿಷ್ಕರಿಸಿ, ಕಡೇಪಕ್ಷ ಅಪ್ಪರ್ ಡಿವಿಜನ್ ಕ್ಲಾರ್ಕ್ಸ್‌ಗೆ ಸಿಕ್ಕತಕ್ಕ ಸಂಬಳವನ್ನಾದರೂ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೋಳಿ ಸಾಕಾಣಿಕೆಯ ಪ್ರಾಜೆಕ್ಟ್‌ನ್ನು ಮಾಡಿದ್ದೀರಿ ಇದು ಬಹಳ ಒಳ್ಳೆಯ ಸ್ಕೀಂ ನಮ್ಮ ಜಿಲ್ಲೆಯಲ್ಲೂ ಸಹ ಈ ಬಗ್ಗೆ ಒಂದು ಸೊಸೈಟಿ ಪ್ರಾರಂಭವಾಗಿದೆ. ಅದು ಕೆಲಸ ಮಾಡುತ್ತ ಇದೆ. ಅದರಲ್ಲೂ ಸಹ ಅವರಿಗೆ ಬೇಕಾದ ಹಣದ ಸಹಾಯ ಯೋಗ್ಯ ರೀತಿಯಲ್ಲಿ ಸಮಯಕ್ಕೆ ಸರಿಯಾಗಿ ಸಿಕ್ಕುವ ಹಾಗೆ ಆಗಬೇಕು. ಕೆಲವು ಸಲ ಇದು ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟದೆ ನಡುವೆ ಅಡ್ಡಿ ಆತಂಕ ಇದ್ದು ಅವರಲ್ಲಿ ಇದ್ದ ಉತ್ಸಾಹ, ಹುರುಪು ಹೊರಟುಹೋಗಿ, ಬೇಸರ ಬಂದು ಈ ಕೆಲಸದಲ್ಲಿ ತಾತ್ಸಾರ ಜಿಗುಪ್ಸೆ ಉಂಟಾಗಿದೆ. ಇದೇ ರೀತಿ ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ ಯೋಜನೆಗಳು ಇವೆ, ಇದಕ್ಕೂ ಕೂಡ ಯೋಗ್ಯ ರೀತಿಯಲ್ಲಿ ಪ್ರಚಾರ ಮಾಡಿ ಇದರಿಂದ ರೈತರಿಗೆ ಸಹಾಯವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ರೆವಿನ್ಯೂ ಡಿಮ್ಯಾಂಡ್‌ಮೇಲೆ ಮಾತನಾಡುವಾಗ ಒಂದು ವಿಷಯ ಹೇಳಬೇಕಾಗಿದೆ. ಹೊಸ ತಾಲ್ಲೂಕುಗಳ ರಚನೆ ನಮ್ಮ ಜಿಲ್ಲೆಯಲ್ಲಿ ಮಾಡಿದ ಹಾಗೆ ಕಾಣುತ್ತಾ ಇಲ್ಲ. ಆರು ತಾಲ್ಲೂಕುಗಳು 9 ತಾಲ್ಲೂಕುಗಳಾಗಬೇಕೆಂದು ಹೇಳುತ್ತಾ ಬಂದಿದ್ದೇನೆ. ಗಡಿ ನಿರ್ಣಯ, ಭೌಗೋಳಿಕ ಆಧಾರ ಹಾಗೂ ಆದಾಯದಮೇಲೆ ಹೊಂದಿಕೊಂಡು 9 ತಾಲ್ಲೂಕುಗಳ ರಚನೆಯಾಗಬೇಕೆಂಬುದನ್ನು ತಮ್ಮ ಮುಂದೆ ಇಟ್ಟಿದ್ದೇವೆ. ತಾವು ಕೇವಲ ಒಂದೇ ಒಂದು ತಾಲ್ಲೂಕನ್ನು ಮಾಡಿದ್ದೀರಿ. ಶ್ರೀಮಾನ್ ಸುಬ್ಬಯ್ಯನಾಯಕ್ ಅವರು ನನ್ನ ಕಡೆಗೆ ನೋಡುತ್ತಾ ಇದ್ದಾರೆ. ಅವರ ಪ್ರಭಾವಕ್ಕೆ ಒಳಗಾಗಿ ಕೇವಲ ಸುಬ್ಬಯ್ಯನಾಯಕ್‌ರವರ ಊರನ್ನೇ ಒಂದು ತಾಲ್ಲೂಕಾಗಿ ರಚನೆ ಮಾಡಿದ್ದೀರಿ. ಮೂಡಬಿದರೆ ತಾಲ್ಲೂಕು ರಚನೆ ಮಾಡಿಲ್ಲ. ಈ ಪ್ರದೇಶ 63 ಗ್ರಾಮಗಳನ್ನು ಒಳಗೊಂಡು ಒಂದು ಲಕ್ಷ ಜನಸಂಖ್ಯೆ ಇರತಕ್ಕ ಸ್ಥಳವಾಗಿದೆ. ಸೂಳ್ಯ ತಾಲ್ಲೂಕು ಕೇವಲ 43 ಗ್ರಾಮಗಳನ್ನೊಳಗೊಂಡು, 50—60 ಸಾವಿರ ಜನಸಂಖ್ಯೆ ಇರತಕ್ಕ ತಾಲ್ಲೂಕು ಆಗಿದೆ. ಅದು ಸೆಲ್ಫ್ ಸಪೋರ್ಟಿಂಗ್ ತಾಲ್ಲೂಕು ಸಹ ಆಗಲಿಲ್ಲ. ಅಲ್ಲದೆ ಅದರ ಉತ್ಪನ್ನ ಬಹಳ ಕಡಿಮೆ ಮಟ್ಟದ್ದಾಗಿದೆ. ಮೂಡಬಿದರೆ ತಾಲ್ಲೂಕು ರಚನೆಯಾಗಬೇಕಾಗಿತ್ತು. ಅದು ಆಗದೇ ಇರುವುದರಿಂದ ತುಂಬಾ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಬರುವ ವರ್ಷವಾದರೂ ರೆವಿನ್ಯೂ ವರ್ಷದಲ್ಲಿ ಸರಿಪಡಿಸಿ ಮೂಡಬಿದರೆ ತಾಲ್ಲೂಕನ್ನು ರಚನೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಭೂ ಸುಧಾರಣೆ ಮಸೂದೆಯ ವಿಷಯ. ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದು ಬಹಳ ಅವಶ್ಯಕವಾಗಿದೆ. ಭೂ ಮಸೂದೆಯನ್ನು ಜಾರಿಗೆ ತಂದಿದ್ದೀರಿ, ರೂಲ್ಸ್ ತಯಾರು ಮಾಡಿದ್ದೀರಿ, ಜಾರಿಯಲ್ಲಿದೆ ಎಂದು ಹೇಳುತ್ತಾ ಇದ್ದೀರಿ. ಅದು ಯಾವ ಹಂತದಲ್ಲಿದೆ, ಹೇಗೆ ಇದೆ ಅಥವಾ ಚಾಲಗೇಣಿ ಒಕ್ಕಲಿಗೆ ಯಾವ ಪ್ರಯೋಜನವಾಗಿದೆ ಏನು ಎಂಬುದು ನಿರ್ದಿಷ್ಟವಾಗಿ ಗೊತ್ತಾಗುತ್ತಾ ಇಲ್ಲ. ಯಾರ ಹತ್ತಿರ ಕೇಳಿದರೂ ಗೊತ್ತಾಗುತ್ತಾ ಇಲ್ಲ. ವಕೀಲರಿಗೆ ಗೊತ್ತಿಲ್ಲ, ಸರ್ಕಾರದವರು ಬಿಲ್ ಪಾಸ್ ಮಾಡಿದ್ದಾರೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಅಧಿಕಾರಿಗಳನ್ನು ಕೇಳಿದರೆ ಆರ್ಡರ್ ಬರುವವರೆಗೂ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಿಜವಾದ ಪರಿಸ್ಥಿತಿ ಯಾರಿಗೂ ಗೊತ್ತಾಗುತ್ತಾ ಇಲ್ಲ. ಈಗಾಗಲೇ ಈ ಮಸೂದೆ ಜಾರಿಗೆ ಬಂದಿರುವದರಿಂದ ಕೆಲವರಿಗೆ ಕಳವಳ ಉಂಟಾಗಿದೆ. ಮತ್ತೊಂದು ಕಡೆ ಯಾವ ರೀತಿ ಆಗುತ್ತದೆಯೋ ಅಂತ ಹೇಳಿ ಜನ ಕಂಗಾಲು ಪಡತಕ್ಕ ಪರಿಸ್ಥಿತಿ ಉಂಟಾಗಿದೆ. ಇದು ಬಹಳ ಮುಖ್ಯವಾದ ದೊಡ್ಡ ಪ್ರಶ್ನೆ. ಇದನ್ನು ಯೋಗ್ಯ ರೀತಿಯಲ್ಲಿ ಜಾರಿಗೆ ತರುವಂತೆ ಮಾಡಲು ಕೆಲಸ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ನೇಮಕಮಾಡಿ ಇದನ್ನು ಕ್ರಮಗೊಳಿಸಬೇಕು. ಇಲ್ಲದೇಹೋದರೆ ಇನ್ನು ಕೆಲವೇ ದಿವಸಗಳಲ್ಲಿ ಚುನಾವಣೆ ಬರುತ್ತದೆ. ಆ ಸಂದರ್ಭದಲ್ಲಿ ಶ್ರೀಮಂತರಿಗೆ ನೀವು ಲಾಗು ಆಗುವುದಿಲ್ಲ ಎಂದು ಹೇಳುತ್ತೀರಿ, ಅದೇರೀತಿ ಚಾಲ ಗೇಣಿಯವರಿಗೆ ನಿಮಗೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತೀರಿ. ಈ ರೀತಿ ನಿಮಗೆ ಶ್ರೀಮಂತರ ಹಣ ಬೇಕು, ಚಾಲ ಗೇಣಿಯವರ ಓಟು ಬೇಕು ಅಷ್ಟಕ್ಕಾಗಿ ಈ ಮಸೂದೆಯನ್ನು ತಂದು, ಇದು ಒಂದು ಅಂತರ ಪಿಶಾಚಿಯ ರೂಪದಲ್ಲಿ ಇದೆ ಇವತ್ತು ಇದೆ. ಎರಡು ಕಡೆಯವರಿಗೂ ಸಮಾಧಾನ ಹೇಳುವ ರೀತಿ ಇದನ್ನು ತಂದಿಟ್ಟಿದ್ದೀರಿ.

ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಮಾತನಾಡುವಾಗ ನಮ್ಮ ಜಿಲ್ಲೆಯ ಮಟ್ಟಿಗೆ ಅಪಾರ ಪ್ರೇಮವನ್ನು ವ್ಯಕ್ತಪಡಿಸಿದರು. ನಮಗೆ ಬೇಕಾದ ಸಹಾಯ ಸೌಲತ್ತುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಯಜಮಾನ ಇದ್ದ ಅವನಿಗೆ ಕೊನೆ ಮಗಳಮೇಲೆ ಬಹಳ ಪ್ರೀತಿ. ಕೊನೆಯ ಮಗಳು ಎಂದು. ಮಗಳು ದೊಡ್ಡವಳಾದಳು, 20 ವರ್ಷ ಆಯಿತು ಅವಳಮೇಲೆ ಎಷ್ಟೇ ಪ್ರೀತಿ ತೋರಿಸಿದರೂ ಅವಳ ಮನಸ್ಸಿನಲ್ಲಿ ಕಷ್ಟ ಏನಿದೆ ಎಂಬುದನ್ನು ತಿಳಿದುಕೊಳ್ಳಲಿಲ್ಲ. ಮನೆಯಲ್ಲೆ ಇಟ್ಟುಕೊಂಡಿದ್ದ, ಅವಳಿಗೆ ಮದುವೆ ಮಾಡಬೇಕು, ಗಂಡನನ್ನು ಹುಡುಕಬೇಕು, ಇದುಯಾವುದನ್ನೂ ಅವನು ಯೋಚನೆ ಮಾಡಲಿಲ್ಲ. 18 ವರ್ಷದ ನಂತರ ಯಾವ ಹೆಣ್ಣು ಮಕ್ಕಳಿಗೇ ಆದರೂ ಮದುವೆ ಆಗಬೇಕೆಂಬ ಆಶೆ ಇರುವುದು ಸ್ವಾಭಾವಿಕ. ಹಾಗೆ ನಮ್ಮ ಮುಖ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಕೊನೆ ಹೆಣ್ಣು ಮಗಳಂತೆ ಪ್ರೀತಿ ತೋರಿಸುತ್ತಾ ಇದ್ದಾರೆ. ನಮಗೆ ಬೇಕಾದ ಯಾವ ಆಶೋತ್ತರಗಳನ್ನೂ ಈಡೇರಿಸುತ್ತಾ ಇಲ್ಲ, ನಮ್ಮ ಆಶೋತ್ತರ ಏನು ಆದರ ಬಗ್ಗೆ ಅವರಿಗೆ ಯಾವ ಕಳವಳವೂ ಕೂಡ ಇಲ್ಲ. ಆದ್ದರಿಂದ ಪ್ರೀತಿ ಉಂಟು ಅಂದಾಕ್ಷಣಕ್ಕೆ ಸಮಾಧಾನವಾಗಲಾರದು, ದಕ್ಷಿಣ ಕನ್ನಡ ಜಿಲ್ಲೆಯಮಟ್ಟಿಗೆ ಬಹಳ ಪ್ರೀತಿ ಇರಬಹುದು ಆದರೆ ಅವರ ಕಷ್ಟ ಏನಿದೆ ? ತಮ್ಮ ಕಾನೂನುಗಳನ್ನು ಯಾವ ರೀತಿ ಪರಿಪಾಲಿಸುತ್ತಾ ಇದ್ದಾರೆ, ಸರ್‌ಚಾರ್ಜ ಆಗಲಿ ರೆವಿನ್ಯೂ ಕಂದಾಯ ಆಗಲಿ ಯಾವುದನ್ನೂ ಬಾಕಿ ಇಡದೇ ಕೊನೆಯ ಮಗಳ ಹಾಗೆ ಒಳ್ಳೆಯ ರೀತಿಯಲ್ಲಿ ಕೊಟ್ಟರೂ ಕೂಡ ಅವಳಿಗೆ ಬೇಕಾದ ನೆರವು ಕೊಡದಿದ್ದರೆ ಏನು ಪ್ರಯೋಜನ ? ಯಜಮಾನ ಕೊನೆ ಮಗಳನ್ನು ಯಾವ ರೀತಿ ಪ್ರೀತಿಯಿಂದ ನೋಡಿದನೋ ಆ ರೀತಿ ಪ್ರೀತಿಯಿಂದ ನೋಡಿದಂತಾಗಿ ಬೇಕಾದ ಆಶೋತ್ತರಗಳನ್ನು ನೇರವೇರಿಸಿದಂ ತಾಗುವುದಿಲ್ಲ.

ಕ್ಷಾಮದ ವಿಷಯ ಮಾತನಾಡುವುದಾದರೆ ಕೆಲವು ಕಡೆ ಮಳೆ ಬಾರದೆ ಇರಬಹುದು, ಆದರೆ ಕರಾವಳಿ ಪ್ರದೇಶದಲ್ಲಿ ಮತ್ತೊಂದು ತೊಂದರೆ ಇದೆ, ಉಪ್ಪು ನೀರಿನ ಪ್ರಕೋಪದಿಂದ ಎರಡನೆಯ ಮತ್ತು ಮೂರನೆಯ ಬೆಳೆಗೆ ನಷ್ಟವಾಗುತ್ತಿದೆ. ಈ ವರ್ಷ ಸುಮಾರು 30—35 ಲಕ್ಷ ರೂಪಾಯಿಗಳಷ್ಟು ಬೆಳೆ, ಮನೆಗಳು ಮುಂತಾದುವುಗಳಿಗೆ ನಷ್ಟವಾಗಿದೆ. ಆದರೆ ಪರಿಹಾರ ಸಿಕ್ಕಿರುವುದೆಷ್ಟು ? ಕೇವಲ 23 ಸಾವಿರ ರೂಪಾಯಿ ದೊರೆತಿದೆ. ಇದು ಎಷ್ಟು ಹಾಸ್ಯಾಸ್ಪದವಾಗಿದೆ ? ಇದು ಸರಿಯಲ್ಲ. ಸರಕಾರದವರು ಚಿತ್ರದುರ್ಗ, ರಾಯಚೂರು ಮುಂತಾದ ಕಡೆಗಳಿಗೆ ಲಕ್ಷಗಟ್ಟಲೆ ಪರಿಹಾರ ಕೊಡುತ್ತಿರುವಾಗ ಕರಾವಳಿ ಪ್ರದೇಶಕ್ಕೆ ಈ ವರ್ಷ ಕೊಟ್ಟಿರುವುದು ಕೇವಲ ಕಡಮೆ. ಇದನ್ನು ಗಮನಿಸಿ ಅಲ್ಲಿಗೆ ಕೂಡಲೆ ತಕ್ಕಷ್ಟು ಪರಿಹಾರ ಕೊಡಬೇಕೆಂದು ವಿನಂತಿಮಾಡುತ್ತೇನೆ.

ಶ್ರೀ ಎಸ್. ಎ. ಕರಿಲಿಂಗಣ್ಣನವರ್ (ಗೋಕಾಕ್).—ಅಧ್ಯಕ್ಷರೇ, ಕಂದಾಯ ಸಚಿವರೇನು ಈ ಸಭೆಯ ಮುಂದೆ ಡಿಮ್ಯಾಂಡುಗಳನ್ನಿಟ್ಟಿದ್ದಾರೆ ಅದನ್ನು ತ್ರಿಕರಣಪೂರ್ವಕವಾಗಿ ಸ್ವಾಗತಿಸಿ ಕೆಲವೊಂದು ಮಾತುಗಳನ್ನು ಹೇಳುತ್ತೇನೆ. ಮುಖ್ಯವಾಗಿ ಮಾತನಾಡಬೇಕಾಗಿರುವುದು ಅಭಾವ ಪರಿಸ್ಥಿತಿಯ ವಿಚಾರ. ನಮ್ಮ ಪ್ರಾಂತದಲ್ಲಿ ಸುಮಾರು 10—15 ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇದೆ. ಬೆಳಗಾಂ ಜಿಲ್ಲೆಯಲ್ಲಿ ಗೋಕಾಕ್, ಸೌಂದತ್ತಿ, ರಾಮದುರ್ಗ, ಅಥನಿ—ಈ 4 ತಾಲ್ಲೂಕುಗಳಲ್ಲಿ ಅಭಾವ ಪರಿಸಿ ತಿಯಿಂದ ತೊಂದರೆ ಅಧಿಕವಾಗಿದೆ. ಗೋಕಾಕ್ ತಾಲ್ಲೂಕಿನಲ್ಲಿ 60 ಹಳ್ಳಿಗಳಲ್ಲಿ 3—4 ವರ್ಷದಿಂದ ಮಳೆ ಬೆಳೆ ಇಲ್ಲ, ಈ ವರ್ಷ ಬಿತ್ತನೆಯೇ ಮಾಡಿಲ್ಲ. ಹೀಗಾಗಿ ಅಲ್ಲಿ ಜನರಿಗೆ ಉದ್ಯೋಗವಿಲ್ಲ, ಭೂಮಿ ಇರುವವರು ತಮ್ಮ ಜಮೀನನ್ನು ಅಥವಾ ಬೇರೆ ಒಡವೆ ವಸ್ತುಗಳನ್ನು ಅಡವಿಟ್ಟು ಜೀವನಮಾಡಬೇಕಾಗಿದೆ. ಜಮೀನಿಲ್ಲದಿರುವವರು ಏನಾದರೂ ಉಪಜೀವನ ಮಾಡುವುದಕ್ಕೆ ಮಾರ್ಗವಿಲ್ಲವಾಗಿದೆ. ಅವರಿಗೆ ಕೂಲಿ ಹೊರತು ಬೇರೆ ಕೆಲಸವಿಲ್ಲ. ಈ ಅಭಾವ ಪರಿಸ್ಥಿತಿಯಲ್ಲಿ ಕೂಲಿ ಸಿಕ್ಕುತ್ತಿಲ್ಲ. ಇದರ ಸಲುವಾಗಿ ಸರಕಾರ ಕೂಲಿ ಒದಗಿಸಿದರೆ ಅದರಿಂದ ಏನಾದರೂ ದೊರೆತು ಜೀವನಮಾಡಬಹುದು. ಅದರ ಸಲುವಾಗಿ ಮುಖ್ಯವಾಗಿ ನಮ್ಮ ತಾಲ್ಲೂಕಿನ 60 ಹಳ್ಳಿಗಳಿಗೆ ವಿಶೇಷ ಗಮನ ಕೊಟ್ಟು ಅಲ್ಲಿ ಏನಾದರೂ ಕಾಮಗಾರಿ ತೆಗೆದುಕೊಳ್ಳಬೇಕೆಂದು ವಿನಂತಿಮಾಡುತ್ತೇನೆ. ಸಾಮಾನ್ಯವಾಗಿ ಆ ಭಾಗದಲ್ಲಿ ಮಳೆಯೇ ಆಗುವುದಿಲ್ಲ. ಕೆಲವು ಭಾಗಗಳಲ್ಲಿ ಕೇವಲ 10—12 ಇಂಚು ಮಳೆಯಾಗುವುದು. ನಮ್ಮಲ್ಲಿ ಇರಿಗೇಷನ್ ಮಾಡುಬೇಕಾದರೆ ಘಟಪ್ರಭ ಮೊದಲಾದ ದೊಡ್ಡ ಯೋಜನೆ ಬಿಟ್ಟರೆ ಕೆಳಮಟ್ಟದ ಇರಿಗೇಷನ್ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಆ ಕೆಲಸ ಮಾಡುವುದಿಲ್ಲ, ಮಳೆಯಿಲ್ಲದೆ ಭೀಕರ ಪರಿಸ್ಥಿತಿ ಇದೆ. ಇದರ ಸಲುವಾಗಿ ತೀವ್ರವಾಗಿ ಕೆಲಸ ತೆಗೆದುಕೊಂಡು ಕೂಲಿ ಒದಗಿಸಿ ಹೊಟ್ಟೆಗೆ ಅನುಕೂಲ ಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನೊಂದು ವಿಷಯ ನಮ್ಮ ತಾಲ್ಲೂಕಿನಲ್ಲಿ ಇನಾಂ ಗ್ರಾಮಗಳಿವೆ, ಸುಮಾರು 22 ಇವೆ. ಅವುಗಳ ಮಾಲೀಕತ್ವ ಸರಕಾರಕ್ಕೆ ಬಂದಿದೆ. ಆದರೆ ಆ ಗ್ರಾಮಗಳವರು ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಕಾರಣ ಪರಗಣ, ವತನ್ ಇದೆ. ಅಲ್ಲಿನವರು 6 ಪಟ್ಟು ತುಂಬಿದ್ದಾರೆ, 20 ಪಟ್ಟು ತುಂಬುವವರೆಗೆ ಸಾಲ ಕೊಡುವುದಿಲ್ಲವೆಂದು ಹೇಳುತ್ತಾರೆ. ಆದರೆ 20 ಪಟ್ಟು ತುಂಬಬೇಕೆಂದು ಹೇಳುವುದು ಯಾವ ನ್ಯಾಯ ? ಈಗ 6 ಪಟ್ಟು ತುಂಬಿ ಮಾಲೀಕರಾಗಿದ್ದಾರೆ. ಇದರ ಸಲುವಾಗಿ ಸರಕಾರದಿಂದ ಸಾಲ ತೆಗೆದುಕೊಳ್ಳಲು 20 ಪಟ್ಟು ತುಂಬಬೇಕೆಂಬ ನಿರ್ಬಂಧ ಹಾಕಬಾರದು. ಇದಲ್ಲದೆ ಕೆಲವು ಹಳ್ಳಿಗಳಲ್ಲಿ ಇನಾಂ ಜಮೀನಿಟ್ಟು

(ಶ್ರೀ ಎನ್. ಎ. ಕರಿಲಿಂಗಣ್ಣನವರ್)

ಕೊಂಡಿದ್ದವರು ಸಾರ್ವಜನಿಕರ ಕಟ್ಟಡದ ಸಲುವಾಗಿ 1—2 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಆ ಬಗ್ಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ. ಈಗ ಪುನಃ 20 ಪಟ್ಟು ತುಂಬಬೇಕು. ಅಂತಾ ತಿಳಿಸಿದಲ್ಲಿ ಇದು ಯಾವ ನ್ಯಾಯ ? ಪುಕ್ಕಟ್ಟೆಯಾಗಿ ಜಮೀನು ಕೊಟ್ಟ 20 ಪಟ್ಟು ತುಂಬಿ ಅಂತಾ ಅಂದರೆ ಮಾಲೀಕರು ತುಂಬಲು ಸಾಧ್ಯವಿಲ್ಲ 20 ಪಟ್ಟನ್ನು ಜಮೀನು ಕೊಟ್ಟವರೇಕೆ ತುಂಬಬೇಕು ? ಅವರು ನಾವು ತುಂಬುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಆ ಜಮೀನಿನಮೇಲೆ ಸರಕಾರದ ಸಹಾಯದಿಂದ ಕಟ್ಟಿದ ಇಮಾರತಿ ಆ ಜಮೀನು ಕೊಟ್ಟವನದು ಆಗುವುದು. ಇದರಿಂದ ನಷ್ಟ ಸರಕಾರ ಹಾಗೂ ಸರಕಾರದ್ದು ಆಗುವುದು ಕಾರಣ ಇದನ್ನು ಪರಿಶೀಲಿಸಿ ಸರಿಪಡಿಸ ಬೇಕಾಗಿ ವಿನಂತಿ. ಇದಲ್ಲದೆ ರೈತರಿಗೂ ಸಹ ತಕಾವಿ ಸಾಲ ಬೇಡಿದಲ್ಲಿ 20 ಪಟ್ಟು ತುಂಬಬೇಕೆಂದು ಇರುವ ನಿರ್ಬಂಧವನ್ನು ತಪ್ಪಿಸಿ ರೈತರಿಗೆ ಸಾಲ ದೊರೆಯಲು ಅವಕಾಶ ಮಾಡಿಕೊಡಬೇಕೆಂದು ಸಲಹೆಮಾಡುತ್ತೇನೆ.

ಮೂರನೆಯದಾಗಿ ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಮೊದಲಿದ್ದುದಕ್ಕಿಂತ ಮೂರು ಪಟ್ಟು ನೌಕರರ ಸಂಖ್ಯೆ ಬೆಳೆದಿದೆ, ಆದರೆ ನಮಗೆ ಸ್ವರಾಜ್ಯ ಸಿಕ್ಕುವ ಮುಂಚೆ ಎಷ್ಟು ತೀವ್ರವಾಗಿ ಉತ್ತರ ಸಿಕ್ಕುತ್ತಿತ್ತೋ ಈಗ ಮೂರು ಪಟ್ಟು ಸಿಬ್ಬಂದಿ ಹೆಚ್ಚಿದರೂ ಅಷ್ಟು ತೀವ್ರವಾಗಿ ಸಿಕ್ಕುತ್ತಿಲ್ಲ. ಕಾರಣ ನಮ್ಮ ಶಿಥಿಲತನವೋ ಅಥವಾ ಇನ್ನೇನೋ ತಿಳಿಯದು. ಅಂತೂ ಯಾವ ಕೆಲಸವೂ ಆಗುತ್ತಿಲ್ಲ. ತಲಾಟಿಯಿಂದ ಒಂದು ಕಮ್ಯಾಂಡ್ ಪಡೆಯಬೇಕಾದರೆ ಬಹಳ ಹಣ ಖರ್ಚುಮಾಡಬೇಕು. ಇದರ ಸಲುವಾಗಿ ಒಂದು ಸಲಹೆಮಾಡುತ್ತೇನೆ. ಪ್ರತಿ ವರ್ಷ ಸರಕಾರ ಫಾಳಿ ಕೊಡುವಾಗ ರೈತರಿಗೆ ಕಮ್ಯಾಂಡ್ ಉತ್ತಾರ್ ಒದಗಿಸಬೇಕು. ಅದಿದ್ದರೆ ಸಾಲ ಪಡೆಯಲು ರಿಕಾರ್ಡು ಸರಿಯಾಗಿದೆಯೋ ಇಲ್ಲವೇ ಎಂದು ನೋಡಲು ಅನುಕೂಲವಾಗಿರುತ್ತದೆ. ಈಗ ತಲಾಟಿ ರಿಕಾರ್ಡಿನಲ್ಲಿ ಏನುಬೇಕಾದರೂ ಮಾಡಿ ರೈತರು ಸರ್ಕಲ್ ಆಫೀಸರಕಡೆ ಹೋಗುವಂತೆಮಾಡಿ ಲಂಚ ಸೆಳೆಯಲು ಅವಕಾಶವಿದೆ. ಇದರ ಸಲುವಾಗಿ ಕಮ್ಯಾಂಡ್ ಉತ್ತಾರ ರೈತರಿಗೆ ಕೊಟ್ಟರೆ ಸರಿಯಾಗುತ್ತದೆ. ಮತ್ತೊಂದು ಈಗ ತಲಾಟಿ ಭೂಮಿ ಇರುವ ಜಾಗಕ್ಕೆ ಹೋಗದೆ ಪೀಕ್ ಪಹಣಿ ತಯಾರುಮಾಡುತ್ತಾನೆ ಮನೆಯಲ್ಲೇ ಕುಳಿತು ಅದನ್ನು ಬರೆಯುತ್ತಾನೆ. 10 ಎಕರೆ ಜೋಳವಿದ್ದರೆ ಎರಡು ಎಕರೆ ಎಂದು ಬರೆಯ ಬಹುದು. ಇದರಿಂದ ಮುಂದೆ ಗೊಂದಲವಾಗುತ್ತದೆ, ಲೆವಿ ವಿಚಾರದಲ್ಲಿ ಕಷ್ಟವಾಗುತ್ತದೆ. ಇನ್‌ಕಂಟ್ಯಾಕ್ಸು ತಪ್ಪಿಸಲು ಅದಕ್ಕೆ ತಕ್ಕಂತೆ ಬರೆದಿರಬಹುದು ಎಂಬ ಅಭಿಪ್ರಾಯ ಇದರಿಂದ ಬರುವುದಕ್ಕೆ ಕೂಡ ಅವಕಾಶವಿದೆ. ಈ ದೃಷ್ಟಿಯಿಂದ ಪ್ರತಿ ವರ್ಷ ರೈತರಿಗೆ ಕಮ್ಯಾಂಡ್ ಉತ್ತಾರ ಸಿಕ್ಕುವಹಾಗೆ ಏರ್ಪಾಡು ಮಾಡಬೇಕು.

3-30 P. M.

ಇನ್ನು ನಾಲ್ಕನೇಯದಾಗಿ ಹೇಳುವುದೇನೆಂದರೆ, ಈ ಇಲಾಖೆಯಲ್ಲಿ ಕೆಲವು ಪ್ರಕರಣಗಳು ಹತ್ತು ಹದಿನೈದು ವರ್ಷಗಳಿಂದ ನಿರ್ಣಯವಾಗದೇ ಬಿದ್ದುಕೊಂಡಿವೆ. ಇಂಥ ಪ್ರಕರಣಗಳು ತೀವ್ರವಾಗಿ ನಿರ್ಣಯವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ ಅಭಾವ ಪರಿಸ್ಥಿತಿ ಬಗ್ಗೆ ಹೇಳುತ್ತೇನೆ. ಇಂದು ದೇಶದಲ್ಲಿ ಅಭಾವ ಇದೆ. ದೇಶದಲ್ಲಿ ಎಷ್ಟು ಆಹಾರ ಧಾನ್ಯ ಉತ್ಪತ್ತಿಯಾಗುತ್ತದೆ ಎಂಬುದನ್ನು ಲೆಕ್ಕ ಹಾಕುವುದಕ್ಕೆ ಬ್ರಿಟಿಷರ ಕಾಲದಲ್ಲಿ ನಡೆದು ಕೊಂಡು ಬಂದಂಥ ಅಣೆವಾರಿ ಪದ್ಧತಿಯನ್ನು ಈಗಲೂ ಸಹ ಅನುಸರಿಸುತ್ತಿದ್ದಾರೆ. ಇಂದಿನ ಹೊಸ ಪರಿಸ್ಥಿತಿ ಯಲ್ಲಿ ಹಳೇ ಪದ್ಧತಿಯ ಅಣೆವಾರಿ ಅನುಸರಿಸುವುದು ಸರಿಯಲ್ಲ. ಅಣೆವಾರಿ ಮಾಡುವುದಕ್ಕೆ ಹೊಸ ಪದ್ಧತಿ ಇಟ್ಟುಕೊಳ್ಳುವುದು ಯೋಗ್ಯ. ಯೋಗ್ಯ ರೀತಿಯಲ್ಲಿ ಅಣೆವಾರಿ ಮಾಡುವುದಕ್ಕೆ ಹೊಸ ಪದ್ಧತಿ ಪ್ರಾರಂಭ ಮಾಡಬೇಕೆಂದು ಸಲಹೆಮಾಡಿ ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಈ ಭಾಷಣ ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರುವ ಬೇಡಿಕೆಗಳ ಬಗೆ ಒಂದೆರಡು ಸಲಹೆ ಕೊಡಬಯಸುತ್ತೇನೆ. ಮೊದಲು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ Sheep Development ಸಂಬಂಧವಾಗಿ ಕುರಿಗಳನ್ನು ಕೊಳ್ಳುವಾಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡದೇ ರೇಟು ಗೊತ್ತುಮಾಡಿ ಕುರಿಗಳನ್ನು ಕೊಂಡುಕೊಂಡಿರುವ ಪ್ರಸಂಗ ಅನೇಕ ಇವೆ. ಇಂಥ ಕೆಲವು ಕೇಸುಗಳು ಇಂದು ಕೋರ್ಟಿನಲ್ಲಿ ಸಹ ಇವೆ. ಕುರಿ ಕೊಂಡುಕೊಳುವುದಕ್ಕೆ ಎರಡು ಲಕ್ಷ ರೂಪಾಯಿ ಒದಗಿಸಲಾಗಿದೆ. ಯೋಗ್ಯ ರೀತಿಯಲ್ಲಿ ಉಪಯೋಗಿಸದಿದ್ದರೆ ಹಣ ಅಪವ್ಯಯವಾಗುತ್ತದೆ. ಆದುದರಿಂದ ಇನ್ನು ಮುಂದೆ ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗಬೇಕೆಂದು ಸಲಹೆಮಾಡುತ್ತೇನೆ. ಗುತ್ತಲದಲ್ಲಿ ಇರತಕ್ಕ ಬ್ರೀಡಿಂಗ್ ಸೆಂಟರಿನಲ್ಲಿ ಒಳ್ಳೇ ತಳಿ ಉತ್ತಮ ರೀತಿಯಲ್ಲಿ ಬೆಳೆದದ್ದನ್ನು ನೋಡಿದ್ದೇನೆ. ಒಳ್ಳೇ ತಳಿ ಹೆಚ್ಚಿನ ರೀತಿಯಲ್ಲಿ ಬೆಳಸಬಹುದು. ಯಾಕಂದರೆ, ಇದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಾ ಬಂದಿದ್ದೇವೆ.

ದನಗಳ ಒಳ್ಳೇ ತಳಿ ಬೆಳೆಯುವುದಕ್ಕೆ ತೇಗೂರು ಚಿಂತಾಪುರದಲ್ಲಿ ಇರತಕ್ಕ ಸಂಟರಿನಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೆ ಒಳ್ಳೇ ತಳಿ ಬೆಳೆಯದೇ ಇದ್ದ ಪರಿಸ್ಥಿತಿ ಇದೆ. ಕೋಳಿಯ ಉತ್ತಮ ತಳಿ ಬೆಳೆಯುವುದಕ್ಕೆ ಸಹ ಒಂದು ಸರಿಯಾದ ಉತ್ತಮ ವ್ಯವಸ್ಥೆ ಇಲ್ಲ. ಆದುದರಿಂದ ಇದಕ್ಕೆ ಆದ್ಯತೆಕೊಟ್ಟು ಸರಿಯಾದ ವ್ಯವಸ್ಥೆಮಾಡಿ ಜನರಿಗೆ ಒಳ್ಳೇ ತಳಿ ಕೊಟ್ಟು ಸುಧಾರಿಸುವಂತೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಈಗ ಇರತಕ್ಕ ವೆಟರಿನರಿ ಹಾಸ್ಪಿಟಲ್‌ಗಳು ಬಹಳ ಕಡಿಮೆಯಾಗಿವೆ, ಇವು ಸಾಲದು. ದನಗಳ ಸಂಖ್ಯೆಯ ಪ್ರಮಾಣದಲ್ಲಿ ಸಾಕಷ್ಟು ದನಗಳ ಆಸ್ಪತ್ರೆಗಳು ಇರಬೇಕು. ಸ್ಟಾಕ್‌ಮೆನ್ ಅವರ ಸಂಖ್ಯೆ ಕೂಡ ಕಡಿಮೆಯಾಗಿದೆ. ತಾಲ್ಲೂಕಿಗೆ ಒಂದು ಆಸ್ಪತ್ರೆ ಸಾಕಾಗುವುದಿಲ್ಲ. ಹತ್ತು ಸಾವಿರ ದನಗಳಿಗೆ ಒಂದು ಆಸ್ಪತ್ರೆ ಇರಬೇಕು. ದನಗಳಿಗೆ ರೋಗ ಬಂದು ದೊಡ್ಡ ಪ್ರಮಾಣದಲ್ಲಿ ದನಗಳು ಸಾಯುತ್ತವೆ. ದನಗಳಿಗೆ ಬರುವ ರೋಗಗಳಲ್ಲಿ ರೆಂಡರ್ ಪೆಸ್ಟ ರೋಗದಿಂದ ಹೆಚ್ಚು ದನಗಳು ಸಾಯುತ್ತವೆ. ಬೆಂಗಳೂರಿನಲ್ಲಿ ಸಾವಿರಾರು ರೂಪಾಯಿ ಬೆಲೆ ಬಾಳುವ ದನಗಳು ಈ ರೋಗದಿಂದ ಸತ್ತುಹೋಗಿವೆ. ಈ ರೆಂಡರ್ ಪೆಸ್ಟ ರೋಗ ತಡೆಗಟ್ಟುವುದಕ್ಕೆ ಸರ್ವ ಪ್ರಯತ್ನ ಮಾಡಬೇಕಾದ ಅಗತ್ಯ ಇದೆ. ಮುಂಜಾಗರೂಕತೆ ವಹಿಸಿ ಈ ಅಪಾಯ ಉಂಟಾಗದಂತೆಮಾಡಿ ಈ ರೋಗ ನಿರ್ಮೂಲನಮಾಡಲು ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ಇರತಕ್ಕ ಎಕ್ಸ್‌ಪರ್ಟ್ಸ್‌ರನ್ನು ಅಗ್ರಿಕಲ್ಚರಲ್ ಯನಿವರ್ಸಿಟಿಗೆ ವರ್ಗಾಯಿಸಿದ್ದಾರೆ ಎಂಬ ಸಂಗತಿ ಕಂಡುಬಂದಿದೆ. ಇದರಿಂದ ಸೀರಂ ಇನ್‌ಸ್ಟಿಟ್ಯೂಟಿಕ್ಕೆ ಎಕ್ಸ್‌ಪರ್ಟ್ಸ್ ಇಲ್ಲದೆ ತೊಂದರೆಯಾಗಿದೆ. ಅಲ್ಲಿ ಸಾಕಷ್ಟು ಸಿಬ್ಬಂದಿ ಇಟ್ಟು ಸರಿಯಾದ ರೀತಿಯಲ್ಲಿ ನಡೆಯುವಂತೆ ಮುಂಜಾಗರೂಕತೆ ವಹಿಸಿಬೇಕೆಂದು ಹೇಳುತ್ತೇನೆ. ಯೂನಿವರ್ಸಿಟಿಗೆ ವರ್ಗಾಯಿಸಿದಂಥ ಎಕ್ಸಪರ್ಟ್ಸ್‌ರನ್ನು ಹಿಂತಿರುಗಿ ಕರೆಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಕೋಳಿ ಅಭಿವೃದ್ಧಿಗೆ ಹೆಚ್ಚು ಆದ್ಯತೆಕೊಟ್ಟು ಸಹಾಯಮಾಡಬೇಕು. ಸಹಾಯ ಧನ ಕೊಡುವಾಗ ಸರಿಯಾದ ಮೇಲ್ವಿಚಾರಣೆ ಇರಬೇಕು. ಕೆಲವು ಕಡೆ ಕೋಳಿ ಇಲ್ಲದೆ ಇರತಕ್ಕ ಪೋಲ್ಟ್ರೀ ಫಾರ್ಮಗಳಿಗೆ ಯಾರದೋ ಹೆಸರಿನಲ್ಲಿ ಧನ ಸಹಾಯ ಕೊಡಲಾಗಿದೆ. ಇದು ಸರಿಯಲ್ಲ. ಕಟ್ಟುನಿಟ್ಟಾದ ಮೇಲ್ವಿಚಾರಣೆ ಮಾಡದೆ ಸಹಾಯ ಮಾಡುವುದು ಅನ್ಯಾಯ ಮತ್ತು ಹಣದ ಅಪವ್ಯಯವಾಗುತ್ತದೆ. ಸರಕಾರ ಕೊಡತಕ್ಕ ಹಣ ಸದುಪಯೋಗವಾಗುವ ಹಾಗೆ ಎಚ್ಚರಿಕೆ ವಹಿಸಬೇಕು.

ಪಶು ಸಂಗೋಪನೆ ಇಲಾಖೆಯಲ್ಲಿ ತೃಪ್ತಿಕರವಾಗಿ ಕೆಲಸ ನಡೆದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಕೆಲವು ಕಡೆ ಹಣ ದುರುಪಯೋಗವಾಗಿದೆ, ಕೆಲವುಕಡೆ ಮೇಲ್ವಿಚಾರಣೆಯ ಅಭಾವ ಕಂಡುಬರುತ್ತದೆ. ಈ ನ್ಯೂನತೆಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕು.

ಇನ್ನು ಹಾಲಿನ ಕೇಂದ್ರದ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಧಾರವಾಡ ಹುಬ್ಬಳ್ಳಿ ನಗರಗಳು ಬೃಹದಾಕಾರವಾಗಿ ಬೆಳೆದು ಜನಸಂಖ್ಯೆ ಹೆಚ್ಚಾಗುತ್ತಿದೆ. ಈಗಿರುವ ಯೋಜನೆಯ ಪ್ರಕಾರ ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಧನ ಸಹಾಯ ಮಾಡಲಾಗುತ್ತದೆ. ಅವರಿಂದ ಹಾಲನ್ನು ಪಡೆದು ಸರಬರಾಜುಮಾಡುವ ವ್ಯವಸ್ಥೆ ಇದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಲು ಸರಬರಾಜು ಮಾಡುವುದಕ್ಕೆ ದನಗಳ ಸಂಖ್ಯೆ ಹೆಚ್ಚು ಮಾಡಬೇಕಾಗುತ್ತದೆ. ಧಾರವಾಡ ಮತ್ತು ಹುಬ್ಬಳ್ಳಿ ಹಾಲಿನ ಯೋಜನೆಯು ಇನ್ನೂ ಪ್ರಿಲಿಮಿನರಿ ಸ್ಟೇಜಿನಲ್ಲಿದೆ. ಈ ಯೋಜನೆಗೆ ಹೆಚ್ಚು ಹಣ ಒದಗಿಸಿ ಹಾಲು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಭೂ ಕಂದಾಯದ ವಿಚಾರ ಹೇಳುತ್ತೇನೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಐಕಳ ಅವರು ಮಾತನಾಡುತ್ತಾ ಈ ವಿಚಾರ ವಿಸ್ತಾರವಾಗಿ ಹೇಳಿದ್ದಾರೆ. ಅವರು ಹೇಳಿದ ಹಾಗೆ ದೊಡ್ಡದಾಗಿ ಇರತಕ್ಕ ತಾಲ್ಲೂಕುಗಳನ್ನು ಒಡೆದು ಚಿಕ್ಕ ತಾಲ್ಲೂಕು ಮಾಡಬೇಕು. ನಮ್ಮ ರಾಜ್ಯದಲ್ಲಿ ಧಾರವಾಡ ಜಿಲ್ಲೆಯು ದೊಡ್ಡದಾಗಿದೆ. ಈ ಧಾರವಾಡ ಜಿಲ್ಲೆಯಲ್ಲಿ 16 ತಾಲ್ಲೂಕುಗಳಿವೆ. ಈ ದೊಡ್ಡದಾದ ಜಿಲ್ಲೆಯನ್ನು ಒಡೆದು ಎರಡು ಜಿಲ್ಲೆಗಳನ್ನಾಗಿ ಮಾಡಿದರೆ ಆಡಳಿತವು ಸುಗಮವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ. ಒಂದು ಲಕ್ಷ ಜನ ಸಂಖ್ಯೆಗೆ ಒಂದು ತಾಲ್ಲೂಕು ಇರುವಂತೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಎರಡು ತಾಲ್ಲೂಕುಗಳನ್ನು ಬೇರ್ಪಡಿಸಿದ್ದಾರೆ. ಅದೇ ರೀತಿಯಾಗಿ ಬೇರೆಕಡೆ ಸಹ ಮಾಡುವುದು ಒಳ್ಳೆಯದು. ಇದಲ್ಲದೆ ಒಂದು ಜಿಲ್ಲೆಯಲ್ಲಿ ಎಂಟು ಹತ್ತು ತಾಲ್ಲೂಕುಗಳು ಇರುವಹಾಗೆ ಮಾಡುವುದಕ್ಕೆ ರಾಜ್ಯಾದ್ಯಂತ ಸರ್ವೆ ನಡೆಸಬೇಕು. ಈ ರೀತಿ ಮಾಡಿದರೆ ಆಡಳಿತ ಸುಗಮವಾಗಿ ನಡೆಯುತ್ತದೆ.

ಇನ್ನು ಶಾನುಭೋಗರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಕೆಲವು ಕಡೆ ನೇಮಕಮಾಡಿದ ತಲಾಟಿಗಳು ಪೀಕ್ ಪಾಹಣಿ ಸರಿಯಾಗಿ ಬರೆದಿಲ್ಲ. ಈ ತಲಾಟಿಗಳಿಗೆ 80 ರೂಪಾಯಿ ಸಂಬಳ ಅಷ್ಟೇ ದೊರೆಯುತ್ತದೆ. ಅವರು ಏಳು ಹಳ್ಳಿಗಳನ್ನು ಸುತ್ತಿ ಕೆಲಸ ಮಾಡಬೇಕಾಗುತ್ತದೆ. ಇದಲ್ಲದೆ ಅವರು ತಾಲ್ಲೂಕ ಹೆಡ್ ಕ್ವಾರ್ಟರ್‌ಸ್ಗೆ ಬಂದಾಗ್ಗೆ ಅವರಿಗೆ ಟಿ. ಎ. ಡಿ. ಎ. ಯಾವುದೂ ದೊರೆಯುವುದಿಲ್ಲ. ಇದರಿಂದ ಅವರಿಗೆ ಕಷ್ಟವಾಗಿದೆ,

(ಶ್ರೀ ಸಿದ್ದಯ್ಯ ಕಾಶೀಮಠ್)

ಆದುದರಿಂದ ಅವರಿಗೆ ಒಂದು ಪೇ ಸ್ಕೇಲ್ ಕೊಡುವ ಬಗ್ಗೆ ವಿಚಾರಮಾಡಬೇಕು. ಹಾಗು ಟಿ. ಎ., ಡಿ. ಎ. ಕೊಡುವುದಕ್ಕೆ ಅನುಕೂಲಮಾಡಿ ಕೊಡಬೇಕು. ಮತ್ತು ಅವರ ದರ್ಜೆ ಕೂಡ ಗೊತ್ತುಮಾಡಬೇಕು. ಒಬ್ಬ ತಲಾಟಿಗೆ 7 ಹಳ್ಳಿಗಳನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ವಿಚಾರಮಾಡಬೇಕು. ಹಿಂದಿನ ಕಾಲದಲ್ಲಿ ಒಂದು ಹಳ್ಳಿಗೆ ಒಬ್ಬ ಪಟೇಲ ಒಬ್ಬ ಶಾನುಭೋಗ ಇರುತ್ತಿದ್ದರು. ಈಗ 7 ಹಳ್ಳಿಗಳಿಗೆ ಒಬ್ಬ ಪಟೇಲ ಒಬ್ಬ ಶಾನುಭೋಗ ಇದ್ದರೆ ಕೆಲಸಮಾಡಲು ಬಹಳ ಕಷ್ಟವಾಗುತ್ತದೆ. ಇವರಿಗೆ ಕೆಲಸಮಾಡಲು ಸುಗಮವಾಗುವಂತೆ ಸರ್ಕಾರದವರು ಒಂದು ನಿಯಮವನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಬೊಂಬಾಯಿ ಕರ್ನಾಟಕದ ಕಡೆ ಓಲೆಕಾರರು ಎಂದು ಇದ್ದಾರೆ. ಇವರ ಬಗ್ಗೆ ಯಾವರೀತಿಯ ನಿಯಮಗಳನ್ನೂ ಸಹ ಮಾಡದೆ ಪಟೇಲ, ಶಾನುಭೋಗರ ಬಗ್ಗೆ ತೆಗೆದುಕೊಂಡಿರುವ ಹಾಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಪಟೇಲ ಶಾನುಭೋಗರಿಗೆ ಯಾವರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಒಂದು ನಿರ್ಣಯವನ್ನು ಕೈಗೊಂಡಿದ್ದೀರೋ ಅದೇರೀತಿ ಇವರಿಗೂ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೊಡಬೇಕು ಎಂದು ಹೇಳುತ್ತೇನೆ.

ಹಳ್ಳಿಗಳಲ್ಲಿರುವ ಚಾವಡಿಗಳನ್ನು ರೆವಿನ್ಯೂ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಇವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ಬಿಟ್ಟುಕೊಡದೆ ಇರುವುದರಿಂದ ಇವುಗಳು ಮುರಿದು ಬೀಳುವ ಪರಿಸ್ಥಿತಿಗೆ ಬಂದಿದೆ. ಇದರ ಬಗ್ಗೆ ನಿರ್ದಿಷ್ಟವಾದ ಒಂದು ನಿರ್ಣಯವನ್ನು ಮಾಡಿ, ಎಲ್ಲಾ ಚಾವಡಿಗಳನ್ನೂ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಬೇಕು ; ಅಥವಾ ರೆವಿನ್ಯೂ ಇಲಾಖೆಯವರೇ ರಿಪೇರಿ ಮಾಡಿಸಲಿಕ್ಕೆ ಮುಂದೆ ಬರಬೇಕು. ಇಲ್ಲದಿದ್ದರೆ ಇನ್ನು ಸ್ವಲ್ಪ ದಿವಸಗಳಲ್ಲಿ ಎಲ್ಲಾ ಚಾವಡಿಗಳು ಬಿದ್ದುಹೋಗಬಹುದು. ನಮ್ಮ ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ಈ ಚಾವಡಿಗಳು ಜಾಸ್ತಿ ಇವೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟು ಅವುಗಳ ಮುಖಾಂತರ ಚಾವಡಿಗಳ ರಿಪೇರಿ ಕೆಲಸವನ್ನು ಮಾಡಿಸುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಕ್ಷಾಮ ಪರಿಹಾರದ ಬಗ್ಗೆ ಹೇಳಬೇಕಾದರೆ, ಕೆಲವು ಕಡೆಗಳಲ್ಲಿ ರೈತರುಗಳು 3__4 ವರ್ಷಗಳಿಂದಲೂ ಬರಗಾಲಕ್ಕೆ ತುತ್ತಾಗಿರುವುದರಿಂದ, ಬಹಳ ಕಷ್ಟದಲ್ಲಿದ್ದಾರೆ. ಉಳುಮೆ ಕಾಲದಲ್ಲಿ ಅಂದರೆ 6 ತಿಂಗಳು ಹೇಗೋ ಜೀವನಮಾಡುತ್ತಾರೆ ; ಉಳಿದ ಆರು ತಿಂಗಳಲ್ಲಿ ಅನ್ನವಿಲ್ಲದೆ ಸಾಯುವ ಸ್ಥಿತಿಗೆ ಬರುತ್ತಾರೆ. ಆದ್ದರಿಂದ ಈ 6 ತಿಂಗಳ ಮಟ್ಟಿಗಾದರೂ ಇವರಿಗೆ ಕಾಮಗಾರಿಗಳನ್ನು ಒದಗಿಸಿಕೊಡಬೇಕು. ಈಗ ಈ ಕ್ಷಾಮ ಪರಿಹಾರ ಕಾಮಗಾರಿಗಳು ಎಂದರೆ ಕೇವಲ ಕೆರೆ ಕುಂಟೆಗಳು ಇದ್ದರೆ ಅವುಗಳನ್ನು ದುರಸ್ತಿಗಾಗಿ ತೆಗೆದುಕೊಳ್ಳಬೇಕು ಎಂದು ಮಾಡಿದ್ದೀರಿ. ಆದರೆ ಧಾರವಾಡ ಜಿಲ್ಲೆಯಲ್ಲಿ ಕೆಲವು ತಾಲ್ಲೋಕುಗಳಲ್ಲಿ ಈ ರೀತಿಯ ಕೆರೆ ಹೆಚ್ಚು ಇಲ್ಲ. ಆದ್ದರಿಂದ ಅಲ್ಲಿರುವ ಜನರಿಗೆ ಕೆಲಸ ಕೊಡುವುದಕ್ಕೆ ರಸ್ತೆಗಳ ಕೆಲಸವನ್ನಾದರೂ ತೆಗೆದುಕೊಳ್ಳಬೇಕು. ಇದರಿಂದ ಸಾವಿರಾರು ಜನರು ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ.

ಅಫಾರಸ್ಟೇಷನ್‌ಗೆ ಎಂದರೆ, ಕಾಡು ಬೆಳೆಸುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಹೋದ ಸಾಲಿಗಿಂತಲೂ ಈ ಸಾಲಿನಲ್ಲಿ ಬಹಳ ಕಡಿಮೆ ಕೆಲಸ ತೆಗೆದುಕೊಂಡಿದ್ದೀರಿ, ಇದರಿಂದ ಹೆಚ್ಚು ಜನ ಲೇಬರರ್ಸ್‌ಗೆ ಕೆಲಸವಿಲ್ಲದೆ ಸುಮ್ಮನೆ ಕೂಡುವ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಹೆಚ್ಚಿನ ಕೆಲಸವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ಲೇಬರರ್ಸ್ ಕೆಲಸವಿಲ್ಲದೆ ಅವರು ಸಾಯುವ ಸ್ಥಿತಿಗೆ ಬಂದಿರುವುದರಿಂದ ಅದರಿಗೆ ಸರಿಯಾಗಿ ಕೆಲಸವನ್ನು 6 ತಿಂಗಳ ಮಟ್ಟಿಗಾದರೂಕೊಟ್ಟು ಸಲಹುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).__ಸ್ವಾಮಿ, ಮಾನ್ಯ ಅಧ್ಯಕ್ಷರೆ, ಈ ಮಾನ್ಯ ಸಭೆಯಲ್ಲಿ ಚರ್ಚೆಯಾಗುತ್ತಿರುವ ಈ ರೆವಿನ್ಯೂ ಇಲಾಖೆಯ ಡಿಮ್ಯಾಂಡ್‌ಮೇಲೆ ನನ್ನ ಹಲವು ಸ್ನೇಹಿತರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಡಿಮ್ಯಾಂಡ್‌ನ್ನು ಅನುಮೋದಿಸುತ್ತಾ, ನನ್ನ ಅಭಿಪ್ರಾಯ ಹೇಳಲು ಇಷ್ಟಪಡುತ್ತೇನೆ. ನಮ್ಮ ಬೆಂಗಳೂರು ದಕ್ಷಿಣ ತಾಲ್ಲೋಕ್ ಮತ್ತು ಉತ್ತರ ತಾಲ್ಲೋಕ್‌ನಲ್ಲಿ ಜಮೀನುಗಳನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು, ಮತ್ತು ಪ್ಯಾಕ್ಟರಿಯವರು, ತಮಗೆ ಇಷ್ಟಬಂದ ರೇಟನ್ನು ತಿಳುವಳಿಕೆ ಇಲ್ಲದೆ ಇರುವ ರೈತರುಗಳಿಗೆ ಕೊಟ್ಟು ಅವರ ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಹೊಸದಾಗಿ ಕಾಲೇಜು ಕಟ್ಟಬೇಕೆಂದು ಸೆಂಟ್ ಜೋಸೆಫ್ ಕಾಲೇಜಿನವರು ನೂರಾರು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಬಡವರು ಅಗ್ಗವಾಗಿ ಸಿಕ್ಕಿದ್ದಾರೆ ಎಂದು ತಿಳಿದುಕೊಂಡು, ಹೊರಗಡೆ ಒಂದು ಎಕರೆಗೆ 40__50 ಸಾವಿರ ರೂಪಾಯಿಗಳು ಇದ್ದರೆ, ಇವರಿಗೆ ಎಕರೆಗೆ 4__5 ಸಾವಿರಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ. ತಾವು ಇದನ್ನು ಶೀಘ್ರವಾಗಿ ತಮ್ಮ ಗಮನಕ್ಕೆ ತೆಗೆದು

ಕೊಂಡು ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕು. ಎಚ್.ಎ.ಎಲ್. ಇವತ್ತು ಎಚ್.ಎಂ.ಟಿ. ಕಡೆಯಲ್ಲೂ ಜನರ ಅನುಕೂಲಗಳನ್ನು ಸಹ ನೋಡದೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿಯಾದರೆ ಅವರುಗಳು ಜೀವನ ಮಾಡುವುದಾದರೂ ಹೇಗೆ ? ಈ ವಿಚಾರವಾಗಿ 4 ವರ್ಷದಿಂದಲೂ ಹೇಳುತ್ತಿದ್ದೇನೆ. ಯಾವ ಒಬ್ಬ ಅಧಿಕಾರಿಯೂ ಸಹ ಈ ವಿಚಾರದಲ್ಲಿ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ಬಹಳ ವಿನಯದಿಂದ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಇದಕ್ಕೋಸ್ಕರವಾಗಿ ಒಂದು ರೆವಿನ್ಯೂ ಕಮಿಟಿಯನ್ನು ಮಾಡಿ, ಅದರ ಮೂಲಕ ರೈತರಿಗೆ ಏನು ಅನುಕೂಲಗಳು ಸಿಗಬೇಕೋ ಅದನ್ನು ತಾವು ಮಾಡಿಸಿ ಕೊಡಬೇಕು. ನೀವು ಸಹ ರೈತರಾಗಿದ್ದೀರಿ, ರೈತರ ವಿಷಯ ತಿಳಿಯದೇ ಇರುವವರಲ್ಲ. ದಯವಿಟ್ಟು ಏನಾದರೂ ಪರಿಹಾರ ಮಾಡಿಕೊಡಬೇಕೆಂದು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ. ದರಖಾಸ್ತಿನಲ್ಲಿ ಯಾರಾದರೂ ಒಬ್ಬ ಬಡ ರೈತ ಸ್ವಲ್ಪ ಜಮೀನನ್ನು ಕೇಳಿದರೆ ಯಾವ ಅಧಿಕಾರಿಯೂ ಸಹಾಯ ಮಾಡುವುದಿಲ್ಲ. ಯಾರಾದರೂ ಸಾಹುಕಾರರು ಸಹಾಯ ಮಾಡಿದರೆ ಅವರಿಗೆ ಅನುಕೂಲವಾಗುತ್ತಿದೆಯೇ ಹೊರತು ಸರ್ಕಾರ ದಿಂದ ಸಹಾಯವಾಗುತ್ತಿಲ್ಲ. ತಾವು ಬಡವರಿಗೆ ತಮ್ಮ ಕಾಲದಲ್ಲಿ ಸಹಾಯ ಮಾಡಿದರೆ ತಮಗೆ ಒಳ್ಳೆಯ ಹೆಸರು ಬರುತ್ತದೆ. ತಾಲ್ಲೋಕ್ ಆಫೀಸ್‌ಗೆ ರೈತ ಏನಾದರೂ ಬಂದರೆ ಅಲ್ಲಿಯ ಅಧಿಕಾರಿಗಳು ರೈತನನ್ನು ಮೂಗುಪ್ರಾಣಿಯಂತೆ ಕಾಣುತ್ತಾರೆ. ಪ್ರಜಾ ಸರ್ಕಾರ ಬಂದರೂ ಸಹ ನಮ್ಮ ತಾಲ್ಲೋಕ್ ಆಫೀಸ್‌ಗಳಲ್ಲಿ ಯಾವ ಬದಲಾವಣೆಗಳೂ ಆಗಿಲ್ಲ. ನಮ್ಮ ತಾಲ್ಲೋಕ್ ಆಫೀಸ್‌ನಲ್ಲಿ ಖಾತೆಗಳನ್ನು ಟ್ರಾನ್ಸ್‌ಫರ್ ಮಾಡುವ ಶ್ರೀ ನರಸಪ್ಪ ಎಂಬ ಗುಮಾಸ್ತ ಇದ್ದಾನೆ. ಈತ ಆಫೀಸ್‌ನಲ್ಲಿ ರೈತರ ಹತ್ತಿರ ಮಾತನಾಡುತ್ತಿದ್ದರೆ ರೋಡಿಗೆ ಕೇಳಿಸುತ್ತದೆ, ಅಷ್ಟೊಂದು ಒರಟಾಗಿ, ಜೋರಾಗಿ ಮಾತನಾಡುತ್ತಿರುತ್ತಾನೆ. ಆತನಿಗೆ ಸರಿಯಾದ ತಿಳುವಳಿಕೆ ಕೊಟ್ಟು ಈರೀತಿಯೆಲ್ಲಾ ಆಗದಹಾಗೆ ನೋಡಿಕೊಳ್ಳಬೇಕೆಂದು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಸ್ಕೇರ್‌ಸಿಟಿ ಕಂಡೀಷನ್ಸ್ ಬಗ್ಗೆ ನಮ್ಮ ತಾಲ್ಲೋಕಿನಲ್ಲಿ ಏನೇನು ಕೆಲಸಗಳನ್ನು ಮಾಡಿಸಬೇಕು ಎಂದು ನೋಡಲು ಶ್ರೀಮಾನ್ ಆಲೂರು ಹನುಮಂತಪ್ಪನವರು ಬಂದಿದ್ದರು. ಆದರೆ ಇದುವರೆಗೆ ನಮ್ಮ ತಾಲ್ಲೋಕಿನಲ್ಲಿ ಯಾವ ಕೆಲಸಗಳನ್ನೂ ತೆಗೆದುಕೊಂಡಿಲ್ಲ. ಈಗಿರುವ ತಹಸೀಲ್‌ದಾರರಿಂದ ಈ ಬಗ್ಗೆ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ಉಳಿದಿದೆ ಎಂದು ಒಂದು ರಿಪೋರ್ಟನ್ನು ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. ;ನಮ್ಮ ಕಡೆಯಲ್ಲಿ ಬೆಳೆಯೆಲ್ಲಾ ಹಾಳಾಗುತ್ತಿದೆ ಎಂದು ಹೇಳಿದರೆ, ನೋಡೋಣ ಬನ್ನಿ, ನೋಡೋಣ ಬನ್ನಿ ಎಂದು ಹೇಳುತ್ತಾರೆಯೇ ಹೊರತು, ಇದುವರೆಗೆ ಯಾವ ಸಹಾಯವನ್ನೂ ಮಾಡಿಲ್ಲ. ಡೀಸೆಲ್ ಪಂಪ್‌ಸೆಟ್ಟುಗಳು ಎಂದು 25ನ್ನು ತೆಗೆದುಕೊಂಡು ರೈತರಿಗೆ ಕೊಟ್ಟಿದ್ದಾರೆ, ಒಂದೂ ಸಹ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಹಳೆಯವಕ್ಕೆ ಬಣ್ಣ ಹಚ್ಚಿ ಕೊಟ್ಟಿದ್ದಾರೋ ಏನೋ, ಅವುಗಳಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ದಯವಿಟ್ಟು ತಾವು ಅವುಗಳನ್ನು ತರಿಸಿ ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಸೆಂಟ್ ಜೋಸೆಫ್ ಕಾಲೇಜಿನವರು ನೂರಾರು ಎಕರೆ ಜಮೀನನು ಸ್ವಾಧೀನಪಡಿಸಿಕೊಂಡು, ಸಂಬಂಧಪಟ್ಟವರಿಗೆ ಸ್ವಲ್ಪವೂ ಹಣವನ್ನು ಇದುವರೆಗೆ ಕೊಟ್ಟಿಲ್ಲ. ಇದರಿಂದ ಸಂಬಂಧಪಟ್ಟ ರೈತರುಗಳಿಗೆ ಬೆಳೆ ಬೆಳೆಯುವುದಕ್ಕೂ ಆಗುತ್ತಿಲ್ಲ. ಆ ಜಮೀನಿನಲ್ಲಿ ರೈತ ಬೆಳೆಯನ್ನಾದರೂ ಬೆಳೆದುಕೊಳ್ಳಬಹುದಾಗಿತ್ತು. ಆ ರೈತ ಪ್ರತಿದಿನ ಬಂದು ನನ್ನ ಪ್ರಾಣ ತಿನ್ನುತ್ತಾನೆ. ನನ್ನ ಮಾತು ತಾವು ಕೇಳುತ್ತಾ ಇಲ್ಲ. ನಾನು ಏನು ಮಾಡುವುದು ? ರೈತರು ನನ್ನನ್ನು ಸುಮ್ಮನೆ ಬಿಡುತ್ತಾರೆಯೇ. ಅಷ್ಟು ಅನಾದರಣೆ ಮಾಡಿದರೆ ಹೇಗೆ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವುದು ನಿಜ. ಆದರೆ ನಾನು ಬರುವುದಕ್ಕೆ ಮೊದಲೇ ಆ ಜಮೀನನ್ನು ಅಕ್ವೈರ್ ಮಾಡಿ ಸೆಂಟ್ ಜಾನ್ ಕಾಲೇಜಿಗೆ ಅದನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಜೋಡಿದಾರರು ಕೋರ್ಟಿನಲ್ಲಿ ಹೋಗಿ ಕಾಂಪನ್ಸೇಷನ್ ವಿಚಾರ ತೊಂದರೆಗೆ ಇಟ್ಟುಕೊಂಡಿದೆ. ಕೋರ್ಟ್‌ನಲ್ಲಿ ಇರುವಾಗ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಅಂಥ ಸಂದರ್ಭದಲ್ಲಿ ಸ್ಟೇ ಮಾಡಿಸಿ ನಿಲ್ಲಿಸಿ. ಅವರಿಗೆ ಬೇರೆ ನೂರಾರು ಎಕರೆ ಜಮೀನು ಇದೆ, ಅದರಲ್ಲಿ ಕಟ್ಟಿಸಬಹುದಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಟೇ ಮಾಡುವ ಸ್ಟೇಜ್ ಒಂದು ಇದೆ. ಅವಾರ್ಡ್ ಆಗಿ ಜಮೀನನ್ನು ಹ್ಯಾಂಡ್ ಓವರ್ ಮಾಡುವ ಸ್ಟೇಜಿನಲ್ಲಿ ಸ್ಟೇ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಯಾರೇ ಆಗಲಿ ರೂಲ್ಸ್ ತಪ್ಪಿ ನಡೆದರೆ ನಾವು ಏನು ಮಾಡುವುದಕ್ಕಾಗುತ್ತದೆ! ರೈತರ ಕಷ್ಟ ಸುಖ ಹೇಳಿದೆ. ಇನ್ನು ತಮ್ಮ ಇಷ್ಟ. ಫ್ಯಾಕ್ಟರೀಸ್ ಕಡೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ ಒಂದೊಂದು ಮೈಲಿ ದೂರದಿಂದ ನೀರು ತಂದು ಕುಡಿಯುತ್ತಾರೆ ಬೇಸಿಗೆ ಕಾಲದಲ್ಲಿ ಅವರನ್ನು ಕೇಳುವವರೇ ದಿಕ್ಕಿಲ್ಲ. ಅಲ್ಲಿ ಓಡಾಡುವುದಕ್ಕೆ ದಾರಿ ಇಲ್ಲ. ಫ್ಯಾಕ್ಟರಿಯಲ್ಲಿ ಅವರಿಗೆ ಕೆಲಸ ಕೊಡಿಸಿ ಎಂದರೆ ಅದೂ ಕೊಡಿಸುವುದಿಲ್ಲ. ಇದಕ್ಕೆ ಒಂದು ಕಮಿಟಿ ಮಾಡಿಸಿ, ಬೆಂಗಳೂರು ನಾರ್ತ್ ತಾಲ್ಲೂಕು ಮತ್ತು ಸೌತ್ ತಾಲ್ಲೂಕು ಗಳಲ್ಲಿ ಭೂಮಿ ಅಕ್ವಿಸಿಷನ್ ಮಾಡುವಾಗ, ರೈತರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು. ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡುವಾಗ, ಸರಿಯಾಗಿ ದುಡ್ಡು ಕೊಡಿಸಿ. ಅಲ್ಲಿಯ ಅಜುಬಾಜಿನಲ್ಲಿ ಎಷ್ಟು

(ಶ್ರೀ ಡಿ. ಮುನಿಚಿನ್ನಪ್ಪ)

ದುಡ್ಡು ಬರುತ್ತದೋ ಅಷ್ಟು ಕೊಡಿಸಿ. ಅಲ್ಲಿ ಚದರಗಜಕ್ಕೆ 80—100 ರೂಪಾಯಿಗಳ ಬೆಲೆ ಇದೆ. ಅದನ್ನು ಅವರಿಗೆ ಕೊಡಿಸಿ. ರೈತರು ನಿಮ್ಮನ್ನು ಹರಸುತ್ತಾರೆ. ಮೂರು ವರ್ಷಗಳಿಂದ ಒಂದು ಬಾವಿ ಮಾಡಿಸುವುದಕ್ಕೆ ರಿಕಾರ್ಡ್ ಬಿಲ್ಡ್ ಅಪ್ ಮಾಡಿದೆ. ಅದನ್ನು ಮಾಡಿಸಿ ಕೊಡಬೇಕು. ರೈತರ ಕಷ್ಟಸುಖ ನೋಡಬೇಕು. ಜಮೀನು ತೆಗೆದುಕೊಳ್ಳುವಾಗ ಬಡವರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಸ್ವಾಮಿ, ಅಧ್ಯಕ್ಷರೆ, ರೆವಿನ್ಯೂ ಡಿಮ್ಯಾಂಡಿನ ಮೇಲೆ ಒಂದೆರಡು ಮಾತು ಆಡಬೇಕೆಂದಿದ್ದೇನೆ. ಸ್ವಾಮಿ, ನಮ್ಮ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಎಷ್ಟೋ ಬಡತನದಿಂದ ರೈತರು ಇದ್ದಾರೆ ಕೆಲವರಿಗೆ ಭೂಮಿ ಕೊಟ್ಟಿದ್ದಾರೆ. ಅರ್ಧ ಜನರಿಗೆ ಪಟ್ಟ ಆಗಿದೆ; ಇನ್ನು ಅರ್ಧ ಜನರಿಗೆ ಆಗಿಲ್ಲ. ಏನು ಕಾರಣವೋ ಗೊತ್ತಾಗಲಿಲ್ಲ. ಆ ಜನರು 8—10 ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿದ್ದಾರೆ. ಗಿಡ ಕಡಿದು ಭೂಮಿಯನ್ನು ಚೆನ್ನಾಗಿ ಮಾಡಿದ್ದಾರೆ. ಅವರ ಕಡೆಯಿಂದ ಕಂದಾಯ ತೆಗೆದುಕೊಳ್ಳುತ್ತಿದ್ದಾರೆ. ಆದರೂ ಆ ರೈತರಿಗೆ ಭೂಮಿ ಸಾಗು ಮಾಡಬೇಡಿ ಎಂದು ನೋಟೀಸ್ ಕೊಡುತ್ತಿದ್ದಾರೆ. ಏನು ಕಾರಣವೋ ಗೊತ್ತಾಗುವುದಿಲ್ಲ. ಆದ್ದರಿಂದ ಅದನ್ನು ಸರಿಪಡಿಸಬೇಕು ಎಂದು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಅಲ್ಲಿ ಅಧಿಕಾರಿಗಳು ಒಬ್ಬರಿಗೆ ಒಂದು ತರಹ ಇನ್ನೊಬ್ಬರಿಗೆ ಇನ್ನೊಂದು ತರಹ ಮಾಡುತ್ತಾರೆ. ಜನರು ಹೋದರೆ ಯಾರೂ ಕೇಳುವವರೇ ಇಲ್ಲ. ಅದರ ಸಲುವಾಗಿ ತಾವು ಆರ್ಡರ್ ಮಾಡಿ ಅಲ್ಲಿರುವ ಹರಿಜನರಿಗೂ ಅನುಕೂಲ ಮಾಡಬೇಕು ಎಂದು ಹೇಳುತ್ತೇನೆ. ಕೆಲವರು ಅದು ಫಾರೆಸ್ಟ್ ಲ್ಯಾಂಡ್ ಎಂದು ಹೇಳುತ್ತಾರೆ, ಮತ್ತೆ ಕೆಲವರು ರೆವಿನ್ಯೂ ಲ್ಯಾಂಡ್ ಎಂದು ಹೇಳುತ್ತಾರೆ. ಇವರಲ್ಲಿ ಹೋದರೆ ಅದು ಅವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ; ಅವರಲ್ಲಿ ಹೋದರೆ ಇವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ. ಏನು ಕಾರಣವೋ ಗೊತ್ತಾಗುವುದಿಲ್ಲ. ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಾಸೀಲ್ದಾರರಿಗೂ ಆರ್ಡರ್ ಕೊಟ್ಟು, ಇದುವರೆಗೆ ಯಾರು ಹರಿಜನರು 8—10 ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿರುತ್ತಾರೋ ಅವರಿಗೆ ಜಮೀನು ಕೊಟ್ಟು ಪಟ್ಟ ಮಾಡಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಾಲ್ಕು ವರ್ಷಗಳಿಂದ ಈ ವಿಚಾರ ಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ. ಇದುವರೆಗೆ ಏನೂ ಮಾಡಿಲ್ಲ. ರಾಯಚೂರು ಬಹಳ ಬಡತನದ ಪ್ರದೇಶ. ಅದು ಬಹಳ ಹಿಂದುಳಿದಿದೆ. ಅಲ್ಲಿ ಹರಿಜನರಿಗೆ ಭೂಮಿ ಕೊಟ್ಟು ಪಟ್ಟ ಮಾಡಿಸಿ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಹಾಲಿನ ಸೊಸೈಟಿ ಮಾಡಿದ್ದರೆ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಬಯಸುತ್ತೇನೆ. ಅವರಿಗೆ ಹಸು, ಕರುಗಳು ಎಲ್ಲಾ ನಮ್ಮ ಸರ್ಕಾರದವರು ಒದಗಿಸಿಕೊಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಇದು ರೆವಿನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟದ್ದು. ಅವರು ಮನಸ್ಸು ಮಾಡಿ ಹರಿಜನರಿಗೆ ತ್ವರಿತವಾಗಿ ಎಲ್ಲಾ ಅನುಕೂಲಗಳನ್ನು ಮಾಡಿಸಿಕೊಡಬೇಕು. ಜಿಲ್ಲಾಧಿ ಕಾರಿಗಳು ಹರಿಜನರಿಗೆ ಪಟ್ಟ ಮಾಡಿಸಿಕೊಡಬೇಕು ಎಂದು ಆರ್ಡರ್ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕೋ-ಆಪರೇಟಿವ್ ಸೊಸೈಟಿಗೆ ಹೆಚ್ಚಿಗೆ ಸಹಾಯ ಮಾಡಿ ಅಭಿವೃದ್ಧಿ ಪಡಿಸಬೇಕು ಎಂದು ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನಮಸ್ಕಾರಗಳನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಾರಿ ಸಂಸ್ಥಾನದ ನಾನಾ ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ಒದಗಿದೆ. ಅದಕ್ಕಾಗಿ ಅಲ್ಲಿನ ಜನರಿಗೆ ಸರ್ಕಾರದವರು ಸರಿಯಾದ ಕೆಲಸ ಕಾರ್ಯಗಳನ್ನು ಸಾಕಷ್ಟು ಒದಗಿಸದೇ ಈ ಅಧಿಕಾರಿ ಗಳು ಕಳಿಸಿದಂಥ ಕೆಲವು ಅಂಕಿ ಸಂಖ್ಯೆಗಳ ಮೇಲೆ ಕೆಲಸ ಕೊಟ್ಟರು. ಕೆಲಸಕ್ಕೆ ಜನ ಬರುವುದಿಲ್ಲ ಎನ್ನುವ ದೃಷ್ಟಿ ಯಿಂದ ಆಹಾರ ಮಂತ್ರಿಗಳು ಮಾತನಾಡಿದರು. ಇದು ಸರಿಯೂದಲ್ಲ. ಸಾವಿರಾರು ಜನರು ಕೆಲಸಕ್ಕೆ ಬರುವುದಕ್ಕೆ ಸಿದ್ಧವಾಗಿದ್ದಾರೆ. ಆಹಾರ ಮತ್ತು ಸರಿಯಾದ ಕೂಲಿ ಕೊಡುವ ವ್ಯವಸ್ಥೆ ಮಾಡಿ ಕೆಲಸ ಒದಗಿಸಬೇಕು. ಎಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಂತಹ ತಾಲ್ಲೂಕುಗಳಿಗೆ ಆ ಸೌಲಭ್ಯಗಳನ್ನು ಕೊಡಿ. ಹುಲ್ಲು ಮೇವನ್ನು ಯಾವುದಾದರೂ ಪಿಡಬ್ಲ್ಯು.ಡಿ. ಇಲಾಖೆಯ ಲಾರಿಯಲ್ಲಿ ರೈತರಿಗೆ ಒದಗಿಸಿ ದನಕರುಗಳು ಸ್ವಲ್ಪ ಪ್ರಾಣ ಉಳಿಸಿಕೊಂಡು ಇರುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಒತ್ತಾಯ ಮಾಡುತ್ತೇನೆ. ಲಾರಿಗಳಲ್ಲಿ ಹುಲ್ಲು ತರಿಸುವಾಗ 300 ರೂಪಾಯಿಗಳು ಖರ್ಚಾಗುತ್ತದೆ. ಅದರ ಬದಲಾಗಿ ಚೆನ್ನಾಗಿ ಪ್ಯಾಕ್ ಮಾಡಿ ರೈಲ್ವೆಯಲ್ಲಿ ಬುಕ್ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ.

ಅನೇಕ ಕಡೆ ಕುಡಿಯುವುದಕ್ಕೆ ನೀರೂ ಇಲ್ಲ. ಅಂತಹ ಕಡೆ ಕೆರೆ ಅಂಗಳಗಳಲ್ಲಿ ಬಾವಿ ತೆಗೆಸಬೇಕು ಎಂದು ಹೇಳಿದ್ದೀರಿ. ಅದು ಕಾರ್ಯಗತ ಆಗುತ್ತಾ ಇಲ್ಲ. ಅದನ್ನು ಆದಷ್ಟು ಜಾಗ್ರತೆ ಕಾರ್ಯಗತಮಾಡಿಸಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಇನ್ನು ಅಮೃತಮಹಲ್ ದನಗಳಿಗೋಸ್ಕರ ಸಾಧಾರಣ 13 ಸಾವಿರ ಎಕರೆಯಷ್ಟು ಜಮೀನನ್ನು ಸರ್ಕಾರದವರ ವಶದಲ್ಲಿಟ್ಟುಕೊಂಡಿದ್ದಾರೆ. ಇದು ತಪ್ಪು. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಒಂದೆರಡು ಕಡೆ ಉಳಿಸಿಕೊಂಡು ಮಿಕ್ಕದ್ದನ್ನೆಲ್ಲಾ ರೈತರಿಗೆ ವ್ಯವಸಾಯಕ್ಕೆ ಕೊಡುವುದು ಬಹಳ ಉತ್ತಮ. ಕೆಲವು ಕಡೆ ಸರ್ಕಾರಿ ಜಮೀನಿನ ಹೆಸರಿನಲ್ಲಿ ಅಧಿಕಾರಿಗಳು ಹುಲ್ಲು ಮತ್ತು ಮರಗಳನ್ನು ಮಾರಿ ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಉದಾಹರಣೆಗೆ ಲಕ್ಕಹಳ್ಳಿಯಲ್ಲಿ ಒಂದು ಕೆರೆ ಇದೆ. ಅದರಲ್ಲಿ ಅರ್ಧ ಅಮೃತಮಹಲಿಗೆ ಸೇರಿದ್ದು, ಅರ್ಧ ಗ್ರಾಮಕ್ಕೆ ಸೇರಿದ್ದು ಎಂದು ಹೇಳುತ್ತಾರೆ. ದನಗಳು ಎಲ್ಲಿಯಾದರೂ ನೀರು ಕುಡಿಯಲು ಹೋದರೆ ಅದನ್ನು ದೊಡ್ಡಿಗೆ ಹೊಡೆಯುತ್ತಾರೆ ಮತ್ತು ರೈತರಿಗೆ ದಂಡ ವಿಧಿಸುತ್ತಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ಬಂದು ಅದನ್ನು ನೋಡಿ, ಅದನ್ನು ಬಿಟ್ಟು ಕೊಡಬೇಕೆಂದು ಬರೆದಿದ್ದಾರೆ. ಇವತ್ತಿನವರೆಗೂ ಅದು ಏನಾಗಿದೆ ಎಂದು ಗೊತ್ತಿಲ್ಲ. ಇನ್ನು ಶಿವರ ಗ್ರಾಮದಲ್ಲಿ ಸುಮಾರು 300 ಎಕರೆ ಗೋಮಾಳ ಜಮೀನನ್ನು ರಿಲೀಸ್ ಮಾಡಿ ವ್ಯವಸಾಯಕ್ಕೆ ಕೊಡಬೇಕೆಂದು ನಾನು ಹೇಳುತ್ತೇನೆ.

ಇದನ್ನು ದರ್ಖಾಸ್ತುಗಳಿಗೆ ಅರ್ಜಿ ಹಾಕಿದರೆ, ಅದು ಎಕ್ಸ್‌ಕ್ಲೂಜು ಲ್ಯಾಂಡ್, ಫಾರೆಸ್ಟ್ ಲ್ಯಾಂಡ್ ಎಂದು ಹೇಳಿ ಬಿಟ್ಟು ನಿಧಾನ ಮಾಡುತ್ತಾರೆ. ಅವರಿಗೆ ಏನಾದರೂ ದುಡ್ಡು ಕೊಟ್ಟರೆ ಮರ ಇಲ್ಲ ಎಂದು ಬರೆಯುತ್ತಾರೆ, ದುಡ್ಡು ಕೊಡದಿದ್ದರೆ ಮರ ಇದೆ ಎಂದು ಬರೆಯುತ್ತಾರೆ. ಇದಕ್ಕೆಲ್ಲಾ ಏನು ಮಾಡಬೇಕೆಂದರೆ, ಮೇಲಧಿಕಾರಿಗಳು ಸ್ಥಳಕ್ಕೆ ಹೋಗಿ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಕಂದಾಯ ಮಂತ್ರಿಗಳು ಒಂದು ತಿಂಗಳಲ್ಲಿ 20 ದಿನ ಬೆಂಗಳೂರಿನಲ್ಲೇ ಇದ್ದು, ಎರಡು ಗಂಟೆಕಾಲವಾದರೂ ಆಫೀಸಿನಲ್ಲಿ ಇರಬೇಕು. ಏಕೆಂದರೆ, ಬಹಳ ದೂರದಿಂದ ಜನರು ಅವರನ್ನು ಭೇಟಿಯಾಗಲು ಬರುತ್ತಾರೆ. ಅವರು ಜಾಸ್ತಿಯಾಗಿ ಕೋಲಾರಕ್ಕೇ ಹೋಗುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಕ್ಷೇತ್ರ ಈಗ ತುಮಕೂರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ಈ ಸಾರಿ ಕೋಲಾರಕ್ಕೆ ಕಳುಹಿಸುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನದು ರಿಸರ್ವ್ ಸೀಟ್ ಅದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಹಾಗಾದರೆ ಈಗ ರಿಸರ್ವ್ ಇರಬೇಕಾಗುತ್ತದೆ. ಈಗ ಗ್ರಾಮಪಂಚಾಯಿತಿಗಳ ಕೆಲಸ ಬಹಳ ಸಮರ್ಪಕವಾಗಿ ನಡೆಯುತ್ತಾ ಇಲ್ಲ. ಮತ್ತು ಈಗ ಹಳ್ಳಿಗಾಡಿನಲ್ಲಿ ಕೆಲವು ಕಡೆ ರೆವಿನ್ಯೂ ಲ್ಯಾಂಡಿನಲ್ಲಿ ಅಲ್ಲಲ್ಲಿ ಗೊಬ್ಬರಗಳ ಗುಂಡಿ ಮಾಡಿ, ಆದರಿಂದ ಸೊಳ್ಳೆಗಳು ಬೆಳೆದು ಅಲ್ಲಿ ವಾಸಮಾಡುವುದಕ್ಕೆ ಕಷ್ಟವಾದ ಪರಿಸ್ಥಿತಿ ಬಂದಿದೆ. ಇದರಿಂದ ಇದನ್ನೆಲ್ಲಾ ತಪ್ಪಿಸಬೇಕು.

ಇನ್ನು ಈ ಶಾನುಭೋಗರು ಆರ್.ಆರ್. ಬರೆಯುವುದಕ್ಕೆ, ಪಹಣಿ ಬರೆಯುವುದಕ್ಕೆ ಸರಿಯಾದ ಮಾಮೂಲು ಕೊಡದೆ, ಅವರು ಸರಿಯಾದ ಸಂಗತಿಯನ್ನು ಬರೆಯುವುದಿಲ್ಲ. ಆದ್ದರಿಂದ ಇದನ್ನು ಶಾನುಭೋಗ್ ಮತ್ತು ಪಟೇಲರು ಇಬ್ಬರಿಗೂ ಜವಾಬ್ದಾರಿಗೆ ಕೊಟ್ಟು ಒಂದು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಈ ಬೆಂಗಳೂರು ಡೈರಿ ಪ್ರಾಜೆಕ್ಟಿನ ವಿಚಾರ. ಇದು ಎಷ್ಟು ಹಾಲನ್ನು ಉತ್ಪತ್ತಿ ಮಾಡಿದೆ, ಮತ್ತು ಇದರಲ್ಲಿದ್ದ ಲಾರಿಗಳ ಪೆಟ್ರೋಲಿಗೆ ಎಷ್ಟು ಖರ್ಚಾಯಿತು ? ಅಥವಾ ಪೆಟ್ರೋಲಿಗೆ ಖರ್ಚು ಮಾಡಿದಷ್ಟು ಹಣವಾದರೂ ಇದರಿಂದ ಬರುತ್ತದೆಯೆ ಎಂಬುದು ಯಾವುದೂ ತಿಳಿಯಲಿಲ್ಲ. ಈಗ ಈ ಪ್ರಾಜೆಕ್ಟಿನ ಏರಿಯವನ್ನು 40-50 ಮೈಲಿ ಎಂದು ಮಾಡಿದ್ದಾರೆ. ಇದನ್ನು 90-100 ಮೈಲಿಯವರೆಗೆ ವಿಸ್ತರಣೆ ಮಾಡಿ ಇದರಲ್ಲಿ ತಿಪಟೂರನ್ನೂ ಸೇರಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡುವುದರಿಂದ, ಈ ಶ್ಯಾನುಭೋಗ ರೆಲ್ಲಾ ನಾವು ಇನ್ನು ಹೋಗುತ್ತೇವೆ ಎಂದು ತಿಳಿದು, ಕಂದಾಯವನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಯಾರಾದರೂ ಏಜನ್ಸಿಯ ಮೂಲಕ ವಸೂಲು ಮಾಡುವುದಕ್ಕೆ ವ್ಯವಸ್ಥೆಮಾಡಬೇಕು.

ಇನ್ನು ಅಕ್ವಿಸಿಶನ್ ವಿಚಾರ. ಹಿಂದೆ ಮಾನ್ಯ ಮಿತ್ರರಾದ ಶ್ರೀ ಕೇಶವ ಮೂರ್ತಿಯವರು ಒಂದು ಪ್ರಶ್ನೆ ಕೇಳಿದಾಗ, ಉತ್ತರವಾಗಿ ಅಕ್ವಾಯರ್ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನೀವು ಈ ಶಾಸನ ಸಭೆಯಲ್ಲಿ ಕೊಟ್ಟ ಆಶ್ವಾಸನೆಗೆ ಏನು ಬೆಲೆ ಇದೆ ಎಂಬುದನ್ನು ತಾವು ಯೋಚಿಸ ಬೇಕು. ಈಗ ತಿಪಟೂರು ಹೋಬಳಿಯಲ್ಲಿ ಮುದನಹಳ್ಳಿ ಗ್ರಾಮದ ಲ್ಯಾಂಡ್ ಅಕ್ವಿಸಿಶನ್ ರಿಕಾರ್ಡ್ಸ್ ವಿಚಾರದಲ್ಲಿ ಒಬ್ಬ ಲಾಯರ್ ಒಂದು ಅರ್ಜಿಯನ್ನು ಸ್ಟ್ಯಾಂಪ್ ಹಾಕಿ ನಿಮ್ಮ ಸೆಕ್ರೆಟರಿಯೇಟಿಗೆ ಕೊಟ್ಟರೆ, ಆ ಸ್ಟ್ಯಾಂಪನ್ನು ಹರಿದು ತೆಗೆದು ವಿಚಾರವಾಗಿ ಹೋದ ಸಾರಿ ಶಾಸನಸಭೆಯಲ್ಲಿ ಹೇಳಿ ದರೂ ಇವತ್ತಿನವರೆಗೆ ಏನು ಆಗಲಿಲ್ಲ. ಇದರಿಂದ ಇಂಥ ದೊಡ್ಡ ಆಫೀಸುಗಳಲ್ಲೇ ಈ ತರಹ ನಡೆ ದರೆ, ಇನ್ನು ಸಣ್ಣ ಸಣ್ಣ ಆಫೀಸುಗಳ ವಿಚಾರವೇನಾಗಬಹುದು ?

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ದರಕಾಸ್ತು ವಿಲೇವಾರಿ ಮಾಡುವಾಗ ಬಡ ಜನರು ಅರ್ಜಿ ಹಾಕಿದರೆ ನಾವು ಇದನ್ನು ಕೊ ಅಪರೇಟಿವ್ ಸೊಸೈಟಿಗೆ ಕೊಡುತ್ತೇವೆ, ಹಾಗೂ ಬೇರೆ ಸಂಸ್ಥೆಗಳಿಗೆ ಬೇಕೆಂದು ಹೇಳಿ, ಅದನ್ನು ತಮಗೆ ಬೇಕಾದವರಿಗೆ ಕೊಟ್ಟುಬಿಡುತ್ತಾರೆ. ಅದರ ಬದಲು 4–5 ಎಕರೆ ಜಮೀನನ್ನು ಕೊಟ್ಟರೆ ಅವರ ಜೀವನೋಪಾಯಕ್ಕೆ ಒಂದು ದಾರಿಯಾದರೂ ಆಗುತ್ತದೆ ಎಂದು ನಾನು ಹೇಳುತ್ತೇನೆ. ಕೊನೆಯದಾಗಿ ತಮ್ಮ ಪ್ರಯಾಣದಲ್ಲಿ ತಾವು ಒಂದು ತಿಂಗಳಲ್ಲಿ 20 ದಿವಸವಾದರೂ ಇಲ್ಲೇ ಇರುವಂತೆ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ನಮ್ಮ ಕಂದಾಯ ಮಂತ್ರಿಗಳು ಮಂಡಿಸಿರತಕ್ಕ ಡಿಮಾಂಡ್ ನಂ. 2, ಡಿಮಾಂಡ್ ನಂ. 22, ಹಾಗೂ ಡಿಮಾಂಡ್ ನಂ. 33, ಇವುಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಇಲ್ಲಿ ಹೇಳಲಚ್ಛಿಸುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕ್ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಅನೇಕ ಕಾರ್ಖಾನೆಗಳನ್ನು ಮತ್ತು ಕಾಲೇಜು ಇತ್ಯಾದಿಗಳನ್ನು ಕಟ್ಟುವುದಕ್ಕೋಸ್ಕರವಾಗಿ ನೂರಾರು ಎಕರೆಗಳಷ್ಟು ಭೂಮಿಯನ್ನು ಅಕ್ವಯರ್ ಮಾಡಿದ್ದಾರೆ. ಅಲ್ಲಿ ಅಕ್ವಾಯರ್ ಮಾಡಿರತಕ್ಕ ಸ್ಥಳಗಳ ರೈತರಿಗೆ ಕೊಡಬೇಕಾದ ಬೆಲೆಯನ್ನು ಸಹ ಕೊಡದೆ ಮತ್ತು ಕಟ್ಟತಕ್ಕ ಬೆಲೆಯನ್ನೂ ಕಟ್ಟದೆ ಅಲ್ಲಿಯ ಜನರಿಗೆ ತುಂಬಾ ಕಷ್ಟವಾದ ಪರಿಸ್ಥಿತಿಯು ತಲೆದೋರಿದೆ. ಇದರಿಂದ ನಾನಾದರೂ ಹೇಳುವುದೇನೆಂಬರ, ಈ ಇಲಾಖೆಯವರು ಇದಕ್ಕೆ ಬಹಳ ಜಾಗ್ರತೆ ಗಮನ ಕೊಟ್ಟು ಅಕ್ವಾಯರ್ ಮಾಡಿರತಕ್ಕ ಭೂಮಿಗೆ ಮಾರ್ಕೆಟ್ ರೇಟ್ ಏನಿದೆ, ಅದನ್ನು ಸರಿಯಾಗಿ ಪರಿಶೀಲಿಸಿ, ಆ ಮಾರ್ಕೆಟ್ ಬೆಲೆಯನ್ನು ಕಟ್ಟಿ, ಅದನ್ನು ಯಾವ ರೂಲ್ಸ್‌ಗಳಿವೆಯೋ ಅದನ್ನು ಸರಿಯಾಗಿ ಅನುಸರಿಸಿ, ಸಾಧ್ಯವಾದಷ್ಟು ಜಾಗ್ರತೆ ಅವರಿಗೆ ಹಣವನ್ನು ದಕ್ಕಿಸಿ ಕೊಡಬೇಕೆಂದು ನಾನು ಇಲ್ಲಿ ತಮಗೆ ಸಲಹೆ ಮಾಡುತ್ತೇನೆ.

ಭೂಮಿಯನ್ನು ಅಕ್ವೈರ್ ಮಾಡಿದ ನಂತರ, ವ್ಯವಸಾಯವನ್ನೇ ನಂಬಿಕೊಂಡಿರುವವಂಥ ರೈತರಿಗೆ ಜೀವನಕ್ಕೆ ಹೋರಾಟ ನಡೆಸಬೇಕಾದ ಸ್ಥಿತಿ ಬಂದಿದೆ. ಅವರಿಗೆ ಬೇರೆ ಕಡೆ ಹೋಗಿ ನೆಲೆಸುವುದಕ್ಕೆ ಭೂಮಿಯನ್ನು ಕೊಡುತ್ತಿಲ್ಲ. ಭೂಮಿಯನ್ನು ಸ್ವಾಧೀನ ಮಾಡಿಕೊಂಡಾಗ ಯಾವ ಕಾರ್ಖಾನೆಗಾಗಿ ಮಾಡಿಕೊಂಡರೋ ಅಲ್ಲಿ ಭೂಮಿಯನ್ನು ಕಳೆದುಕೊಂಡಿರುವ ರೈತರಿಗೆ ಕೆಲಸಗಳನ್ನು ಒದಗಿಸುತ್ತಿಲ್ಲ. ಕಾರ್ಖಾನೆಗಳನ್ನು ಕಟ್ಟುವ ಕಾಲದಲ್ಲಿ ಯಾರು ಯಾರು ಭೂಮಿಗಳನ್ನು ಕಳೆದುಕೊಂಡಿದ್ದಾರೋ, ಯಾರು ಕಷ್ಟ ಪರಿಸ್ಥಿತಿಗೆ ಸಿಕ್ಕಿದ್ದಾರೋ ಅಂಥವರಿಗೆಲ್ಲ ಕಾರ್ಖಾನೆಯಲ್ಲಿ ಕೆಲಸವನ್ನು ಕೊಡುವ ಒಂದು ಷರತ್ತನ್ನು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ.

ವಂಶಾವಳಿ ಅಧಿಕಾರಿಗಳಾದ ಪಟೇಲರು ಮತ್ತು ಶಾನುಭೋಗರನ್ನು ತೆಗೆದು ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಕೆಲವು ನಿಯಮಗಳನ್ನು ಮಾಡಿದ್ದಾರೆ. ತೋಟಿ ತಳವಾರರು ಇನ್ನೂ ಕೆಳದರ್ಜೆ ನೌಕರರು. ಅವರು ಸಹ ವಂಶಾವಳಿಯಿಂದ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅವರಿಗೆ ನೀರಾವರಿ, ಖುಷ್ಕಿ ಮತ್ತು ಬಾಗಾಯತು ಭೂಮಿಗಳನ್ನು ಮಾನ್ಯಗಳಾಗಿ ಕೊಟ್ಟಿದ್ದಾರೆ. ಪಟೇಲ ಶಾನುಭೋಗರಿಗೆ ಕೊಟ್ಟಹಾಗೆ ಅವರವರ ಭೂಮಿಗಳನ್ನು ತೋಟಿ ತಳವಾರರುಗಳಿಗೆ ಖಾಯಂ ಮಾಡಿಸಿಕೊಡಬೇಕು. ಮತ್ತು ಅವರಿಂದ ಕಂದಾಯವನ್ನು ವಸೂಲ್ಮಾಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ತೋಟಿ ತಳವಾರರುಗಳಿಗೆ ಸೇರಿದಂಥ ಜಮೀನುಗಳನ್ನು ಸ್ವಾಧೀನ ಮಾಡಿಕೊಂಡು ಅದರ ಹಣವನ್ನು ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಹಳ ಕಡಿಮೆ ದರದ ಬಡ್ಡಿಯನ್ನು ಸಂಬಂಧಪಟ್ಟ ತೋಟಿ ತಳವಾರರಿಗೆ ವರ್ಷಕ್ಕೆ ಒಂದು ಸಲ ಕೊಡುತ್ತಿದ್ದಾರೆ. ಭೂಮಿಯಲ್ಲಿ ಬೆಳೆಯತಕ್ಕ ಅವಕಾಶವಿಲ್ಲದೆ, ಹಣ ಕೈಯ್ಯಲ್ಲಿದ್ದರೆ ಬೇರೆ ಕಡೆ ಭೂಮಿಯನ್ನು ಕೊಂಡುಕೊಳ್ಳುವುದಾಗಲೀ ಅಥವಾ ಬೇರೆ ಉದ್ಯೋಗವನ್ನು ಮಾಡುವುದಾಗಲೀ ಇಲ್ಲದೆ ಬಹಳ ಕಷ್ಟದಲ್ಲಿದ್ದಾರೆ. ಯಾರ ಭೂಮಿಯನ್ನು ಅಕ್ವೈರ್ ಮಾಡಿ ಬ್ಯಾಂಕಿನಲ್ಲಿ ಅದರ ಬೆಲೆಯನ್ನು ಇಡಲಾಗಿದೆಯೋ ಅಂಥ ತೋಟಿ ತಳವಾರರಿಗೆ ಜಮೀನಿನ ಖರೀದಿಯನ್ನು ಕೊಟ್ಟು ಅವರು ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಿಗೆ ಒಂದೇ ಟ್ರೆಜರಿ ಇದೆ. ಬೆಂಗಳೂರು 16–17 ಲಕ್ಷ ಜನಸಂಖ್ಯೆ ಇರುವ ಪಟ್ಟಣ. ಅನೇಕ ಕಾಲೇಜುಗಳು, ಹೈಸ್ಕೂಲುಗಳು ಮತ್ತು ಇತರ ಸ್ಕೂಲುಗಳೂ ಇವೆ. ವಿದ್ಯಾರ್ಥಿಗಳು ಪರೀಕ್ಷೆಗೆ ಹಣವನ್ನು ಕಟ್ಟಬೇಕಾದರೆ ಬೆಂಗಳೂರು ಉತ್ತರ ತಾಲ್ಲೂಕು ಟ್ರೆಜರಿಯಲ್ಲಿ ಮೂರು ದಿವಸ ಹಿಡಿಯುತ್ತದೆ. ಸುಮಾರು ಒಂದು ಸಾವಿರ ಜನರು ಕ್ಯೂನಲ್ಲಿ ಮಳೆ ಮತ್ತು ಬಿಸಿಲಿನಲ್ಲಿ ನಿಂತಿರುತ್ತಾರೆ. ಇದನ್ನು ತಪ್ಪಿಸಲು ವಿದ್ಯಾರ್ಥಿಗಳು

ಕಟ್ಟಬೇಕಾಗಿರುವ ಹಣವನ್ನು ಸಂಬಂಧಪಟ್ಟ ಶಾಲೆಗಳಲ್ಲಿ ವಸೂಲ್ಮಾಡುವಂತೆ ಏರ್ಪಾಡು ಮಾಡ ಬೇಕು ಅಥವಾ ಟ್ರೆಜರಿಯಲ್ಲಿ ಸಿಬ್ಬಂದಿಯನ್ನು ಹೆಚ್ಚುಮಾಡಿ ವಿದ್ಯಾರ್ಥಿಗಳಿಗೆ ಆಗತಕ್ಕ ಕಷ್ಟವನ್ನು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ.

ಈಗ ತೆಗೆದುಹಾಕಿರತಕ್ಕ ಮತ್ತು ಬದಲಾವಣೆ ಮಾಡಿರತಕ್ಕ ಶಾನುಭೋಗರುಗಳನ್ನು ಗುಮಾಸ್ತರಾಗಿ ನೇಮಕ ಮಾಡಿದ್ದಾರೆ. ಅವರಿಗೆ ಕೊಡುವ ಸಂಬಳ ಸಾಲದು. ಅವರ ಸಂಬಳ ವನ್ನು ಹೆಚ್ಚಿಸಿ ಕನಿಷ್ಟ ಪಕ್ಷ ಎರಡನೆ ಡಿವಿಜನ್ ಗುಮಾಸ್ತೆಗೆ ಕೊಡುವಷ್ಟು ಸಂಬಳವನ್ನಾದರೂ ಕೊಡಬೇಕೆಂದು ಹೇಳುತ್ತೇನೆ.

ಪಶು ಸಂಗೋಪನ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಬೆಂಗಳೂರಿನಲ್ಲಿ ಅನೇಕ ಬೆಂಗಳೂರು ಬ್ರೀಡ್ ಜಾತಿಯ ದನಗಳನ್ನು ಸಾಕುತ್ತಾರೆ. ಪರದೇಶದ ಹೋರಿ ಮತ್ತು ನಮ್ಮ ದೇಶದ ಹಸುಗಳಿಂದ ಬೆರಕೆಯಾಗಿ ಹುಟ್ಟಿರುವ ದನಗಳೇ ಇವು. ನಮ್ಮ ದೇಶದ ವಾಯು ಗುಣಕ್ಕೆ ಇವು ಒಗ್ಗಿರುವ ದನಗಳಾಗಿವೆ ಮತ್ತು ಹಾಲಿನ ಉತ್ಪತ್ತಿಯೂ ಹೆಚ್ಚಾಗಿದೆ. ಆದರೆ ಏನೋ ಕಾರಣದಿಂದ ಎಂದೂ ಬರದೆ ಇರುವ ರೋಗ ಬಂದು ದನಗಳನ್ನು ಇಟ್ಟುಕೊಂಡಿರುವ ರೈತರು ಬಹಳ ನಷ್ಟಕ್ಕೆ ಸಿಕ್ಕಿರುತ್ತಾರೆ. ವೆಟರ್ನರಿ ಇಲಾಖೆಯವರು ಬಹಳ ಚೆನ್ನಾಗಿ ಪರಿಶೀಲನೆ ಮಾಡ ಬೇಕು. ಅವರನ್ನು ಕೇಳಿದರೆ ಯಾವುದೋ ವೈರಸ್‌ನಿಂದ ಬಂದಿದೆ ಎಂದು ಹೇಳುತ್ತಾರೆಯೇ ಹೊರತು ಅದು ಏಕೆ ಬಂತು ಎಂದು ಪರಿಶೀಲನೆ ಮಾಡುವುದಿಲ್ಲ. ನಮ್ಮ ವೆಟರ್ನರಿ ಇಲಾಖೆ ಮತ್ತು ವೆಟರ್ನರಿ ಕಾಲೇಜಿನವರು ಬಹಳ ಎಚ್ಚರಿಕೆಯಿಂದ ಇದಕ್ಕೆ ಗಮನಕೊಟ್ಟು ಪಶು ಸಂಪತ್ತನ್ನು ಕಾಪಾಡಬೇಕು ಮತ್ತು ಹಾಲು ಕೊಡತಕ್ಕ ದನಕರುಗಳನ್ನು ಉಳಿಸಿ ರೈತನು ನಷ್ಟಕ್ಕೆ ಸಿಕ್ಕದ ಹಾಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕೋಳಿ ಸಾಕುವುದು. ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಮಂತ್ರಿಗಳಾಗಿ ಬಂದ ಮೇಲೆ ಎಲ್ಲರೂ ಮೊಟ್ಟೆ ಹೆಚ್ಚಾಗಿ ತಿನ್ನುವುದನ್ನು ಕಲಿಯುತ್ತಿದ್ದಾರೆ. ಬ್ರಾಹ್ಮಣರು ಸಹ ಮೊಟ್ಟೆ ತಿನ್ನಿರಿ ಎಂದು ಹೇಳುತ್ತಿದ್ದಾರೆ. ಪರದೇಶದಿಂದ ತರಿಸಿರುವ ಕೋಳಿಗಳಿಗೆ ಒಂದು ತರಹ ನೆಗಡಿ ರೋಗ ಬರುತ್ತಿದೆ. ನಮ್ಮ ವಾಯುಗುಣದಲ್ಲಿ, ಈ ಕಡೆ ಇರುವ ಪ್ರದೇಶದ ಸನ್ನಿವೇಶದಲ್ಲಿ ನೆಗಡಿ ರೋಗವನ್ನು ಹೇಗೆ ತಡೆಯಬೇಕು ಎನ್ನುವುದನ್ನು ಕಂಡು ಹಿಡಿದಿಲ್ಲ. ಅದಕ್ಕೆ ಒಂದು ವಿಶೇಷ ಹೆಸರನ್ನು ಕೊಡುತ್ತಾರೆ. ಎಷ್ಟೋ ಕಡೆ ಹಳ್ಳಿಗಳಲ್ಲಿ ವೆಟರ್ನರಿ ಡಾಕ್ಟರು ಎಂದು ಕರೆಸಿಕೊಳ್ಳದೆ ಇರುವವರು, ವೆಟರ್ನರಿ ಕಾಲೇಜಿನಲ್ಲಿ ಓದದೆ ಇರುವವರು, ತಮ್ಮ ಅನುಭವದಿಂದ ಕೊಡುವ ಔಷಧಿಗಳಿಂದ ಇಂಥ ರೋಗ ವಾಸಿಯಾಗುವುದನ್ನು ನೋಡಿದ್ದೇವೆ. ರೆವೆನ್ಯೂ ಇಲಾಖೆಯವರಾಗಲೀ, ಬ್ಲಾಕ್ ಡೆವಲಪ್ ಮೆಂಟ್ ಅಫೀಸರಾಗಲೀ ಇಂಥ ವೈದ್ಯರು ಎಲ್ಲೆಲ್ಲಿದ್ದಾರೆ ಎಂದು ಕಂಡು ಹಿಡಿದು, ಆ ವೈದ್ಯರು ಕೊಡುವ ಔಷಧಿಗಳ ಪಟ್ಟಿಯನ್ನು ತರಿಸಿಕೊಂಡು ವೆಟರ್ನರಿ ಕಾಲೇಜಿನಲ್ಲಿ ಪರಿಶೋಧನೆ ನಡೆಸಿ, ಕೋಳಿಗಳಿಗೆ ಮತ್ತು ದನಗಳಿಗೆ ಬರತಕ್ಕ ಖಾಯಿಲೆಯನ್ನು ತಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಸರ್ಕಾರದವರು ಈಗಿನ ಅಭಾವ ಪರಿಸ್ಥಿತಿಯಲ್ಲಿ ಜನಗಳಿಗೇನೋ ಆಹಾರವನ್ನು ಒದಗಿ ಸುತ್ತಿದ್ದಾರೆ. ಈಗಿನ ಸ್ಥಿತಿಯಲ್ಲಿ ಮಳೆ ಇಲ್ಲದೆ ದನಕರುಗಳಿಗೆ ಮೇವು ಸಿಕ್ಕುವುದು ಕಷ್ಟವಾಗಿದೆ. ಹೆಚ್ಚು ಬೆಳೆಯತಕ್ಕ ರೈತನು ಕೂಡ ಏನೂ ಇಲ್ಲದಂತಾಗಿದ್ದಾನೆ. ಜನರಿಗೆ ಬೇಕಾದ ಆಹಾರವನ್ನು ಒದಗಿಸಲು ಫೇರ್‌ಪ್ರೈಸ್ ಡಿಪೋಗಳು, ಸರ್ವಿಸ್ ಸೊಸೈಟಿಗಳು ಎಂದು ಮಾಡಿದ್ದಾರೆ. ದನಕರು ಗಳಿಗೆ ಮೇವನ್ನು ಒದಗಿಸುವುದಕ್ಕೆ ಮಾತ್ರ ಅನುಕೂಲವನ್ನು ಮಾಡಿಲ್ಲ. ಅರಣ್ಯ ಪ್ರದೇಶದಲ್ಲಿರುವ ಮತ್ತು ಹೆಚ್ಚು ಬೆಳೆ ಬೆಳೆದಿರತಕ್ಕ ಪ್ರದೇಶಗಳಿಂದ ಒದಗುವ ಮೇವನ್ನು ಸರ್ಕಾರದವರು ತರಿಸಿ ಒಂದೊಂದು ತಾಲ್ಲೂಕಿಗೆ ಒಂದೊಂದು ಹುಲ್ಲಿನ ಡಿಪೋ ತೆರೆದು ಅದರಿಂದ ದನಕರುಗಳಿಗೆ ಮೇವನ್ನು ಒದಗಿಸಿ ಅವು ನಷ್ಟವಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತ ಅನೇಕ ದೊಡ್ಡ ದೊಡ್ಡ ಜಿಲ್ಲೆಗಳನ್ನು ಚಿಕ್ಕ ಚಿಕ್ಕ ಜಿಲ್ಲೆಗಳನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

ದೇವನಹಳ್ಳಿ ತಾಲ್ಲೂಕಿನ ವಿಷಯ ಹೇಳುವುದಾದರೆ ಹಿಂದೆ ಯಾವುದೋ ಆಧಾರದ ಮೇಲೆ ಹೋಬಳಿಗಳನ್ನು ವಿಂಗಡಿಸಿ ಅದಕ್ಕೆ ಹೆಡ್ ಕ್ವಾರ್ಟರುಗಳನ್ನು ಮಾಡಿದ್ದಾರೆ. ಈ ಹೋಬಳಿ ಹೆಡ್‌ಕ್ವಾರ್ಟರುಗಳು ಹೋಬಳಿಯ ಮಧ್ಯ ಪ್ರದೇಶದಲ್ಲಿರದೆ ಕೆಲವು ಗ್ರಾಮಗಳಿಗೆ ಒಂದು ಮೈಲಿ ದೂರವಾದರೆ ಇನ್ನು ಕೆಲವು ಗ್ರಾಮಗಳಿಗೆ 15 ಮೈಲಿ ದೂರವಾಗುತ್ತದೆ. ಆದುದರಿಂದ ಹೋಬಳಿ ಹೆಡ್‌ಕ್ವಾರ್ಟರನ್ನು ಹೋಬಳಿಯ ಕೇಂದ್ರದಲ್ಲಿ ಇರುವ ಹಾಗೆ ಮಾಡಬೇಕು. ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯ ಹೆಡ್‌ಕ್ವಾರ್ಟರನ್ನು ವಿಶ್ವನಾಥಪುರಕ್ಕೆ ಬದಲಾಯಿಸಬೇಕು ಎಂದು ಬರೆದಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಆರ್. ಮುನಿಸ್ವಾಮಯ್ಯ)

ದೇವನಹಳ್ಳಿಗೆ ಆ ಹೆಸರು ಸರಿಯಾದುದಲ್ಲ. ದೇವನಹಳ್ಳಿ ಎನ್ನುವುದನ್ನು ತೆಗೆದು ಅದಕ್ಕೆ ದೇವನಪುರ ಎಂಬುದಾಗಿ ಬದಲಾಯಿಸಬೇಕು ಎಂದು ತಾಲ್ಲೂಕಿನ ಮುಖಂಡರು ಮತ್ತು ಮುನಿಸಿ ಪಾಲಿಟಿಯ ಕೌನ್ಸಿಲರುಗಳು ಮಂತ್ರಿಗಳಿಗೆ ಎರಡು ಮೂರು ಸಲ ಅರಿಕೆಮಾಡಿದ್ದಾರೆ. ದೇವನಹಳ್ಳಿ ಎಂದು ಹೇಳಿದರೆ ಅದಕ್ಕೆ ಪ್ರಾಶಸ್ತ್ಯ ಕಡಮೆ ಎಂದು ವ್ಯಾಪಾರ ಮಾಡತಕ್ಕ ಜನ ತಿಳಿದುಕೊಂಡಿದ್ದಾರೆ. ಅದೇ ತಾಲ್ಲೂಕಿನಲ್ಲಿ ವಡಿಗೇನಹಳ್ಳಿ ಎಂಬ ಊರಿಗೆ ವಿಜಯಪುರ ಎಂದು ಹೆಸರನ್ನು ಬದಲಾಯಿಸಿದ್ದಾರೆ. ಈಗ ಅದರ ಪ್ರಾಶಸ್ತ್ಯ ಹೆಚ್ಚಿದೆ ಎಂದು ಜನ ಅಭಿಪ್ರಾಯಪಡುತ್ತಾರೆ. ಆದುದರಿಂದ ದೇವನಹಳ್ಳಿ ಎನ್ನುವ ಹೆಸರನ್ನು ಬದಲಾವಣೆ ಮಾಡಿ ಅದಕ್ಕೆ ದೇವನಪುರ ಎಂದು ಹೆಸರನ್ನಿಟ್ಟು ಅದರ ಪ್ರಾಶಸ್ತ್ಯವನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ, ಸ್ವಾಮಿ. ಜ್ಯೋತಿಷ್ಯದ ಪ್ರಜ್ಞೆಯಿಂದ ತಿಳಿದ ಹಾಗೆ, ಹೆಸರು ಬದಲಾಯಿಸಿದರೆ ಗ್ರಹಗತಿಗಳ ಪ್ರಭಾವದಿಂದ ಪಟ್ಟಣಗಳು, ಪುರಗಳು ಪ್ರಾಶಸ್ತ್ಯ ಹೊಂದುತ್ತವೆ.

ಅಧ್ಯಕ್ಷರು.—ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಜ್ಯೋತಿಷ್ಯ ಗೊತ್ತಿಲ್ಲವೇ ?

ಶ್ರೀ ಆರ್. ಮುನಿಸ್ವಾಮಯ್ಯ.—ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಕಲಿಯಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಗ್ರಹಗತಿಗಳ ಪ್ರಮಾಣದಿಂದ ಹಾಗೂ ಅವುಗಳ ಪ್ರಭಾವದಿಂದ ಗ್ರಾಮಗಳು ಮತ್ತು ಪಟ್ಟಣಗಳೂ ಪ್ರಾಶಸ್ತ್ಯಕ್ಕೆ ಬರುತ್ತವೆ. ಆದ್ದರಿಂದ ನನ್ನ ತಾಲ್ಲೂಕ್ ದೇವನ ಹಳ್ಳಿಯನ್ನು "ದೇವನಪುರ" ಎಂಬುದಾಗಿ ಬದಲಾಯಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ದೇಶದಲ್ಲಿ ರೈತರ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕ ಇಲಾಖೆ ರೆವಿನ್ಯೂ ಇಲಾಖೆ ಎನ್ನತಕ್ಕದ್ದು ಮೊದಲಿನಿಂದಲೂ ರೂಢಿಗೆ ಬಂದಿದೆ. ರೈತರಿಗೆ ಯಾವುದಾದರೂ ಅನುಕೂಲಗಳಾಗಬೇಕಾದರೆ ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ರೈತರ ಕಷ್ಟ ಸುಖಗಳನ್ನು ತಿಳಿದು ಅವರ ಒಂದು ಹಿತದೃಷ್ಟಿಯಿಂದ ಕೆಲಸ ಮಾತ್ರ ಅನುಕೂಲವಾಗುತ್ತದೆ. ಎಲ್ಲಾ ಇಲಾಖೆಗಳಿಗಿಂತಲೂ ರೆವಿನ್ಯೂ ಇಲಾಖೆ ರೈತನಿಗೆ ಬಹಳ ಹತ್ತಿರದ್ದು ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಆದರೆ ರೆವಿನ್ಯೂ ಇಲಾಖೆಯಲ್ಲಿ ಕಾಗದ ಪತ್ರಗಳು ಹೇಗೆ ಇತ್ಯರ್ಥವಾಗುತ್ತಿವೆ ಎಂಬುದನ್ನು ಈಗ ನೋಡಬೇಕಾಗಿದೆ. ಮೊದಲಿನಲ್ಲಿ ಮಂತ್ರಿಗಳೂ ಹಾಗೂ ದೊಡ್ಡ ದೊಡ್ಡ ಅಧಿಕಾರಿಗಳು ಕೆಲವು ಸ್ಥಳಗಳನ್ನು ಭೇಟಿ ಮಾಡುತ್ತಿದ್ದರು. ಆದರೆ ಅಂತಹ ಕಡೆಗಳನ್ನು ಇತ್ತೀಚೆಗೆ ಇವರು ಭೇಟಿ ಮಾಡತಕ್ಕ ಪ್ರಸಂಗಗಳು ಬಹಳ ಕಡಿಮೆ. ಅದನ್ನು ನೋಡತಕ್ಕದ್ದು ಬಹಳ ಪ್ರಾಮುಖ್ಯವಾದುದು. ಈ ವಿಷಯವಾಗಿ ಸರ್ಕಾರದವನ್ನು ನಿಗಾ ತೆಗೆದುಕೊಳ್ಳತಕ್ಕ ಒಂದು ಅವಶ್ಯಕತೆ ಇದೆ. ಡೆಪ್ಯುಟಿ ಕಮಿಷನರ್ ಸಹ ಈ ವಿಚಾರದಲ್ಲಿ ನಿಗಾ ವಹಿಸುವುದೊಳ್ಳೆಯದು. ಇನ್ನು ಚಿಕ್ಕಮಗಳೂರು ತಾಲ್ಲೂಕಿನ ಕರಡಿಹಳ್ಳಿ ಕಾವಲುನಲ್ಲಿ ಸುಮಾರು 50-60 ಎಕರೆ ಜಮೀನು ಇದೆ. 200-300 ಜನರಿಗೆ ಆ ಜಮೀನು ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಕೊಟ್ಟಿದ್ದಾರೆ. ಕಂದಾಯ ಕಟ್ಟಿಸಿದ್ದಾರೆ. ಆದರೆ ಜಮೀನು ಎಷ್ಟು ಜನರಿಗೆ ಸೇರಿದೆ ಎಂಬುದು ಗೊತ್ತಾಗುವುದಿಲ್ಲ. ಚಿಕ್ಕಮಗಳೂರಿನ ಜನ ಡೆಪ್ಯುಟಿ ಕಮಿಷನರ ಮೇಲೆ ನಿಗಾ ತೆಗೆದುಕೊಂಡಿದ್ದಾರೆ. ಹೀಗೆ ರೈತರನ್ನು ಸುಮ್ಮನೆ ಸತಾಯಿಸುವುದು ಸರ್ಕಾರಕ್ಕೆ ಒಳ್ಳೆಯದಲ್ಲ. ರೈತರ ಹಿತದೃಷ್ಟಿಗೂ ಅರ್ಹವಾದುದಲ್ಲ. ಮುಖ್ಯವಾಗಿ ಗೇಣಿ ಮಾಡತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕು. ಗೇಣಿದಾರನಾದವನು ದೊರಕದಿದ್ದಂಥ ಸನ್ನಿವೇಶದಲ್ಲಿ ಜಮೀನ್ದಾರನೇ ಗೇಣಿದಾರನಾಗಿರುವಾಗ ಅಲ್ಲಿನ ಅವ್ಯವಸ್ಥೆ ನೋಡಿದರೆ ಈ ವರ್ಷ ಪೂರ್ತಿ ವ್ಯವಸಾಯವಾಗುತ್ತದೆಂದು ಹೇಳುವುದು ಬಹಳ ಕಷ್ಟ. ಕೆಲವು ಜಮೀನುಗಳ ವ್ಯವಹಾರದಲ್ಲಿ ಅನೇಕರು ಕೋರ್ಟು ಕಚೇರಿಗಳಿಗೆ ಹೋಗಿ ಒಬ್ಬರಿಗೊಬ್ಬರು ಹೊಡೆದಾಡಿ ಅವರ ಮನೆ ಮಠಗಳನ್ನು ತೆಗೆದುಕೊಂಡಿದ್ದಾರೆ. ರೈತರಿಗೆ ಮತ್ತು ಜಮೀನ್ದಾರರಿಗೆ ಇರತಕ್ಕ ತೊಂದರೆಗಳನ್ನು ಕೂಡಲೇ ಹೋಗಲಾಡಿಸಬೇಕು.

ಇನ್ನು ಅನುವಂಶಿಕ ಹುದ್ದೆಗಳ ವಿಷಯವಾಗಿ ಹೇಳುವುದಾದರೆ ಈಗ ಪಂಚಾಯಿತಿ ಕಾರ್ಯದರ್ಶಿಗಳು ಆ ಕೆಲಸವನ್ನು ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಶ್ಯಾನುಬೋಗರುಗಳು ಸಾವಿರಾರು ವರ್ಷಗಳಿಂದ ಆ ಕೆಲಸ ಮಾಡಿಕೊಂಡು ರೈತರ ಹಿತದೃಷ್ಟಿಯನ್ನೇ ಕಾಪಾಡಿಕೊಂಡು ಬರುತ್ತಾ ಇರುವಂತಹರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವರು ಇರುವುದು ಅನಿವಾರ್ಯ. ಅಂತಹ ಶ್ಯಾನುಬೋಗರುಗಳಿಗೇನಾದರೂ ಪರಿಹಾರ ಕೊಡಬೇಕು. ಅನುವಂಶಿಕ ಹುದ್ದೆಗಳನ್ನು ರದ್ದು ಮಾಡುವಾಗ

ಅವರಿಗೆ ಜಮೀನು ರೂಪದಲ್ಲಾಗಲೀ ಅಥವಾ ಹಣದ ರೂಪದಲ್ಲಾಗಲೀ ಏನೂ ಪರಿಹಾರ ಮಾಡಿ ಕೊಟ್ಟಿಲ್ಲ. ಅದನ್ನು ಜಾಗ್ರತೆ ಕೊಡುವುದು ಬಹಳ ಅವಶ್ಯಕವೆಂದು ನಾನು ಸರ್ಕಾರಕ್ಕೆ ತಿಳಿಸ ಬಯಸುತ್ತೇನೆ.

ಇನ್ನು ಈ ವರ್ಷ ದೇಶದಲ್ಲಿ ಮಳೆಬಾರದೆ ದುರ್ದೈವದಿಂದ ರೈತಾಪಿ ಜನರಿಗೆ ಬಹಳ ಕಷ್ಟವಾಗು ತ್ತಿದೆ. ಇಷ್ಟು ಆಹಾರ ಕೊರತೆ ಮಳೆ ಇಲ್ಲದೇ ಇರುವುದೇ ಕಾರಣವೆಂಬುದಾಗಿ ನಾವೆಲ್ಲರೂ ತಿಳಿದಿದ್ದೇವೆ. ಈ ವರ್ಷ ರೆಮಿಷನ್ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದವರು ಒಂದು ವರದಿ ಯನ್ನು ತಂದಿದ್ದಾರೆ, ವರ್ಷಕ್ಕೆ 200-300 ಇಂಚುಗಳಷ್ಟು ಮಳೆ ಬರುತ್ತಿದ್ದಂಥ ಚಿಕ್ಕಮಗಳೂರಿನಲ್ಲಿ ಈಗ ಬೆಳೆಯೆಲ್ಲಾ ಹಾಳಾಗಿ ಕೇವಲ 4 ಆಣೆ ಬೆಳೆಯೂ ಆಗಿಲ್ಲ. ಆದ್ದರಿಂದ ಕಂದಾಯವನ್ನು ರೆಮಿಷನ್ ಮಾಡುವುದಕ್ಕೆ ಮಾಡುವುದಕ್ಕೆ ಸರ್ಕಾರದವರು ಒಂದು ಅರ್ಜಿಯನ್ನು ಕಳುಹಿಸಿಕೊಡಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಕಂದಾಯವನ್ನು ರೆಮಿಷನ್ ಮಾಡಿರತಕ್ಕ ಜಿಲ್ಲೆಗಳನ್ನು ಸರ್ಕಾರವರು ಗೊತ್ತುಮಾಡಿದ್ದಾರೆ, ಮಲೆನಾಡು ಪ್ರದೇಶವಾಗಿರತಕ್ಕ ಚಿಕ್ಕಮಗಳೂರು ಜಿಲ್ಲೆ ಸರ್ಕಾರದ ಅಧೀನದಲ್ಲಿಯೇ ಇದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂಥ ಯಾವ ಒಂದು ಅರ್ಜಿಯೂ ಇದುವರೆಗೆ ಬರಲಿಲ್ಲ. ಸರ್ಕಾರದವರು ತಕಾವಿ ಸಾಲವನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿದ್ದಾರೆ. ನಾನೂ ಸಹ ರೆವಿನ್ಯೂ ಮಂತ್ರಿಗಳಿಗೆ ಈ ವರ್ಷ ತಕಾವಿ ಸಾಲವನ್ನು ರೈತರಿಗೆ ಹೆಚ್ಚಿಗೆ ಸಕಾಲದಲ್ಲಿ ಕೊಡಬೇಕು ಎಂದು ಬರೆದಿದ್ದೇನೆ. ವ್ಯವಸಾಯ ಮಾಡತಕ್ಕವರಿಗೆ ಎತ್ತುಗಳನ್ನೂ ಬೀಜಗಳನ್ನೂ ಕೊಟ್ಟರೆ ಒಳ್ಳೆಯದು, ಚಿಕ್ಕಮಗಳೂರಿನ ನಿಡಗಟ್ಟ ಗ್ರಾಮದಲ್ಲಿ ವಾಸಿಸುತ್ತಿರುವವರು ಊರು ಬಿಟ್ಟು ಹೋಗುತ್ತಿದ್ದಾರೆ. ಅನೇಕರು ಮನೆಗಳನ್ನು ಬಿಟ್ಟು ಎಲ್ಲಾದರೂ ಕೂಲಿಯಾದರೂ ಮಾಡೋಣವೆಂದು ಊರೂರು ಅಲೆಯುತ್ತಿದ್ದಾರೆ. ಇಂತಹ ಭಯಂಕರ ಪರಿಸ್ಥಿತಿ ಇದೆ. ಸರ್ಕಾರದವರು ನಿಜವಾಗಿ ಅಲ್ಲಿಂದ ವರದಿಯನ್ನು ತರಿಸಿಕೊಂಡರೆ ಚೆನ್ನಾಗಿ ವಿಷಯ ಮನವರಿಕೆ ಯಾಗುತ್ತದೆ. ತಕಾವಿ ಸಾಲವನ್ನು ಒಂದು ಜಿಲ್ಲೆಗೆ ಕೇವಲ 50 ಸಾವಿರ ರೂಪಾಯಿಗಳನ್ನು ಕೊಟ್ಟರೆ ಏನು ಪ್ರಯೋಜನ ? ಒಂದು ಗ್ರಾಮದ 100 ಜನ ರೈತರು ಮಾತ್ರ ಎತ್ತುಗಳನ್ನು ಕೊಂಡು ವ್ಯವಸಾಯ ಮಾಡಬಹುದಷ್ಟೆ. ಪ್ರಾಣ ಹೋಗತಕ್ಕ ಪರಿಸ್ಥಿತಿ ಇರತಕ್ಕ ರೈತರಿಗೆ ತಕಾವಿ ಸಾಲ ವನ್ನು ಹೆಚ್ಚಿಗೆ ಕೊಡಬೇಕು. ಮತ್ತು ರಿಲೀಫ್ ಕಾಮಗಾರಿಗಳನ್ನು ಮಾಡಿಕೊಡಬೇಕು. ಈಗಾಗಲೇ ಸರ್ಕಾರದವರು ಕೆಲವು ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಆದರೆ ಅವು ಏನೇನು ಸಾಲದು. ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಯ ಜನರಿಗೆ ಸರಿಯಾಗಿ ಕೂಲಿ ಸಿಗುವ ಹಾಗೆ ಒಂದೆರಡು ಮೂರು ತಿಂಗಳುಗಳಾದರೂ ಜೀವನ ಮಾಡುವುದಕ್ಕೆ ಅನುಕೂಲವಾಗುವಂತೆ ರಿಲೀಫ್ ಕಾಮಗಾರಿಗಳನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು.

ಇನ್ನು ಪಶು ಸಂಪತ್ತಿನ ಇಲಾಖೆ ರೈತರಿಗೆ ಬಹಳ ಸಹಕಾರಿಯಾದ ಇಲಾಖೆ. ರೈತರಾದವರು ಇತ್ತೀಚೆಗೆ ಪಶುಗಳನ್ನು ಸಾಕಲಾರದೆ ಕಟುಕರಿಗೆ ಮಾರುತ್ತಿದ್ದಾರೆ. ಅನೇಕ ಪಶುಗಳು ತಿಂಡಿ ಇಲ್ಲದೆಯೇ ಸತ್ತುಹೋಗುತ್ತದೆ. ದನಗಳ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸಂಬಂಧ ಪಟ್ಟ ಇಲಾಖೆಯವರು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಪಶುಸಂವರ್ಧನ ಇಲಾಖೆಯಲ್ಲಿ ಒಂದು ಮತ್ತು ಎರಡನೆ ದರ್ಜೆಯ ಸ್ಥಾನಗಳು ಖಾಲಿಯಾಗಿವೆ ಎಂದು ಕೇಳಿದೆ. ರಿ-ಆರ್ಗನೈ ಜೇಷನ್ ಆದ ಮೇಲೆ ಏತಕ್ಕೋಸ್ಕರ ಅವನ್ನು ಇದುವರೆಗೆ ಭರ್ತಿಮಾಡಲಿಲ್ಲ? ಅವರಿಗೆ ಬರತಕ್ಕ ಬಡ್ತಿಗಳನ್ನು ನ್ಯಾಯ [illegible]ಯಲ್ಲಿ ದೊರಕಿಸಿಕೊಡಬೇಕು. ಹಳ್ಳಿಗಳಿಗೆ ದನಗಳಿಗೆ ಕಾಯಿಲೆ ಬಂದಂಥ ಕಾಲದಲ್ಲಿ ಅ[illegible] ರೋಗರುಜಿನಗಳಿಗೆ ಉಪಚಾರವಾಗಬೇಕಾದರೆ ಹಳ್ಳಿಗಳಲ್ಲಿ ಇತ್ತೀಚೆಗೆ ಆಸ್ಪತ್ರೆಗಳ ಅಭಾವ ಜಾಸ್ತಿಯಾಗಿವೆ. ಚಿಕ್ಕಮಗಳೂರು ತಾಲ್ಲೂಕಿನ ಹಿರಿಜಾಗೂರು ಪಂಚಾಯತಿ ಯವರು ಒಂದು ನಿರ್ಣಯವನ್ನು ಮಾಡಿದ್ದಾರೆ. ದನಗಳ ಅಭಿವೃದ್ಧಿಗಾಗಿ ಮತ್ತು ಕುರಿಕೋಳಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಅನುಭವ ರೈತರನ್ನೂ ತಜ್ಞರನ್ನೂ ಪರದೇಶಗಳಿಗೆ ಕಳುಹಿಸಿ ಅವರ ಮೂಲಕ ಈ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗುವುದಕ್ಕೆ ಸರ್ಕಾರ ದವರು ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

ಇನ್ನು ಮೈಸೂರು ದೇಶದಲ್ಲಿ ಮೂಕ ಪ್ರಾಣಿಗಳನ್ನು ನೋಡಿಕೊಳ್ಳತಕ್ಕ ವೆಟರಿನರಿ ಡಾಕ್ಟರು ಗಳು ಈಗಿನ ಸನ್ನಿವೇಶದಲ್ಲಿ ಬಹಳ ಅವಶ್ಯಕವಾಗಿದ್ದಾರೆ. ಅವರು ಸಾಕಷ್ಟು ಇಲ್ಲದಿದ ರೆ ತುಂಬಾ ಕಷ್ಟವಾಗುತ್ತದೆ. ಈಗಿನ ಸಿಬ್ಬಂದಿಯಲ್ಲ ಏನು ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಡಾಕ್ಟರು ಗಳನ್ನು ನೇಮಿಸಬೇಕು. ವೆಟರಿನರಿ ಡಾಕ್ಟರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಬೇಕು. ಮುಖ್ಯವಾಗಿ ಮೂಕ ಪ್ರಾಣಿಗಳನ್ನು ಚೆನ್ನಾಗಿ ನೋಡಿಕೊಳ್ಳಲು ತಕ್ಕ ವ್ಯವಸ್ಥೆಯನ್ನು ಸರ್ಕಾರ ದವರು ಕೂಡಲೇ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇಷ್ಟು ಹೊತ್ತು ನಾನು ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ದಿನ ಭೂಕಂದಾಯ, ಸ್ಟಾಂಪು, ರಿಜಿಸ್ಟ್ರೇಷನ್, ಪಶುಸಂಗೋಪನ, ಕ್ಷಾಮ ಪರಿಹಾರ, ಜಮೀನ್ದಾರಿ ಪದ್ಧತಿ-ಇಷ್ಟೆಲ್ಲದರ ಮೇಲೆ ಕಂದಾಯ ಸಚಿವರು ಸುಮಾರು 7 ಕೋಟಿ ರೂಪಾಯಿಗಳನ್ನು 1966ನೇ ಇಸವಿ ಮಾರ್ಚ್ 31ರೊಳಗೆ ಖರ್ಚು ಮಾಡುತ್ತಾರೆ. ಅವರು ಈ ರೀತಿ ಹಣವನ್ನು ಖರ್ಚು ಮಾಡುವಾಗ ಈ ಎಲ್ಲಾ ಇಲಾಖೆಗಳಿಂದ ಜನತೆಗೆ ಏನೇನು ಅನುಕೂಲವಾಗಿವೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆದರೆ ಅದನ್ನು ಬಿಟ್ಟು ಸರ್ಕಾರದವರು ಅಧಿಕಾರಿಗಳ ಸಂಬಳಕ್ಕಾಗಿ ಹಣವನ್ನು ಖರ್ಚು ಮಾಡಿದ್ದಾರೆಂದು ಸುಮ್ಮನೆ ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ನಾನು ಅಷ್ಟಾಗಿ ಸಂತೋಷಪಡುವುದಿಲ್ಲ. ಏಕೆಂದರೆ ಈ ರೆವಿನ್ಯೂ ಇಲಾಖೆ ತಾಯಿಯ ಸಮಾನ. ಆದರೆ ಇವತ್ತು ಅದು ತಾಯಿಯಾಗಿದೆಯೋ ತಂದೆ ಯಾಗಿದೆಯೋ ನನಗೇನೂ ಗೊತ್ತಾಗಲಿಲ್ಲ.

4-30 P.M.

ಇವೊತ್ತು ಕಂದಾಯ ಸಚಿವರು ರೈತರ ಮೇಲೆ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಅವರು ರೈತರಿಗೆ ತಮ್ಮ ಕೈಯ್ಯಲ್ಲಿ ಎಷ್ಟು ಸಹಾಯ ಮಾಡಬಹುದೋ ಅಷ್ಟನ್ನೂ ಸಹ ಮಾಡುವಷ್ಟು ಔದಾರ್ಯ ಅವರಿಗೆ ಇದೆ. ಆದರೆ ಅವರಿಗೆ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಏನೆಂಬುದನ್ನು ಅವರೇ ಯೋಚನೆ ಮಾಡಬೇಕು. ರೆವಿನ್ಯೂ ಅಧಿಕಾರಿಗಳು ಇವೊತ್ತು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಮಾನ್ಯ ರೆವಿನ್ಯೂ ಸಚಿವರು ತಮ್ಮ ಅಧಿಕಾರ ವನ್ನು ಸರಿಯಾಗಿ ಚಲಾಯಿಸಬೇಕು ಎಂದು ಮನಸ್ಸು ಮಾಡಿಕೊಂಡಿದ್ದರೆ ಎಲ್ಲಾ ಕಡೆಯಲ್ಲಿಯೂ ಒಂದು ತರಹ ಬೆಳವಣಿಗೆಯನ್ನು ನಿರೀಕ್ಷಣೆ ಮಾಡಬಹುದಾಗಿತ್ತು. ಆದರೆ ಇವೊತ್ತು ಈ ರೆವಿನ್ಯೂ ಇಲಾಖೆ ಕುಂಟುತ್ತಾ ಎಡವುತ್ತಾ ಮುಂದಕ್ಕೆ ಹೋಗುತ್ತಿದೆ. ಈಗಲಾದರೂ ಮಾನ್ಯ ಸಚಿವರು ಇನ್ನೊಂದು ವರ್ಷದ ಅವಧಿಯಲ್ಲಿ ಧೈರ್ಯವಾಗಿ ಹೆಜ್ಜೆಯನ್ನು ಮುಂದಿಟ್ಟು ಈ ಖಾತೆಯಲ್ಲಿ ಏನೇನು ಮಾಡಬೇಕೆಂದಿದ್ದೀರೋ ಅದೆಲ್ಲವನ್ನೂ ಮಾಡಿಬಿಡಿ. ರೈತನಿಗೆ ಸಂಬಂಧಪಟ್ಟದ್ದು, ಸಾಮಾನ್ಯ ಮನುಷ್ಯನಿಗೆ ಸಂಬಂಧಪಟ್ಟದ್ದು ಇನಾಂ ರದ್ದಿಯಾತಿಗೆ ಸಂಬಂಧಪಟ್ಟದ್ದು, ಪಶು ಸಂಗೋಪನೆಗೆ ಸಂಬಂಧಪಟ್ಟದ್ದು, ಭೂಕಂದಾಯದಲ್ಲಿ ರೈತರಿಗೆ ನೇರವಾಗಿ ಸಂಬಂಧಪಟ್ಟದ್ದು ಇವುಗಳ ವಿಚಾರ ದಲ್ಲಿ ಸಹಾಯ ಮಾಡುವುದಕ್ಕೆ ತಮ್ಮ ಕೈಯ್ಯಲ್ಲಿ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟನ್ನೂ ಮಾಡುವುದಕ್ಕೆ ಅವರಿಗೆ ಭಗವಂತನು ಧೈರ್ಯವನ್ನು ಕೊಡಲಿ ಎಂದು ನಾನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಇವರು ಮೈಸೂರಿಗೆ ಬಂದ ಮೇಲೆ 'ಟಿಮಿಡ್' ಆಗಿದ್ದಾರೆ. ಇಲ್ಲಿ ಅವರು ಏನೇನು ಸಾಧನೆ ಮಾಡಬೇಕಾಗಿತ್ತೋ ಅದನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ. ಭಗವಂತನು ಅವರಿಗೆ ಧೈರ್ಯವನ್ನು ಕೊಡಲಿ. ಇವರು ಹೊತ್ತಿರತಕ್ಕ ಖಾತೆಯಲ್ಲಿ ಇವರು ಯಶಸ್ಸನ್ನು ಗಳಿಸಲಿ. ಮೊನ್ನೆ ಶ್ರೀಮಾನ್ ಮುನಿಚಿನ್ನಪ್ಪನವರು ಹೇಳಿದ ಹಾಗೆ ಇವೊತ್ತಿನ ದಿವಸ ಜನಗಳು ಅಸಿಸ್ಟೆಂಟ್ ಕಮೀಷನರ ಆಫೀಸಿಗೆ ಹೋದರೆ ಅಲ್ಲಿ ಅವರಿಗೆ ಮರ್ಯಾದೆ ಸಿಕ್ಕುವುದಿಲ್ಲ. ತಮ್ಮ ಕಾಲದಲ್ಲಿಯಾದರೂ ಈ ಮಧ್ಯಸ್ತ ಗಾರರನ್ನು ತೆಗೆಯುವ ಪ್ರಯತ್ನ ಮಾಡಬೇಕು. ಇವೊತ್ತು ತಾವು ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತಾರೆ. ಇವೊತ್ತು ಜನತೆ ರೆವಿನ್ಯೂ ಇಲಾಖೆಯಲ್ಲಿ ತಹಸೀಲ್ದಾರರ ಹತ್ತಿರ, ಅಸಿಸ್ಟೆಂಟ್ ಕಮೀಷನರ ಹತ್ತಿರ, ಡೆಪ್ಯುಟೀ ಕಮೀಷನರ ಹತ್ತಿರ ಆಗತಕ್ಕ ಕೆಲಸಕ್ಕೆ ಅವರು ನೇರವಾಗಿ ಸರ್ಕಾರದ ಹತ್ತಿರ ಬರುತ್ತಾರೆ. ಆ ರೀತಿ ಜನಗಳು ನೇರವಾಗಿ ಸರ್ಕಾರದವರ ಹತ್ತಿರ ಬರುವುದಕ್ಕೆ ಕಾರಣವೇನು ? ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಸರಿಯಾಗಿ ಕೆಲಸಮಾಡದೇ ಇರುವುದರಿಂದ ಅವರು ನೇರವಾಗಿ ಸರ್ಕಾರದ ಹತ್ತಿರ ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ವ್ಯವ ಹಾರವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ನಿಮ್ಮ ಹೃದಯ ಎಷ್ಟು ನಿರ್ಮಲ ಆಗಿದೆಯೋ, ನಿಮ್ಮ ಹಸ್ತ ಎಷ್ಟು ಸ್ವಚ್ಛವಾಗಿದೆಯೋ ಅದೇ ರೀತಿ ಜನತೆಯ ಕೆಲಸಗಳನ್ನು ರೈತರ ಕೆಲಸಗಳನ್ನು ಕಳಕಳಿಯಿಂದ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ದರ್ಖಾಸ್ತು ಅರ್ಜಿಗಳ ವಿಷಯವನ್ನು ಹೇಳುವುದಾದರೆ. ಈ ದರ್ಖಾಸ್ತು ಅರ್ಜಿಗಳು ಸರಿಯಾಗಿ ವಿಲೇವಾರಿ ಆಗಿಲ್ಲ. 3 ಎಕರೆಗಳಷ್ಟು ದರ್ಖಾಸ್ತು ಭೂಮಿಯನ್ನು ಪಡೆಯಲು ಆಶಿಸಿದ ರೈತನು ಒಬ್ಬ ಅರ್ಜಿ ಸಲ್ಲಿಸಿದರೆ ಅದು ವಿಧಾನಸೌಧ ತಾಲ್ಲೂಕು ಕಚೇರಿಗಳೊಳಗೆ ಓಡಾಡುವುದ ರೊಳಗೆ 116 ರೂಪಾಯಿಗಳ ಪೋಸ್ಟೇಜು ಖರ್ಚಾಗಿದೆ. ಅದರೂ ಸಹ ಆತನಿಗೆ ಜಮೀನು ಸಿಕ್ಕಲಿಲ್ಲ ಬಡವನಿಗೆ ಜಮೀನು ಸಿಕ್ಕುತ್ತದೆಯೋ ಎಂಬುದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಈ ದರ್ಖಾಸ್ತು ಭೂಮಿಯನ್ನು ಕೊಡುವುದರಲ್ಲಿ ದುರ್ವ್ಯವಹಾರ ಮಾಡುವುದನ್ನು ತಪ್ಪಿಸಬೇಕಾದರೆ ಅದರಲ್ಲಿ ಏನು ಲೋಪದೋಷಗಳು ಇವೆ ಎಂಬುದನ್ನು ನೋಡಿ ಬಗೆಹರಿಸಬೇಕು. ಇವೊತ್ತಿನ ದಿವಸ ಈ ಚಲುವನದಲ್ಲಿ ಒಂದು ಗಿಡ ಇರುವುದಿಲ್ಲ. ಇವೊತ್ತಿನ ದಿವಸ ಎಕ್ಸೈಸ್ ಕರಾಬ್ ಇಟ್ಟಿದ್ದಾರೆ.

ಸಾವಿರ ಎಕರೆಯಲ್ಲಿ ಒಂದು ಕೂಡ ಈಚಲು ಮರ ಇರುವುದಿಲ್ಲ. ಅದನ್ನು ವ್ಯವಸಾಯಕ್ಕೆ ರಿಲೀಸ್ ಮಾಡಬೇಕಾದರೆ ಅದು ಸರ್ಕಾರಕ್ಕೆ ಬರಬೇಕು. ಆ ಭೂಮಿಯನ್ನ ವ್ಯವಸಾಯಕ್ಕೆ ಕೊಡಬಹುದು ಎಂದು ರೆವಿನ್ಯೂ ಇನ್ಸ್‌ಪೆಕ್ಟರು, ತಹಸೀಲ್ದಾರರು ಮತ್ತು ಡೆಪ್ಯುಟೀ ಕಮೀಷನರು ಸರ್ಕಾರಕ್ಕೆ ಬರೆದು, ಅದನ್ನು ಎಕ್ಸ್‌ಸೈಸ್ ಮಿನಿಸ್ಟರು ಒಪ್ಪಿದಮೇಲೆ ಅದನ್ನು ಎಕ್ಸೈಸ್ ಕಮೀಷನರು ಗ್ರಾಂಟ್ ಮಾಡಬೇಕು. ಹೆಚ್ಚಿಗೆ ಆಹಾರವನ್ನು ಬೆಳೆಯಬೇಕಾದರೆ ಹೆಚ್ಚಿಗೆ ಭೂಮಿ ಇರಬೇಕು. ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕಾಗಿ ಬಡವರಿಗೆ ಜಮೀನನ್ನು ಕೊಡಬೇಕು ಎನ್ನುವ ಇಚ್ಛೆ ನಿಮಗೆ ಇದ್ದರೆ ದರಖಾಸ್ತು ಜಮೀನು ಕೊಡುವುದರಲ್ಲಿ ಏನು ತೊಂದರೆಗಳಿವೆ ಎಂಬುದನ್ನು ನೋಡಿ ಅವುಗಳನ್ನು ನಿವಾರಣೆ ಮಾಡಬೇಕು. ಅದಕ್ಕೆ ಬೇಕಾದ ಉಪಾಯವನ್ನು ಕಂಡುಹಿಡಿಯಬೇಕೆಂದು ನಾನು ರೆವಿನ್ಯೂ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯಲ್ಲಿ ರೆಕಾರ್ಡುಗಳನ್ನು ಇತ್ಯರ್ಥ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಈಗ ರೀ ಸರ್ವೆ ಸೆಟ್ಲ್‌ಮೆಂಟ್ ಮಾಡಿದ್ದಾರೆ. ಯಾರಾದರೂ ಒಬ್ಬ ರೈತ ಬಂದು ಬಾವಿ ತೆಗೆಯುವುದಕ್ಕೂ ಅಥವಾ ಮನೆ ಕಟ್ಟುವುದಕ್ಕೋ ಸಾಲ ತೆಗೆದುಕೊಳ್ಳಬೇಕಾದರೆ, ತಕಾವಿ ಸಾಲ ತೆಗೆದುಕೊಳ್ಳಬೇಕಾದರೆ ನಾನಾ ತೊಂದರೆಗಳಿವೆ. ಜಮೀನಿನ ಪೋಡು ಆಗಿರುವುದಿಲ್ಲ. ರೆಕಾರ್ಡ್ ಆಫ್ ರೈಟ್ಸನ್ನು ಅವನು ಹೊಂದಿರುವುದಿಲ್ಲ. ಇನ್ನೊಂದು ವರ್ಷದ ಅವಧಿಯಲ್ಲಿ ಮಾನ್ಯ ಸಚಿವರು ರೈತನಿಗೆ ಈ ಸವಲತ್ತುಗಳನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ರೈತ ಸಾಲಕ್ಕೆ ಹಾಕಿದಾಗ ರೆಕಾರ್ಡ್ಸ್ ಆಫ್ ರೈಟ್ಸ್ ಸರಿಯಾಗಿಲ್ಲದೇ ಹೋದರೆ ಅವನ ಕಾಗದ ಪತ್ರಗಳನ್ನು ವಾಪಸ್ಸು ಹಾಕುತ್ತಾರೆ. ಅವನು ಬೇಕಾದಷ್ಟು ಜಮೀನನ್ನು ಇಟ್ಟುಕೊಂಡಿದ್ದರೂ ಸಾಲವನ್ನು ತೆಗೆದುಕೊಂಡು ಅನುಕೂಲ ಮಾಡಿಕೊಳ್ಳುವುದಕ್ಕಾಗುವುದಿಲ್ಲ. 500 ಜನ ಸರ್ವೆಯರುಗಳನ್ನು ಕೂಡಲೇ ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದರು. ಆದರೆ ಈಗ ಅದನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕಳುಹಿಸಿದ್ದಾರೆಂದು ಕೇಳಿದ್ದೇನೆ. ಅವರು ಇಂಟರ್‌ವ್ಯೂ ಕರೆಯಬೇಕಾದರೆ ಇನ್ನೊಂದು ವರ್ಷವಾಗುತ್ತದೆ. ಆಮೇಲೆ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಇನ್ನೆಷ್ಟು ದಿವಸಗಳಾಗುತ್ತದೋ ಗೊತ್ತಿಲ್ಲ. ಅದಕ್ಕೋಸ್ಕರವಾಗಿ ಸರ್ಕಾರದವರು ಏನಾದರೂ ಮಾಡಿ ಇಲಾಖೆಯ ಮುಖ್ಯಾಧಿಕಾರಿಯನ್ನೋ ಅಥವಾ ರೆವಿನ್ಯೂ ಸೆಕ್ರೆಟರಿಯವರನ್ನೋ ಅದಕ್ಕೆ ಚೇರ್ಮನ್ ಮಾಡಿ ಸರ್ವೇಯರುಗಳನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸ್ ಏನಿದೆ ಇದು ಸರಿಯಾಗಿ ಕೆಲಸ ಮಾಡದೇ ಹೋದರೆ ರೈತ ಒಂದು ಕುಂಟೆ ಭೂಮಿಗಾಗಿ ಹೈಕೋರ್ಟ್ ಸುಪ್ರೀಮ್ ಕೋರ್ಟಿನವರೆಗೂ ಹೋಗುತ್ತಾನೆ. ಅದಕ್ಕಾಗಿ ಖೂನಿಯನ್ನು ಕೂಡ ಮಾಡುತ್ತಾನೆ. ಈ ರೀತಿ ಜಮೀನಿಗಾಗಿ ಬೇಕಾದಷ್ಟು ಅನ್ಯಾಯಗಳು ನಡೆಯುತ್ತವೆ. ಅವನಿಗೆ ಸೇರಬೇಕಾದ ಹಕ್ಕನ್ನು ಕಾನೂನು ಪ್ರಕಾರ, ಕಾಯಿದೆ ಪ್ರಕಾರ ಕೊಟ್ಟರೆ ಯಾವ ವ್ಯಾಜ್ಯವೂ ಆಗುವುದಿಲ್ಲ. ಈ ದೃಷ್ಟಿಯಿಂದ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸನ್ನು ರೀ ಓರಿಯೆಂಟ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಗಮನವನ್ನು ಕೊಡಬೇಕು.

ಇನ್ನು ಈ ರೆವಿನ್ಯೂ ಇಲಾಖೆಯ ಅಧಿಕಾರಿಗಳ ವಿಷಯವನ್ನು ಹೇಳುತ್ತಾ ಹೋದರೆ ಒಂದು ದೊಡ್ಡ ರಾಮಾಯಣವಾಗುತ್ತದೆ. ಆದ್ದರಿಂದ ಈಗ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಹೃತ್ಪೂರ್ವಕವಾಗಿ ಬಡವರಿಗಾಗಿ ಕೆಲಸ ಮಾಡದೇ ಹೋದರೆ ಅವರು ಆ ಜಾಗದಲ್ಲಿ ಇರುವುದಕ್ಕೆ ನಾಲಾಯಕ್. ಈ ಇಲಾಖೆಯಲ್ಲಿ ಕನ್ನಡ ಬಾರದೆ ಇರತಕ್ಕ ನೌಕರರೂ ಇದ್ದಾರೆ. ಕಾನೂನು ಪುಸ್ತಕದಲ್ಲಿ ಯಾವ ಸೆಕ್ಷನ್ ಅನ್ನೂ ಓದದೇ ಇರುವವರು ಇದ್ದಾರೆ. 27–28 ವರ್ಷದ ಹುಡುಗರು ಆಫೀಸರಾಗಿ ರೆವಿನ್ಯೂ ಸಬ್ ಡಿವಿಜನ್ ಚಾರ್ಜಿನಲ್ಲಿ ಇದ್ದಾರೆ. ಚಿಕ್ಕ ವಯಸ್ಸಿನ ಅನುಭವ ಇಲ್ಲದೆ ಇರತಕ್ಕವರು ತಾಲ್ಲೂಕು ಚಾರ್ಜಿನಲ್ಲಿ, ಸಬ್ ಡಿವಿಜನ್ ಚಾರ್ಜಿನಲ್ಲಿ ಡಿಸ್ಟ್ರಿಕ್ಟ್ ಚಾರ್ಜಿನಲ್ಲಿ ಇದ್ದಾರೆ. ಇವರಿಗೆ ಸರಿಯಾದ ತರಪೇತಿ ಇಲ್ಲ. ಇವರಿಗೆ ಸರಿಯಾದ ಅನುಭವ ಇಲ್ಲ. ಇವರಿಂದ ಜನತೆ ಏನೊಂದು ಸಹಾಯವನ್ನು ನಿರೀಕ್ಷಣೆ ಮಾಡಿದ್ದಾರೋ ಅದು ಅವರಿಗೆ ಸಿಕ್ಕುತ್ತಾ ಇಲ್ಲ. ಅದಕ್ಕೋಸ್ಕರವಾಗಿ ಸರ್ಕಾರದವರು ಇದನ್ನೆಲ್ಲಾ ಸರಿಪಡಿಸಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಸ್ಟಾಂಪಿನ ಇಲಾಖೆಯ ಬಗ್ಗೆ ಹೇಳುವುದಾದರೆ ಇವೊತ್ತು ನಮ್ಮಲ್ಲಿ ಲೋಯರ್ ಡಿ ನಾಮಿನೇಷನ್ ಸ್ಟಾಂಪು ಸಿಕ್ಕುವುದಿಲ್ಲ. ನಾನು ಮೊನ್ನೆ 4 ಆಣೆ ಸ್ಟಾಂಪಿಗೆ ಒಂದು ರೂಪಾಯಿ ಕೊಟ್ಟು ಕೊಂಡುಕೊಂಡೆ. ಇಂಥಾ ಪರಿಸ್ಥಿತಿ ಬಂದಿದೆ. ಹೀಗಾದರೆ ನಿಮ್ಮ ಸ್ಟಾಂಪ್ ಡಿಪಾರ್ಟ್‌ಮೆಂಟ್ ಇದೆಯೇ? ಇನ್ಸ್‌ಪೆಕ್ಟರ್ ಆಫ್ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಅವರ ಕೈಯ್ಯಲ್ಲಿ ನೀವು ಅಧಿಕಾರ ಕೊಟ್ಟಿದ್ದೀರಿ, ಅವರು ಸರಿಯಾಗಿ ಸ್ಟಾಂಪ್ಸ್ ಪ್ರಿಂಟ್ ಮಾಡಿಸುವುದಿಲ್ಲ. ನಾಲ್ಕಾಣೆ ಸ್ಟಾಂಪನ್ನು 1 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದರೆ ಸ್ಟಾಂಪಿನ ಇಲಾಖೆ ಏನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುತ್ತಿದೆ ? ರೈತ ತಹಶೀಲ್ದಾರರಿಗೆ ಒಂದು ಅರ್ಜಿ ಕೊಡಬೇಕಾದರೆ 4 ಆಣೆ ಸ್ಟ್ಯಾಂಪಿಗೆ ಒಂದು ರೂಪಾಯಿ ಕೊಟ್ಟು ತರಬೇಕಾದರೆ ಅವನು ಎಷ್ಟು ಕಷ್ಟಪಡುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ಸ್ಟ್ಯಾಂಪು ಡಿಪಾರ್ಟ್‌ಮೆಂಟಿನವರು ಮಲಗಿದ್ದಾರೆಯೋ ಅಥವಾ ಕೆಲಸ ಮಾಡುತ್ತಿದ್ದಾರೆಯೋ ನನಗೆ ಗೊತ್ತಾಗುವುದಿಲ್ಲ. ಲೋಯರ್ ಡಿನಾಮಿನೇಷನ್ನಿನ ಸ್ಟ್ಯಾಂಪುಗಳನ್ನು ಪ್ರಿಂಟ್ ಮಾಡಬಾರದು ಎಂದು ತಾವೇನಾದರೂ ಆದೇಶ ಕೊಟ್ಟಿದ್ದೀರಾ ? ನಿಜವಾಗಿ ನಾನು ಹೇಳುತ್ತೇನೆ, ಸ್ಟ್ಯಾಂಪು ಡಿಪಾರ್ಟ್‌ಮೆಂಟನ್ನು ತಾವು ಸರಿಯಾಗಿ ನೋಡಿಕೊಳ್ಳದೇ ಇದ್ದರೆ, ಇದರಿಂದ ಜನತೆಗೆ ತೊಂದರೆಯಾಗುತ್ತದೆ. ಲೋಯರ್ ಡಿ ನಾಮಿನೇಷನ್ನಿನ ಸ್ಟ್ಯಾಂಪು ಸಿಕ್ಕದೇ ಹೋದರೆ ರೈತ ತಹಶೀಲ್ದಾರರಿಗೆ, ಅಸಿಸ್ಟೆಂಟ್ ಕಮೀಷನರಿಗೆ, ಡೆಪ್ಯುಟೀ ಕಮೀಷನರಿಗೆ ಅರ್ಜಿಯನ್ನು ಹಾಕಬೇಕಾದರೆ ಅವನೇನು ರಬ್ಬರ್ ಸ್ಟ್ಯಾಂಪು ಹಾಕಬೇಕೇ ? ಅದಕ್ಕೋಸ್ಕರವಾಗಿ ನಾನು ಮಾನ್ಯ ರೆವಿನ್ಯೂ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸ್ಟ್ಯಾಂಪು ಇಲಾಖೆಗೆ ಸ್ವಲ್ಪ ಚೇತನವನ್ನು ಕೊಡಬೇಕು ಎಂದು.

ರಿಜಿಸ್ಟ್ರೇಷನ್ ಬಗ್ಗೆ ಹೇಳುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಸ್. ಪಾಟೀಲರವರು, ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಕಾಗದ ಪತ್ರಗಳನ್ನು ರಿಜಿಸ್ಟರು ಮಾಡುವಾಗ ಅಲ್ಲಿ ಫೋಟೋಗಳನ್ನು ತೆಗೆಯುವ ಸೌಕರ್ಯಗಳನ್ನು ಮಾಡಿಸಬೇಕು ಎಂದು ಹೇಳಿದ್ದರು. ಹಿಂದೆ ಬೆಳಗಾಂನಲ್ಲಿ ಇದ್ದಂತಹ ಫೋಟೋ ಪದ್ಧತಿ ಸರಿಯಾಗಿಲ್ಲ ಎಂದು ಅಲ್ಲಿ ತೆಗೆದರೋ ಏನೋ ಗೊತ್ತಾಗಲಿಲ್ಲ. ನಮ್ಮಲ್ಲಿ ರಿಜಿಸ್ಟರು ಮಾಡುವಾಗ ಕಾಗದ ಪತ್ರಗಳನ್ನು ಫೋಟೋ ತೆಗೆಯುವ ಸೌಕರ್ಯವನ್ನು ಒದಗಿಸಿದರೆ ಜನತೆಗೆ ಎಷ್ಟೋ ಉಪಕಾರ ಮಾಡಿದಂತೆ ಆಗುತ್ತದೆ. ಈ ದೃಷ್ಟಿಯಿಂದ ನಾನು ಸರಕಾರದಲ್ಲಿ ವಿನಂತಿ ಮಾಡುವುದು ಡಾಕ್ಯುಮೆಂಟುಗಳನ್ನು ಫೋಟೋ ತೆಗೆದು ರಿಜಿಸ್ಟರು ಮಾಡುವ ಪದ್ಧತಿ ಒಳ್ಳೆಯದು. ಬೆಳಗಾಂನಲ್ಲಿ ಅಲ್ಲಿರುವ ಪದ್ಧತಿಗೆ ಸರಿಯಾಗಿಲ್ಲ ಎಂದು ತೆಗೆದರೋ ಏನೋ ನಮ್ಮಗೆ ಗೊತ್ತಾಗಲಿಲ್ಲ.

ಇನ್ನು ನಮ್ಮ ಸಿವಿಲ್ ಕೋರ್ಟಿನಲ್ಲಿರುವ ಸೆಕೆಂಡ್ ಡಿವಿಜನ್ನು ಕ್ಲಾರ್ಕಿನಿಂದ ಹಿಡಿದು ಹೆಡ್ ಗುಮಾಸ್ತೆ ಶಿರಸ್ತೆದಾರರವರಿಗೆ ಏನಾದರೂ ಶಾಖಾಯ ಲವಣಾಯ ಕೊಟ್ಟರೇನೇ ಅಲಿಂದ ಕಾಗದ ಮುಂದಕ್ಕೆ ಹೋಗುತ್ತದೆ, ಇಲ್ಲದಿದ್ದರೆ ಇಲ್ಲ. ಹಾಗೇನೇ ಇವೊತ್ತು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಒಂದು ನೂರು ರೂಪಾಯಿಗಳ ಕಾಗದ ರಿಜಿಸ್ಟರ್ ಆಗಬೇಕಾದರೆ ಅದರ ಜೊತೆಯಲ್ಲಿ ಎರಡು ರೂಪಾಯಿಗಳನ್ನು ಇಟ್ಟರೇನೇ ಆ ಪತ್ರವನ್ನು ರಿಜಿಸ್ಟರು ಮಾಡಿಸಬಹುದು. ಇಲ್ಲದಿದ್ದರೆ ಇಲ್ಲ. ಸಬ್ ರಿಜಿಸ್ಟ್ರಾರ್‌ವರ ಆಫೀಸಿಗೆ ಹೋಗುವವರಿಗೆಲ್ಲಾ ಇದು ಚೆನ್ನಾಗಿ ಗೊತ್ತು. ಸಬ್ ರಿಜಿಸ್ಟ್ರಾರವರ ಆಫೀಸಿನೊಳಗೆ ಲಂಚವನ್ನು ತಪ್ಪಿಸಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ ಅಲ್ಲಿ ಅದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಎರಡು ರೂಪಾಯಿಗಳ ಲಂಚ ತಿನ್ನುತ್ತಾನೆ ಎಂದು ಹಿಡಿದರೆ ಎರಡು ಸಾವಿರ ರೂಪಾಯಿಗಳಷ್ಟು ಲಂಚ ತಿನ್ನುವವರು ತಪ್ಪಿಸಿಕೊಳ್ಳುತ್ತಿದ್ದಾರೆ. ಇದನ್ನು ಕಂಡು ಹಿಡಿಯುವುದಕ್ಕೆ ಯಾರೂ ಪ್ರಯತ್ನ ಮಾಡುತ್ತಿಲ್ಲ. ನಮ್ಮ ಕಡೆ ಒಬ್ಬರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಒಬ್ಬರು ಗುಮಾಸ್ತರು ಇದ್ದಾರೆ. ಅವರು ಒಂದು ಸಾರಿ ಒಂದು ಕಾಗದವನ್ನು ರಿಜಿಸ್ಟರು ಮಾಡಿದ ಮೇಲೆ ಪೋಸ್ಟು ಆಫೀಸಿಗೆ ಹಾಕಿಯಾಗಿತ್ತು ಆಮೇಲೆ ಯಾರೋ ಪಾರ್ಟಿಗಳು ಬಂದು ಅದರಲ್ಲಿರುವುದು ಸರಿಯಾಗಿಲ್ಲ ಎಂದು ಹೇಳಿದಾಗ ಅವರು ಪೋಸ್ಟು ಆಫೀಸಿಗೇ ಹೋಗಿ ಅಲ್ಲಿಂದ ಪತ್ರವನ್ನು ತೆಗೆದು ಅದನ್ನು ಪುನಃ ತಿದ್ದಿ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿ ಮುಗಿಸಿಬಿಟ್ಟರು. ಇದನ್ನು ಪತ್ತೆ ಹಚ್ಚಬೇಕೆಂದು ನಿಮ್ಮ ಇಲಾಖೆಯಲ್ಲಿರುವ ಒಬ್ಬರು ಇಂಟಲಿಜೆನ್ ಆಫೀಸರಿಗೆ ಹೇಳಿದಾಗ ಅವರು ಊರಿನೊಳಗೆ ಇರುವ ಟಿ.ಬಿ.ಗೆ ಬಂದು ಅದಕ್ಕೆ ಸಂಬಂಧಪಟ್ಟ ಪಾರ್ಟಿಗಳನ್ನು ಕರೆಸಿ ಅವರಿಂದ ಬರುವ ಮಾಮೂಲುಗಳನ್ನು ವಸೂಲು ಮಾಡಿಕೊಂಡು ಇಲ್ಲಿ ನಡೆದಿರುವುದೆಲ್ಲಾ ಸುಳ್ಳು ಎಂದು ಹೇಳಿ ಹೊರಟು ಹೋದರು. ಇಲ್ಲಿ ನಡೆದಿರುವುದೆಲ್ಲಾ ಸತ್ಯಕ್ಕೆ ದೂರವಾದುದು ಎಂದು ಯಾರಾದರೂ ಇಲ್ಲಿ ಪ್ರೂವ್ ಮಾಡಿದರೆ ಆಗ ನಾನು ಈ ಸಭೆಯ ಸದಸ್ಯತ್ವಕ್ಕೂ ಕೂಡ ರಾಜಿನಾಮೆ ಕೊಡಲು ಸಿದ್ಧನಾಗಿದ್ದೇನೆ. ಇಂತಹ ಅಧಿಕಾರಿಗಳನ್ನು ರಿಜಿಸ್ಟ್ರೇಷನ್ನು ಇಲಾಖೆಯಲ್ಲಿ ಇಟ್ಟುಕೊಂಡು ಇದ್ದೀರಿ. ಇವರೆಲ್ಲಾ ಸಮಾಜ ಘಾತುಕರು ಮತ್ತು ಸಮಾಜ ದ್ರೋಹಿಗಳು. ಇಂತಹ ಸಮಾಜ ದ್ರೋಹಿಗಳನ್ನು ಇನ್ನೂ ಅಧಿಕಾರದಲ್ಲಿ ಇಟ್ಟುಕೊಂಡಿದ್ದಾರೆ. ಇವರು ಬಸವಣ್ಣನ ಕುಲದವರು, ಇವರು ಗೋಕುಲದವರು, ಇವರು ಆ ಕುಲದವರು ಮತ್ತು ಈ ಕುಲದವರು ಎಂದು ಹೀಗೆ ಮುಂದುವರಿಸಿಕೊಂಡು ಬರುತ್ತಿದ್ದರೆ ಇದರಿಂದ ಸರಕಾರಕ್ಕೆ ಒಳ್ಳೆಯದಾಗುವುದಿಲ್ಲ. ಇಲ್ಲಿರುವ ಒಬ್ಬರು ಇಂಟಲಿಜೆನ್ಸ್ ಆಫೀಸರವರಿಗೆ ನಮ್ಮ ಕಡೆ ಬಂದಾಗ ಅವರಿಗೆ ನಾನೇ ಹೇಳಿದೆ. ಇದುವರೆಗೆ ನೀವು ಮಾಡಿರುವಷ್ಟು ಹಣ ಸಾಕು, ಇನ್ನು ಮುಂದಾದರೂ ಸ್ವಲ್ಪ ಒಳ್ಳೆಯ ಬುದ್ಧಿಯಿಂದ ಜನಕ್ಕೆ ಒಳ್ಳೆಯ ಕೆಲಸ ಮಾಡುವ ಕೆಲಸ ಕಲಿತುಕೊಳ್ಳಿ ಎಂದು ಹೇಳಿದೆ. ಹಾಗೆ ಇಲ್ಲಿರುವ ತಾಲ್ಲೂಕು

ಅಫೀಸಿನಲ್ಲಿ ಒಬ್ಬರು ಗುಮಾಸ್ತರು ಮೂರು ವರ್ಷಗಳಿಂದಲೂ ಇದ್ದಾರೆ. ಇವರಿಗೆ ಈ ಊರನಲ್ಲಿ ಸಿಟಿಯಲ್ಲಿ ಒಂದು ಸ್ಶೈಟು ಹಾಗೂ ರಾಜಾಜಿನಗರದಲ್ಲಿ ಒಂದು ಸ್ಶೈಟು ಹೀಗೆ ಮಾಡಿಕೊಂಡು ಸೌಖ್ಯವಾಗಿದ್ದಾರೆ. ಇವರು ಬರೀ ಫಸ್ಟ್ ಡಿವಿಜನ್‌ನಲ್ಲಿರುವ ಗುಮಾಸ್ತರು. ಇವರು ಸುಮಾರು ಮೂರು ವರ್ಷಗಳಿಂದಲೂ ಇಲ್ಲದ ತೊಂದರೆಗಳನ್ನು ಜನಕ್ಕೆ ಕೊಡುತ್ತಿದ್ದಾರೆ. ಇವರು ಇಲ್ಲಿಯವರೆಗೆ ಇರುವುದು ಸಾಕು, ಮುಂದೆ ಎಲ್ಲಿಗಾದರೂ ಇವರನ್ನು ವರ್ಗ ಮಾಡಿ ಎಂದು ಮೇಲಿನ ಅಧಿಕಾರಿಗಳಿಗೆ ಹೇಳಿದರೆ ಅವರುಗಳು ಇಲ್ಲಿಗೆ ಬಂದಾಗಲೆಲ್ಲಾ ಇದನ್ನು ವಿಚಾರ ಮಾಡುತ್ತೇವೆ, ಮಾರ್ಚಿ 31 ನೇ ತಾರೀಖು ಬರಲೀ, ಎಪ್ರಿಲ್ ಬರಲಿ ಎಂದು ಹೇಳುತ್ತಲೇ ಬರುತ್ತಿದ್ದಾರೆ. ಇದು ಬಹು ಸಣ್ಣ ವಿಷಯ ಎಂದು ನಾನು ಇಲ್ಲಿ ಹೇಳಲು ತಯಾರಿಲ್ಲ. ಇವರಿಂದ ಸುಮಾರು ಒಂದು ಲಕ್ಷ ಅರವತ್ತು ಸಾವಿರ ಜನಕ್ಕೆ ಬಹಳ ಹಿಂಸೆಯಾಗುತ್ತಿದೆ. ಆದರಿಂದ ಇಲ್ಲಿ ಹೇಳಬೇಕಾಗಿ ಬಂಧಿದೆ.

ಇನ್ನು ಪಶುಸಂಗೋಪನೆ ವಿಚಾರದಲ್ಲ ಎಷ್ಟುಮಟ್ಟಿಗೆ ಕೆಲಸಗಳು ಆಗುತ್ತಿವೆ ಎಂದು ಇಲ್ಲಿ ಹೇಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲರುವ ಪಶುಗಳನ್ನೆಲ್ಲಾ ಕಾಪಾಡಬೇಕು ಎಂದು ಮಾನ್ಯ ಮಂತ್ರಿಗಳು ಡೆನ್ ಮಾರ್ಕು, ಹಾಲೆಂಡು ಇತ್ಯಾದಿ ದೇಶಗಳಲ್ಲಿ ಹೋಗಿ ನೋಡಿಕೊಂಡು ಬಂದು ಅಲ್ಲಿ ಹಾಲು ಹರಿಯುತ್ತಿರುವಂತೆ ಇಲ್ಲೂ ಕೂಡ ಹಾಲು ಹರಿದು ಕಾಮಧೇನುವಿನಂತೆ ಮಾಡಿದರೂ ಕೂಡ ಹಾಲು ಬರುವುದರೊಳಗೆ ಗಂಗಾ ನದಿ ಬತ್ತಿ ಹೋಯಿತು ಕೃಷ್ಣಾ ನದಿ ಬತ್ತಿ ಹೋಯಿತು ಮತ್ತು ಇತರ ಹಳ್ಳಗಳೂ ಬತ್ತಿ ಹೋದವು. ಮಿಲ್ಕ್ ಪ್ರಾಜೆಕ್ಟು ಸ್ಕೀಮನ್ನು ಇಲ್ಲೂ ಮಾಡಬೇಕೆಂದು ಸುಮಾರು ಒಂದೂವರೆಯಿಂದ ಎರಡು ಕೋಟಿಯಷ್ಟು ವೆಚ್ಚದಲ್ಲಿ ಮಾಡಬೇಕೆಂದು ಇದಕ್ಕಾಗಿ ಒಂದು ದೊಡ್ಡ ಬಿಲ್ಡಿಂಗನ್ನೂ ಕಟ್ಟಿಸಿ ಅದನ್ನು ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮತ್ತು ಅವರ ಕುಟುಂಬದವರಿಂದ ಇದನ್ನು ಓಪನ್ ಮಾಡಿಸಿಬಿಟ್ಟರು. ಆದರೆ ಈ ಖಾತೆಯಿಂದಯಿಂದ ಇನ್ನೂ ಏನೂ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದು ಸರಕಾರದ ತಪ್ಪಲ್ಲ ಮತ್ತು ಮಂತ್ರಿಗಳ ತಪ್ಪೂ ಅಲ್ಲ. ಏಕೆಂದರೆ, ಈಗ ದನಕರುಗಳಿಗೆ ಮೇವೇ ಸಿಗುತ್ತಿಲ್ಲ. ಮೇಯುವ ಹುಲ್ಲೇ ಇಲ್ಲದೇ ಹೋದರೆ ತಾವು ಹಾಲನ್ನು ಕರೆಯುವುದಾದರೂ ಎಲ್ಲಿಂದ ? ಈ ಹಾಲು ಬಿಟ್ಟು ಕಳ್ಳಿ ಹಾಲು ಕರೆಯಬೇಕು ಅಷ್ಟೇ. ಅದೂ ಕೂಡ ಮುಳ್ಳು ಕಲ್ಲುಗಳಿಂದ ಕೂಡಿ ಹಾಳಾಗಿ ಹೋಗಿದೆ. ಹಾಲಿನ ಕೇದ್ರಗಳು ಸರಿಯಾಗಿ ಕೆಲಸ ಮಾಡಲಿಲ್ಲ ಮತ್ತು ಅದರಿಂದ ಈ ಕೇಂದ್ರದ ಕೆಲಸಗಳು ಫೇಲ್ ಆಗಿವೆ. ಇದು ಕಂದಾಯ ಸಚಿವರ ತಪ್ಪಲ್ಲ. ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವುದರಿಂದ ಇಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ ಇದಕ್ಕಾಗಿ ಹೆಚ್ಚು ವೆಚ್ಚಮಾಡಿದ್ದೇವೆಂದು ಹೇಳುವುದು ಅಷ್ಟು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ವಲ್ಪ ದೂರದೃಷ್ಟಿಯಿಂದ ಇಲ್ಲಿ ಎಲ್ಲ ವಿಚಾರಗಳನ್ನೂ ಹೇಳಬೇಕು. ಇವೊತ್ತು ಹಸುಗಳನ್ನು ಕೊಂಡುಕೊಳ್ಳಬೇಕೆಂದು ನೂರು ಅಥವಾ ನೂರೈವತ್ತು ಎಂದು ಸಾಲ ಕೊಟ್ಟರೆ ಅವರಿಗೆ ಹಸುಗಳು ಎಲ್ಲಿಂದ ಸಿಗಬೇಕು ? ಇವೊತ್ತು ಇರುವ ಹಸುಗಳು ಮೇವಿಲ್ಲದೆ ಸಾಯುತ್ತಿವೆ. ಅಂತಹ ದನಗಳನ್ನು ನೋಡಬೇಕಾದರೆ ಇವೊತ್ತು ತಾವು ಲಕ್ಕುವಳ್ಳಿ ಸಾಬರು ದನ ಕುಯ್ಯುತ್ತಿದ್ದಾರೆ. ಅಲ್ಲಿಗೆ ಹೋಗಿ ನೋಡಬಹುದು. ತಾವೇನೋ ಅಲ್ಲಿ ಒಳ್ಳೆಯ ಅಮೃತ ಮಹಲ್ ದನಗಳನ್ನು ಮಾಡಬೇಕು ಹಳ್ಳಿಕಾರ್ ದನಗಳನ್ನು ಮಾಡಬೇಕೆಂದು ಮತ್ತು ಅದರ ತಳಿಗಳ ಅಭಿವೃದ್ಧಿ ಮಾಡಬೇಕೆಂದು ಹೇಳಿದರೂ ಅದರಂತೆ ಅಭಿವೃದ್ಧಿಯಾಗುತ್ತಿಲ್ಲ. ಇದಕ್ಕೆ ಕಾರಣ ದನಕರುಗಳಿಗೆ ಸರಿಯಾದ ಮೇವೇ ಸಿಗುತ್ತಿಲ್ಲ. ಮೈಸೂರು ಸಂಸ್ಥಾನದಲ್ಲೇ ಹಿಂದೆ ಹೆಸರುವಾಸಿಯಾದ ಎತ್ತುಗಳು ಹೋರಿಗಳು ಎಂದು ಇದ್ದವು, ಇವೊತ್ತು ಅಂತಹ ಪಶು ಸಂಗೋಪನೆ ಕ್ಷೇತ್ರದಲ್ಲ ಮೈಸೂರು ಸಂಸ್ಥಾನದಲ್ಲಿ ಇಲ್ಲದೇ ಹೋಗಿದ್ದರೆ ಇಂತಹ ಪ್ರಾಜೆಕ್ಟು ಎಂದು ಮಾಡಿ ಇದನ್ನು ಯಾವರೀತಿ ಉಳಿಸುತ್ತೀರಿ ? ನನಗಂತೂ ಅರ್ಥವಾಗುತ್ತಿಲ್ಲ.

ಇನ್ನು ಕುದರೆಗಳನ್ನು ಸಾಕಬೇಕೆಂದು ಕುಣಿಗಲ್ಲಿನಲ್ಲಿ ಒಂದು ಸ್ಟಡ್ ಫಾರಂ ಮಾಡಿದ್ದಾರೆ. ಇಲ್ಲಿ ಎಷ್ಟು ತರಹದ ಕುದುರೆಗಳನ್ನು ತಂದು ಅಭಿವೃಧ್ಧಿಮಾಡಿದ್ದೀರಿ ? ಇದಕ್ಕೆ ವೆಚ್ಚವೇನು ಮಾಡುತ್ತಿದ್ದೀರಿ ? ಇಲ್ಲಿ ಎಷ್ಟು ಕುದುರೆಮರಿಗಳಾದುವು ಮತ್ತು ಇಲ್ಲಿ ಏನೇನು ನಡೆಯುತ್ತವೆ ಇದನ್ನು ಪರಿಶೀಲನೆ ಮಾಡಲು ಒಂದು ಕಮಿಟಿ ಮಾಡಿ ಎಂದು ಹೇಳಿದರೂ ಅದನ್ನು ಮಾಡಿಲ್ಲ ಮತ್ತು ಇಲ್ಲಿಯವರೆಗೆ ಎಷ್ಟು ಹಣ ವೆಚ್ಚವಾಗಿದೆ ಎನ್ನುವುದೂ ತಿಳಿದಿಲ್ಲ. ಇದನ್ನೆಲ್ಲಾ ಪಶುಸಂಗೋಪನೆ ಇಲಾಖೆಯಲ್ಲಿ ಸೇರಿಸಿ ಇದರಲ್ಲಿ ತರಬೇತಿ ಕೊಡಲು ಎಷ್ಟು ಗೂಳಿಗಳನ್ನು ಸಂಪಾದಿಸಿದ್ದೀರಿ ? ಇದರಲ್ಲಿ ಕೋಳಿ ಸಾಕಾಣಿಕೆ, ಗುಬ್ಬಚ್ಚಿ ಫಾರಂಗಳು ಮಾಡಬೇಕೆಂದು ಮತ್ತು ಕ್ರಾಷ್ ಪ್ರೋಗ್ರಾಂನಂತೆ ಕೆಲಸಗಳನ್ನು ಮಾಡಬೇಕೆಂದು ಇಲ್ಲಿ ಸೇರಿಸಿದ್ದೀರಿ. ಇದೂ ಅಲ್ಲದೆ ಕೇಂದ್ರದ ಮಂತ್ರಿಗಳು ವಾರಕ್ಕೆ ಮೂರು ದಿನ ಅಕ್ಕಿ ತಿನ್ನುವುದನ್ನು ಬಿಡಬೇಕು. ಇದಕ್ಕೆ ಬದಲಾಗಿ ಎಲ್ಲರೂ ಮಾಂಸವನ್ನು ತಿನ್ನಬೇಕು ಎಂದರೆ ಇವೊತ್ತು ನೀವು ಕೋಳಿ ಸಾಕಾಣಿಕೆ ಮಾಡುತ್ತಿರುವ ಕೋಳಿಗಳೆಲ್ಲಾ ಉಳಿಯುವುವೇ ? ಇದನ್ನು ಯಾರೂ ಯೋಚನೆ ಮಾಡಲಲ್ಲ. ಒಂದು ಕಡೆ ಗಂಡ ಹೆಂಡತಿ ಒಂದು ಕೋಳಿ ಫಾರಂ ಎಂದು ಮಾಡಿಕೊಂಡರೆ ಅಲ್ಲಿ ಅವರು ಸಾಕಿದ ಕೋಳಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳಿಂದ ಒಂದು ದಿನಕ್ಕೆ ಎರಡು ಮೊಟ್ಟೆಗಳು ಎಂದು ಬಂದರೆ ಅದನ್ನು ತಕ್ಷಣ ಅಲ್ಲೇ ಇರುವ ಅವರ ಮಕ್ಕಳು ತಿಂದುಬಿಡುತ್ತಾರೆ. ಇದರಿಂದ ನಿಮಗೆ ಹೆಚ್ಚು ಮೊಟ್ಟೆಗಳು ಬಂದಂತಾಗುವುದೇ ? ಯಾವಾಗಲೂ ಯಾವ ಪ್ರೋಗ್ರಾಂ ಮಾಡಬೇಕಾದರೂ ಅದಕ್ಕೆ ಸರಿಯಾದ ಒಂದು ಇಂಪಟಸ್ ಕೊಟ್ಟು ಅದನ್ನು ಮಾಡಿದರೆ ಅದು ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಅದರಿಂದೇನೂ ಉಪಯೋಗ ವಿಲ್ಲ.

ಇನ್ನು ಪಶುಸಂಗೋಪನೆ ಇಲಾಖೆಯಲ್ಲಿ ದನಕರುಗಳಿಗೆ ಸರಿಯಾಗಿ ಔಷಧಿಗಳನ್ನು ಕೊಡಲು ಡಾಕ್ಟರುಗಳೇ ಇಲ್ಲ. ದನಗಳಂತಹ ಮೂಕ ಪ್ರಾಣಿಗಳ ನಾಡಿಯನ್ನು ಸರಿಯಾಗಿ ಪರೀಕ್ಷೆ ಮಾಡಿ ಕೊಡುವಂತಹ ಡಾಕ್ಟರುಗಳಿಗೆ ತಾವು ಇಲ್ಲಿ 180 ರಿಂದ 200 ಎಂದು ಸಂಬಳ ಕೊಟ್ಟರೆ ಅದು ಸಾಕಾಗುತ್ತದೆಯೇ ? ಇದರ ಬಗ್ಗೆ ಅಲ್ಲಿರುವ ಡಾಕ್ಟರುಗಳು ಸರಕಾರಕ್ಕೆ ಬಂದು ಹೇಳಿಕೊಂಡ ಮೇಲೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಾಲ್ಕು ಸ್ಟೇಟ್‌ಮೆಂಟುಗಳನ್ನು ಕೊಟ್ಟರು ಮತ್ತು ಅಮೇಲೆ ವಿದ್ಯಾಮಂತ್ರಿಗಳು ಐದು ಸ್ಟೇಟ್‌ಮೆಂಟುಗಳನ್ನು ಕೊಟ್ಟರು ಏನೋ ನಮ್ಮ ರೆವೆನ್ಯೂ ಮಂತ್ರಿಗಳೂ ಕೂಡ ಏನು ಮಾಡುತ್ತಾರೋ ನೋಡಬೇಕಾಗಿದೆ.

ತಮ್ಮಲ್ಲಿ ಇಲ್ಲಿ ಒಂದು ವಿಚಾರ ಅರಿಕೆ ಮಾಡಬೇಕಾಗಿದೆ. ಇವೊತ್ತಿನ ದಿವಸ ವೆಟರ್‌ನರಿ ಇಲಾಖೆಯಲ್ಲಿ ಪದವೀಧರರಾಗಿ ಇರುವ ಯುವಕರುಗಳಿಗೆ ಸರಿಯಾದ ಸಂಬಳ ಸಾರಿಗೆಗಳನ್ನು ಇತರ ಕಡೆಗಳಲ್ಲಿರುವಂತೆ ಕಲ್ಪನೆ ಮಾಡಿಕೊಡದೇ ಹೋದರೆ ಪಶುಸಂಗೋಪನೆ ಇಲಾಖೆಯಲ್ಲಿ ಚೆನ್ನಾಗಿ ಕೆಲಸಮಾಡುವುದಾದರೂ ಹೇಗೆ ಎಂದು ಇಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಇದನ್ನು ಮಾಡಲು ಆಗದೇಹೋದರೆ ಈಗಿರುವ ಅಗ್ರಿಕಲ್ಚರು ಯೂನಿವರ್ಸಿಟಿಯನ್ನು ಅಬಾಲಿಷ್ ಮಾಡಿಬಿಡಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿರುವ ಡಾಕ್ಟರುಗಳಿಗೆ ಈಗಾಗಲೇ ಸಂಬಳವನ್ನು ಹೆಚ್ಚಿಸ ಲಾಗಿದೆ. ಇದರ ಜೊತೆಗೆ ಮೆಡಿಕಲ್ ಗ್ರಾಜುಯೇಟುಗಳಿಗೆ ಇತರ ಟೆಕ್ನಿಕಲ್ ಗ್ರಾಜುಯೇಟರು ಗಳಿಗೆ ಯಾವ ರೀತಿ ಇರಬೇಕೋ ಅದೇ ರೀತಿ ಅಗ್ರಿಕಲ್ಚರು ಗ್ರಾಜುಯೇಟುಗಳಿಗೂ ಇರಬೇಕೆಂದು ಸರಕಾರ ಈಗಾಗಲೇ ತೀರ್ಮಾನ ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ —ಆ ರೀತಿ ಕಷ್ಟದಿಂದ ಕೆಲಸ ಮಾಡುವ ವೈದ್ಯರುಗಳಿಗೆ ಹೆಚ್ಚು ಸಂಬಳ ಕೊಡಬೇಕಾದುದು ಒಳ್ಳೆಯದು. ಇದಕ್ಕಾಗಿ ರೆವೆನ್ಯೂ ಸಚಿವರಿಗೆ ಈ ಸಭೆಯವರೆಲ್ಲರೂ ಋಣಿಯಾಗಿದ್ದಾರೆ ಎಂದು ನಾನಾದರೂ ಹೇಳುತ್ತೇನೆ. ಅಲ್ಲದೆ ಇಂತಹ ವೆಟರ್‌ನರಿ ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸ್ಟಾಕ್‌ಮೆನ್‌ಗಳು ಇರುವುದಿಲ್ಲ. ಇವರಿಗೆಲ್ಲಾ 30, 40 ಅಥವಾ 50 ಎಂದು ಸಂಬಳ ಕೊಡುತ್ತಿದ್ದಾರೆ. ನಮ್ಮ ಡಾಕ್ಟರ್ ಅಳ್ವರವರು 12 ಸೀಸೆಗಳಲ್ಲಿ ಕೆಂಪು ನೀರು ತುಂಬಿ ಔಷಧಿ ಎಂದು ಬಂದವರಿಗೆಲ್ಲಾ ಕೊಡುತ್ತಿರುತ್ತಾರೆ. ಯಾರು ಬೇಕಾದರೂ ಕುಡಿಯಬಹುದು, ಇಲ್ಲದಿದ್ದರೆ ಬಿಡಬಹುದು. ಇಂತಹ ವೆಟರ್ನರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಸ್ಟಾಕುಮೆನ್‌ಗಳು, ಸಾಲಿಸ್ಟ್ರಿಗಳು ಹಾಗೂ ಡಾಕ್ಟರುಗಳು ಇರಬೇಕು. ಈಗ ಮೈಸೂರು ರಾಜ್ಯದಲ್ಲಿ ಎಲ್ಲಿ ನೋಡಿ ದರೂ ಆಸ್ಪತ್ರೆಗಳನ್ನು ಮಾಡುತ್ತಾ ಬಂದಿದ್ದೇವೆಂದು ಇಲ್ಲಿ ಹೇಳುತ್ತಾರೆ ಅವರು 8, 10, 12, 30 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ ಎಂದು ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ಇಲ್ಲಿರುವ 45 ಆಸ್ಪತ್ರೆಗಳಲ್ಲಿ 10 ಆಸ್ಪತ್ರೆಗೆ ಒಬ್ಬರು ಡಾಕ್ಟರಂತೆ ಕೂಡ ಇಲ್ಲ. ಡಾಕ್ಟರು ಇದ್ದರೆ ಕಾಂಪೌಂಡರು ಇಲ್ಲ, ಸಾಲಿಸ್ಟ್ರಿಗಳು ಇರುವುದಿಲ್ಲ. ಸುಮ್ಮನೆ 550 ಆಸ್ಪತ್ರೆಗಳನ್ನು ಮಾಡಿದ್ದೇವೆ ಎಂದು ಹೇಳಿ ಅಲ್ಲಿ ಸರಿಯಾಗಿ ಇರಬೇಕಾದಂತೆ ಮೂರು ಮೂರು ಜನ ಕೆಲಸ ಮಾಡಲು ಅಧಿಕಾರಿ ಗಳು ಇಲ್ಲದೇ ಹೋದರೆ ಅವರಿಂದೇನು ಒಳ್ಳೆಯ ಕೆಲಸಗಳನ್ನು ನಾವು ನಿರೀಕ್ಷೆ ಮಾಡಬಹುದು ? ತಾವೇ ಯೋಚನೆ ಮಾಡಬೇಕು. ಆದುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಕಾಂಪೌಂಡರುಗಳಿಗೆ ಹಾಗೂ ಡಾಕ್ಟರುಗಳಿಗೆ ಟ್ರೇನಿಂಗು ಕೊಡುವ ವ್ಯವಸ್ಥೆ ಮಾಡಿ ಇಲ್ಲಿ ಸರಿಯಾದ ರೀತಿಯಲ್ಲಿ ಎಲ್ಲ ಸಿಬ್ಬಂದಿಗಳೂ ಇರುವಂತೆ ಮಾಡಿದರೆ ಪಶುಸಂಗೋಪನ್ ಇಲಾಖೆಯೂ ಒಳ್ಳೆಯ ಮಟ್ಟದಲ್ಲಿ ಇರಲು ಅನುಕೂಲವಾಗುತ್ತಿದೆ.

ಕ್ಷಾಮ ಇದ್ದಂಥ ಚಿತ್ರದುರ್ಗವನ್ನೂ ಒಂದೇ ಮಾಡುತ್ತೀರಿ, ತುಮಕೂರನ್ನೂ ಒಂದೇ ಮಾಡು ತ್ತೀರಿ, ಗುಂಡ್ಲುಪೇಟೆಯನ್ನೂ ಒಂದೇ ಮಾಡುತ್ತೀರಿ, ಬಿಜಾಪುರವನ್ನೂ ಒಂದೇ ಮಾಡುತ್ತೀರಿ. ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಎರಡು ಮೂರು ಜನ ತಿನ್ನು ವುದಕ್ಕೆ ಗತಿ ಇಲ್ಲದೇ ತಮ್ಮ ಹೆಂಡರುಮಕ್ಕಳನ್ನು ಮನೆಯಿಂದ ಆಚೆಗೆ ಕಳುಹಿಸಿದ್ದಾರೆ. ಇಂತಹ ಒಂದು ಪಟ್ಟಿಯೇ ನನ್ನಲ್ಲಿ ಇದೆ, ಅದನ್ನು ಓದು ಎಂದರೆ ಓದುತ್ತೇನೆ. ನಮ್ಮ ಪಕ್ಕದಲ್ಲಿ ಇರತಕ್ಕ ವರು ಮೂರು ತಿಂಗಳು ಎರಡು ತಿಂಗಳು ಮಕ್ಕಳನ್ನು ಕಂಕುಳಿನಲ್ಲಿಟ್ಟುಕೊಂಡು ನಮ್ಮ ಗಂಡಂದಿರು ನಮ್ಮನ್ನ ಸಾಕುವುದಿಲ್ಲ ಅಂತ ಹೇಳಿ ಆಚೆಗೆ ತಳ್ಳಿದ್ದಾರೆ, ನಮಗೆ ಸಹಾಯ ಮಾಡುವುದಿಲ್ಲವೇ ಎಂದು

ಕೇಳುತ್ತಾ ಇರುವಾಗ, ಇಂತಹ ಕಠಿಣ ಪ್ರಸಂಗ ಇರುವಾಗಲೂ ಚತ್ರಿಯವರು ಕಲ್ಯಾಣಕ್ಕೆ ನಡೆದು ಕೊಂಡು ಹೋಗಿ, ಪ್ರೋಗ್ರಾಂ ಹಾಕಿಕೊಂಡು ಸುತ್ತಾಡಿ ಪರಿಸ್ಥಿತಿಯನ್ನು ತಿಳಿದುಕೊಂಡು ಬರುತ್ತಾ ಇದ್ದಾರೆ ಯಾರು ಎಲ್ಲಿ ಸತ್ತರೂ ಚಿಂತೆ ಇಲ್ಲ ಎಂದು ಹೇಳಿದರೆ when Rome was burning Nero was fiddling ಅಂತ ಹೇಳುತ್ತಾರಲ್ಲಾ ಆ ರೀತಿ ಆಯಿತು. ಜನರು ಅನ್ನ ಇಲ್ಲದೇ ಕೂಲಿ ಮಾಡುತ್ತಾ ಇದ್ದಾರೆ, ಒಂದು ಸಾವಿರ ಜನ ಕೂಲಿ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾ ಇದ್ದರೂ ಕೂಡ, ಪರಿಹಾರ ಕಮಿಟಿಯ ಕಮಿಷನರು, ಮತ್ತು ಇಂಡಿಯಾ ಸರ್ಕಾರದಿಂದ ಬಂದಿದ್ದ ಯಾರ್ಡಿಯವರು ಅಷ್ಟು ಜನ ಕೆಲಸ ಮಾಡುತ್ತಿಲ್ಲ ಎಂದು ಹೇಳಬೇಕಾದರೆ ಸರ್ಕಾರದ ವತಿಯಿಂದ ಹೇಳುವಾಗ ಸತ್ಯಕ್ಕೆ ದೂರವಾದ ಅಂಕಿಸಂಖ್ಯೆಗಳನ್ನು ಹೇಳಬೇಡಿ. ಇವತ್ತು 3-4 ಸಾವಿರ ಜನ ಕೆಲಸ ಮಾಡುತ್ತಾ ಇದ್ದಾರೆ. ಈಚಲು ಗೆಡ್ಡೆ ತಿನ್ನುತ್ತಾ ಇದ್ದಾರೆ. ಎರಡು ದಿನ ತಿನ್ನಬಹುದು, ಮೂರನೆಯ ದಿನ ತಿಂದರೆ ಭೇದಿ ಆಗುತ್ತದೆ. ಕತ್ತಾಳೆ ಗೆಡ್ಡೆ ತಿನ್ನುತ್ತಾ ಇದ್ದಾರೆ, ಒಂದು ಎರಡು ದಿನ ತಿಂದರೂ ತಿನ್ನಬಹುದು. ಮೂರನೆಯ ದಿನ ತಿಂದರೆ ಉಳಿಯುವುದಿಲ್ಲ, ಅದು ಮಹಾ ಉಷ್ಣ, ಮೈ ಎಲ್ಲಾ ತೀಟೆಯಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಅದರಲ್ಲೂ ನಿಕೃಷ್ಟವಾದ ತಾಲ್ಲೂಕು ಎಂದರೆ ಸಿರಾ ತಾಲ್ಲೂಕು. ದುರದೃಷ್ಟ, ಅಲ್ಲಿ ಒಂದು ಲಕ್ಷ ಅರವತ್ತು ಸಾವಿರ ಜನ ಜೀವನ ಮಾಡಬೇಕಾಗಿದೆ. 5 ಸಾವಿರ ರೂಪಾಯಿ ಕೊಟ್ಟಿದ್ದೀರಿ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದೀರಿ, ಹೊಳಲ್ಕೆರೆಗೆ ಒಂದು ಲಕ್ಷ ರೂಪಾಯಿ, ಕೊಟ್ಟಿ ದ್ದೀರಿ, ಮೊಳಕಾಲ್ಮೂರು ತಾಲ್ಲೂಕಿಗೆ ಎರಡು ಲಕ್ಷ ರೂಪಾಯಿ ಕೊಟ್ಟಿದ್ದೀರಿ. ರಾಜ್ಯದಲ್ಲಿ ಹೀಗೆ ವ್ಯತ್ಯಾಸ ಮಾಡಬೇಡಿ. ಸಿರಾದವರೂ ನಿಮ್ಮವರೇ. ಮುಖ್ಯ ಮಂತ್ರಿಗಳು ಚಿತ್ರದುರ್ಗದಿಂದ ಬರುತ್ತಾರೆ ಅಂತ ಹೇಳಿ ಅವರ ಪ್ರೀತಿ ಗಳಿಸುವುದಕ್ಕೆ ಈ ರೀತಿ ಮಾಡುವುದಾದರೆ ಇದಕ್ಕಿಂತ ದ್ರೋಹ ಮತ್ತೊಂದು ಇಲ್ಲ. ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ, ಇವತ್ತು ನಮ್ಮಲ್ಲಿ ದನಗಳಿಗೆ ಹುಲ್ಲು ಇಲ್ಲ, ಜನಗಳು ಕೆಲಸ ಮಾಡುವುದಕ್ಕೆ ಕೂಲಿ ಪಡೆಯಲಿಕ್ಕೆ ಕೆಲಸ ಇಲ್ಲ ಇವತ್ತಿನ ದಿವಸ ನಿರ್ದಿಷ್ಟವಾಗಿ ಹೇಳುತ್ತೇನೆ ನಮ್ಮ ತಾಲ್ಲೂಕಿನಲ್ಲಿ ಕೆಲಸ ಪ್ರಾರಂಭ ಮಾಡಿದರೆ ಕೊನೆಯ ಪಕ್ಷ 20 ಸಾವಿರ ಜನರನ್ನು ಕೆಲಸಕ್ಕೆ ಕರೆದುಕೊಂಡು ಬರುವುದಕ್ಕೆ ನಾನು ತಯಾರಾಗಿದ್ದೇನೆ. ಹೃದಯ ವೈಶಾಲ್ಯತೆ ಇರತಕ್ಕ ಮಾನ್ಯ ಸಚಿವರು ತುಮಕೂರು ಜಿಲ್ಲೆಯಲ್ಲಿ ನತದೃಷ್ಟ ತಾಲ್ಲೂಕಾದ ಸಿರಾ ತಾಲ್ಲೂಕು, ಪಾವಗಡ ತಾಲ್ಲೂಕಿನ ಅರ್ಧಭಾಗ, ಗುಬ್ಬಿ ತಾಲ್ಲೂಕಿನ ಹೆಚ್ಚಿನ ಭಾಗಗಳಿಗೆ ಹೆಚ್ಚಿನ ನೆರವು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಭೂ ಸುಧಾರಣೆಯನ್ನು ಹಂತ ಹಂತವಾಗಿ ತಂದಿದ್ದೀರಿ, ಇದನ್ನು ಜಾರಿಗೆ ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ 2, 7, 8, 22, 33, 42 ಈ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ. ರೆವಿನ್ಯೂ ಸಂಬಂಧದಲ್ಲಿ ಈಗಾಗಲೇ ನಮ್ಮ ಸ್ನೇಹಿತರು ಚರ್ಚೆ ಮಾಡಿದ್ದಾರೆ. ಇದು ಬಹಳ ಮುಖ್ಯ ವಾದಂತಹ ಇಲಾಖೆಯಾಗಿ ಕೆಲಸ ಮಾಡುತ್ತಾ ಬಂದಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ವಗೈರೆ ಬಂದಮೇಲೆ ಬಹುಶಃ ರೆವಿನ್ಯೂ ಖಾತೆಗೆ ಕಡಮೆ ಕೆಲಸವಾಗಿರುವುದರಲ್ಲಿ ಅನುಮಾನವಿಲ್ಲ. ಆದರೂ ಇಷ್ಟು ಜನಗಳನ್ನು ಇಟ್ಟುಕೊಂಡು ಈ ಇಲಾಖೆ ನಡೆಯುತ್ತಾ ಇದೆ. ಹಿಂದೆ ನೇಮಕ ವಾಗಿದ್ದ ರಾಮಚಂದ್ರರಾಯರ ಸಮಿತಿ ವರದಿಯಲ್ಲಿ ಇದರಲ್ಲಿ ಸಾಕಾದಷ್ಟು ಖೋತಾ ಮಾಡ ಬಹುದು ಎಂದು ಅವರು ಪ್ರಸ್ತಾಪ ಮಾಡಿದ್ದರು. ಈಗಲೂ ಸಹ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡತಕ್ಕ ಕಾರ್ಯದಲ್ಲಿ ಎಷ್ಟು ಸಾಧ್ಯವಿದೆಯೋ ಅಷ್ಟು ಮಾಡಿ ಅಭಿವೃದ್ಧಿ ಆಗಬೇಕಾಗಿರತಕ್ಕ ಪಶು ಸಂಗೋಪನೆ, ವ್ಯವಸಾಯ ವಗೈರೆ ಖಾತೆಗಳಿಗೆ ಕೊಟ್ಟರೆ ದೇಶಕ್ಕೆ ಉತ್ತಮವಾದೀತು ಎಂದು ಕಾಣುತ್ತದೆ. ಹಿಂದೆ ಭಾಷಣ ಮಾಡಿದ ನಮ್ಮ ಸ್ನೇಹಿತರು 19 ಜನ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ ಎಂದು ಹೇಳುತ್ತಾ ಇದ್ದರು. ಇಷ್ಟು ಜನ ಏಕೆ ಇರಬೇಕೆಂಬುದು ಅರ್ಥವಾಗುವುದಿಲ್ಲ. ಇದುವರೆಗೂ ನಾವು ಎಷ್ಟೇ ಪ್ರಯತ್ನ ಪಡುತ್ತಾ ಇದ್ದರೂ ಸಹ ರೈತನಿಗೆ ನೇರ ಸಂಪರ್ಕ ಇಟ್ಟು ಕೊಂಡಿರತಕ್ಕ ತಾಲ್ಲೂಕು ಆಫೀಸು, ಸಬ್ ಡಿವಿಜನ್ ಆಫೀಸು ಮತ್ತು ಜಿಲ್ಲಾ ಕಚೇರಿಗಳಲ್ಲಿ ಆಯಾ ಕಾಲಕ್ಕೆ ಆಯಾ ಕೆಲಸಗಳು ಮುಗಿದು ರೈತನ ಕೆಲಸಕಾರ್ಯಗಳು ಯಾವ ಪ್ರಕಾರ ಉತ್ತಮ ರೀತಿಯಲ್ಲಿ ಆಗಬೇಕೋ ಅದು ಆಗುತ್ತಿಲ್ಲ. ಅಷ್ಟೇ ಅಲ್ಲದೆ ಜಮೀನಿಗೆ ಸಂಬಂಧಪಟ್ಟ ಪಹಣಿ, ಖಾತೆ, ಪಟ್ಟೆ ಇತ್ಯಾದಿ ಪ್ರತಿಯೊಂದು ವಿಷಯದಲ್ಲೂ ಇವತ್ತು ತಾಲ್ಲೂಕು ಆಫೀಸಿನಲ್ಲಿರತಕ್ಕ ಅಧಿಕಾರಿ ಗಳು, ತಹಸೀಲ್ದಾರರು ಬಹಳ ನಿಧಾನ ಪ್ರವೃತ್ತಿಯನ್ನು ಅನುಸರಿಸುತ್ತಾ ಇರುವುದರಿಂದ ಕೆಲಸಗಳು ಜಾಗ್ರತೆ ಆಗುವುದಕ್ಕೆ ಇವತ್ತು ಅವಕಾಶವಾಗುತ್ತಾ ಇಲ್ಲ. ಒಂದು ವಿಷಯ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ದಿವಾನ್ ಮಾಧವರಾಯರು ನಮ್ಮ ಹಳ್ಳಿಗೆ ಒಂದು ಸಾರಿ ಬಂದಿದ್ದರು. ಆಗ ಅವರು ಅಲ್ಲಿನ ಡೆಪ್ಯೂಟಿ ಕಮಿಷನರಿಗೆ ತಾವು ಅಧಿಕಾರದಲ್ಲಿ ಶಾಶ್ವತವಾಗಿ

(ಶ್ರೀ ಕೆ. ವಿ. ಬೈರೇಗೌಡ)

ಇರುವುದಿಲ್ಲ, ನಿಮಗೆ ಇದ್ದಂತಹ ಅವಕಾಶದಲ್ಲಿ 3-4 ವರ್ಷ ಇರುತ್ತೀರಿ ಪ್ರತಿಯೊಂದು ಡಿವಿಜನ್‌ನಲ್ಲಿ ಗ್ರಾಮಾಂತರದಲ್ಲಿ ಪ್ರವಾಸ ಮಾಡುವಾಗ ಪ್ರತಿಯೊಂದು ಕಡೆಯೂ ಅಲ್ಲಿರತಕ್ಕ ವ್ಯವಹಾರ ಏನಿದೆಯೋ ಅದೆಲ್ಲವನ್ನೂ ಪೂರ್ಣವಾಗಿ ಪರಿಹಾರ ಮಾಡಿಕೊಡಿ, ಅದೇ ರೀತಿ ರೆವಿನ್ಯೂ ಅಧಿಕಾರಿಗಳೂ ಕೂಡ ಟೂರ್ ಮಾಡಿ ಜನಗಳಿಗೆ ಇರತಕ್ಕ ತೊಂದರೆಗಳನ್ನು ಸಾಧ್ಯವಾದಷ್ಟು ಜಾಗ್ರತೆ ಪರಿಹಾರ ಮಾಡಿಕೊಡಬೇಕು. ಇದೇ ಪ್ರವಾಸ ಮಾಡುವುದರ ಉದ್ದೇಶ ಎಂದು ಹೇಳಿದರು. ಹೀಗೆ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡತಕ್ಕ ರೀತಿಯನ್ನು ತಿಳಿಸಿದರು. ಬಹುಶಃ ಅದೇ ರೀತಿ ಇವತ್ತು ನಮ್ಮ ಅಧಿಕಾರಿಗಳು ಗ್ರಾಮಾಂತರದ ಕಡೆ ಟೂರ್ ಹೋದಾಗ 90 ಭಾಗದ ಕೆಲಸಗಳನ್ನು ಅಲ್ಲಿಯೇ ಫೈಸಲು ಮಾಡಬೇಕು. ಆದರೆ ನಮ್ಮ ದುರ್ದೈವದಿಂದ ಇವತ್ತಿನ ದಿವಸ ನಮ್ಮ ಅಧಿಕಾರಿಗಳಿಗೆ ಆ ಒಂದು ರೀತಿಯ ಮನೋಭಾವ ಹೋಗಿದೆ ಎಂದು ಕಾಣುತ್ತದೆ. ಜಮಾಬಂದಿ ಮಾಡುತ್ತಾ ಇದ್ದರು, ಎಷ್ಟು ಉತ್ತಮವಾದ ಸನ್ನಿವೇಶದಲ್ಲಿ ಆ ಕೆಲಸ ಮಾಡತಕ್ಕ ವಾತಾವರಣ ಇರುತ್ತಾ ಇತ್ತು ಎಂಬುದು ನಮಗೆ ಗೊತ್ತಿದೆ. ಒಂದು ಕರ್ತವ್ಯ ಎಂಬ ದೃಷ್ಟಿಯಿಂದ ಅದನ್ನು ಮಾಡುತ್ತಾ ಇದ್ದರು. ಜಮಾಬಂದಿ ಬಂದಕೂಡಲೇ, ಎಲ್ಲಾ ಗ್ರಾಮಗಳಿಗೂ ಒಂದು ತಿಳಿವಳಿಕೆಯನ್ನು ಕೊಟ್ಟು ನ್ಯೂನತೆ ಏನಿದೆ ಅದನ್ನು ಅಲ್ಲಿಗೆ ತಂದು ಇತ್ಯರ್ಥ ಮಾಡಿಕೊಳ್ಳಬಹುದು ಎಂದು ಹೇಳುತ್ತಾ ಇದ್ದರು. ಇವತ್ತಿನ ದಿವಸ ಬಹುಶಃ ನಾಲ್ಕು ನಾಲ್ಕೂವರೆ ಗಂಟೆಗೆ ಜಮಾ ಬಂದಿಗೆ ಬಂದರೆ ಅರ್ಧಗಂಟೆಯಲ್ಲಿ ಎಲ್ಲಾ ಮುಗಿಸಿಕೊಂಡು ಹೊರಟು ಹೋಗುತ್ತಾರೆ, ಈ ರೀತಿ ಆಗಿದೆ. ನಮ್ಮ ರೈತವರ್ಗಕ್ಕೆ ಈ ಜಮಾಬಂದಿಯಿಂದ ಏನು ಅನುಕೂಲ ಕಲ್ಪನೆ ಮಾಡಿಕೊಡಬೇಕೆಂದು ಇತ್ತೋ, ಯಾವ ನಿಯಮಾವಳಿಗಳನ್ನು ಮಾಡಿದ್ದಾರೋ ಅದು ಪೂರ್ಣವಾಗಿ ಆಗುವ ಪರಿಸ್ಥಿತಿ ಇಲ್ಲ. ಹಿಂದೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಡೆಪ್ಯೂಟಿ ಕಮಿಷನರ ಮೀಟಿಂಗ್ ಕರೆದು ಈ ರೀತಿ ರೆವಿನ್ಯೂ ಖಾತೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು, ರೆವಿನ್ಯೂ ಖಾತೆಯಿಂದ ರೈತಾಪಿ ಜನರಿಗೆ ಯಾವ ವಿಧವಾದ ತೊಂದರೆಯೂ ಆಗಬಾರದು ಅಂತ ಹೇಳಿ ಅವರಿಗೆ ಮನವರಿಕೆ ಮಾಡಿಕೊಟ್ಟರು. ಅವರು ಹೇಳಿದ ರೀತಿಯಲ್ಲಿ ಕೆಲಸ ಮಾಡಿದರೆ 80 ಭಾಗದ ಕೆಲಸಕಾರ್ಯಗಳು ಇತ್ಯರ್ಥವಾಗುತ್ತದೆ. ಆದರೆ ಆ ರೀತಿ ಈ ದಿವಸ ಆಗುತ್ತಾ ಇಲ್ಲ. ಬಹುಶಃ ಒಂದು ನನಗೆ ಅನಿಸುತ್ತದೆ, ಈ ಜಿಲ್ಲಾಧಿಕಾರಿಗಳನ್ನು ಜಿಲ್ಲೆಗಳಿಗೆ ಹಾಕುವಾಗ ರೈತಾಪಿಜನರ ಕಷ್ಟಸುಖವನ್ನು ಯಾವ ರೀತಿ ಪರ್ಯಾಲೋಚನೆ ಮಾಡಬೇಕು, ಯಾವ ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಎಂಬ ಮನೋಭಾವ ಇರತಕ್ಕ ಅಧಿಕಾರಿಗಳನ್ನು ಜಿಲ್ಲಾ ಕಚೇರಿಗಳಿಗೆ ಕಳುಹಿಸಿದರೆ ಒಳ್ಳೆಯದಾಗುತ್ತದೆ. ನಿಮ್ಮ ಐ.ಎ.ಎಸ್. ಫಸ್ಟ್‌ಕ್ಲಾಸ್ ಪಾಸ್ ಮಾಡಿರುವವರಿಗೆ ನಿಮ್ಮ ಸೆಕ್ರೆಟೇರಿಯೆಟ್ ಇದೆ. ರೆಕಾರ್ಡ್ ಬಿಲ್ಡ್‌ಅಪ್ ಮಾಡಿ ಕೆಲಸ ಮಾಡುವುದಕ್ಕೆ ಅವರನ್ನು ಇಲ್ಲಿ ಇಟ್ಟುಕೊಳ್ಳಿ. ಇದನ್ನು ತಾವು ಆಲೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರೆವಿನ್ಯೂ ಬಾಬಿನಲ್ಲಿ ಜನ ಬಹಳ ನಿರೀಕ್ಷಣೆ ಮಾಡುತ್ತಾರೆ, ಅಲ್ಲಿ ಬಹಳ ಕೆಲಸ ಆಗಬೇಕಾಗಿದೆ. ಇದಕ್ಕೆ ಇರತಕ್ಕ ಆತಂಕ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಇದುವರೆಗೂ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಇದ್ದ ಪಟೇಲ್ ಶ್ಯಾನುಭೋಗರನ್ನು ಕಾರಣಾಂತರದಿಂದ ತೆಗೆದುಹಾಕಿದ್ದೇವೆ. ಪುನಃ ಅವರನ್ನು ನೇಮಕ ಮಾಡಲಿಲ್ಲ. ಇದರಿಂದಾಗಿ ತತ್ರಾಪಿ ಯಾವ ಕೆಲಸಗಳನ್ನು ಶ್ಯಾನುಭೋಗರು ಮಾಡಬೇಕೋ, ಎಂದರೆ ಲೆಕ್ಕ ಬರೆಯುವುದು, ಅದನ್ನು ಇವತ್ತು ಅವರು ಯಾರೂ ಮಾಡುತ್ತಾ ಇಲ್ಲ. ಒಂದು ವೇಳೆ ಯಾರಾದರೂ ಮಾಡುತ್ತಾ ಇದ್ದರೆ ಮನಸ್ಸು ಇಲ್ಲದೇ ಮಾಡುತ್ತಾ ಇದ್ದಾರೆ. ಸರ್ಕಾರದವರು ಕಡ್ಡಾಯವಾಗಿ ಅವರನ್ನು ಪುನರ್‌ನೇಮಕ ಮಾಡಿ ಆ ಕೆಲಸಕಾರ್ಯಗಳನ್ನು ಪೂರ್ತಿ ಮಾಡದಿದ್ದರೆ ಬಹುಶಃ ಅವರಿಂದ ರೈತಾಪಿಜನರಿಗೆ ಆಗಬೇಕಾದ ಸೌಕರ್ಯ ಅನುಕೂಲ ನಿಧಾನವಾಗಿ, ಅವರಿಗೆ ತೊಂದರೆ ಕೊಟ್ಟಹಾಗೆ ಆಗುತ್ತದೆ. ಸುಪ್ರೀಂ ಕೋರ್ಟಿನ ತೀರ್ಮಾನವೂ ಕೂಡ ಆಗಿದೆ. ಯಾವ ಕಾರಣದಿಂದ ಅವರನ್ನು ಭರ್ತಿ ಮಾಡಿಲ್ಲವೋ ತಿಳಿಯದು. ಪಂಚಾಯ್ತಿಗಳಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡದಿದ್ದರೆ ಯಾರು ಖಾಸಗಿ ಜನರು ಚೇರ್ಮನ್‌ರಾಗಿ ಉತ್ಸಾಹದಿಂದ ಕೆಲಸ ಮಾಡುತ್ತಾ ಇದ್ದಾರೋ ಅವರಿಗೆ ನಿರುತ್ಸಾಹವಾಗುತ್ತದೆ. ಲೆಕ್ಕಪತ್ರಗಳನ್ನು ನೋಡಿಕೊಳ್ಳುವುದು ಬಹಳ ಕಷ್ಟಕ್ಕೆ ಬರುತ್ತದೆ. ಸರ್ಕಾರದವರು ಕೋಟಿಗಟ್ಟಲೆ ಸಾಲ ಕೊಡುತ್ತಾ ಇರತಕ್ಕ ಸಮಯದಲ್ಲಿ ಈ ಲೆಕ್ಕಪತ್ರಗಳ ಜವಾಬ್ದಾರಿ ಬಹಳ ಅವಶ್ಯಕವಾಗಿದೆ, ಪಹಣಿ ಬರೆಯುವುದು ಮೊದಲಾದ ಕೆಲಸಗಳನ್ನು ಅವರು ಮಾಡಬೇಕಾಗಿದೆ. ಅವರು ಲೆಕ್ಕ ಬರೆಯದಿದ್ದರೆ ನಮಗೆ ಸರಿಯಾದ ಅಂಕಿಅಂಶಗಳು ಸಿಕ್ಕದೆ ಸಾಲ ದೊರೆಯುವುದಿಲ್ಲ. ಇವತ್ತು ಕೋಟಿಗಟ್ಟಲೆ ರೂಪಾಯಿಗಳನ್ನು ದೇಶದಲ್ಲಿ ಹಂಚಬೇಕು ಅದು ರೈತನಿಗೆ ಸಿಕ್ಕಬೇಕು ಎಂದು ಹೇಳಿ ನಾವು ಯಾವ

ಒಂದು ಪ್ರಯತ್ನವನ್ನು ಮಾಡುತ್ತಾ ಇದ್ದೇವೆಯೋ ಅದು ಸಫಲವಾಗುವುದಿಲ್ಲ. ಆದ್ದರಿಂದ ಈ ತೊಂದರೆಯನ್ನು ಬೇಗ ನಿವಾರಣೆ ಮಾಡಬೇಕು, ನಿಧಾನ ಮಾಡಬಾರದು ಎಂದು ತಮ್ಮ ಮುಖೇನ ಪ್ರಾರ್ಥನೆ ಮಾಡುತ್ತೇನೆ.

5-00 P.M.

ಹಣವನ್ನು ನಾನಾ ಅಭಿವೃದ್ಧಿ ಖಾತೆಗಳಿಗೆ ಪ್ರತಿ ವರ್ಷ ಹಂಚುತ್ತಾರೆ. ಆದರೆ ಅದರ ಹಂಚಿಕೆ ಹೇಗೆ ಯಾವಾಗ ಆಗುತ್ತದೆ ಎಂಬುದನ್ನು ನೋಡಬೇಕು. ಹತ್ತಾರು ವರ್ಷಗಳಿಂದ ನೋಡುತ್ತಿರುವಂತೆ ಪ್ರತಿ ವರ್ಷ ಮಾರ್ಚಿ ಆಖ್ಯೆರಿನಲ್ಲಿ ಖರ್ಚುಮಾಡಬೇಕೆಂದು 10-15 ದಿವಸಗಳ ಅವಕಾಶವಿರುವಾಗ ಹಣ ಒದಗಿಸಿದರೆ ಲಕ್ಷಗಟ್ಟಲೆ ಖರ್ಚುಮಾಡಲು ಸಾಧ್ಯವೇ ? ಈ ಮನೆಯಲ್ಲಿ ಬಜೆಟ್ ಮಂಜೂರಾದಮೇಲೆ ಸೆಕ್ರೆಟೇರಿಯೆಟ್ ಖಾತೆಗಳಿಗೆ ಹಂಚಬಹುದು. ಹಾಗೆ ಜಾಗ್ರತೆ ಹಂಚದೆ 8-10 ತಿಂಗಳಾದಮೇಲೆ ಮಾರ್ಚಿ ತಿಂಗಳಲ್ಲಿ ವರ್ಷಾಖೈರಿನೊಳಗಾಗಿ ಖರ್ಚುಮಾಡಬೇಕೆಂದು ಹಣ ಕೊಟ್ಟರೆ ಹೇಗೆ ಅದನ್ನು ಖರ್ಚುಮಾಡಲು ಸಾಧ್ಯ ? ಇಂಥ ಅವ್ಯವಸ್ಥೆ ಹೋಗಬೇಕು. ವರ್ಷ ಮುಗಿಯಲು ಇನ್ನೂ 4-5 ತಿಂಗಳಿರುವಾಗಲಾದರೂ ಕೊಡಲು ಪ್ರಯತ್ನಮಾಡಬೇಕು. ಇಲ್ಲದಿದ್ದರೆ ಅಧಿಕಾರಿಗಳು ರಿಕಾರ್ಡ್ ಬಿಲ್ಡಪ್ ಮಾಡಿ ಬೇಗ ಕೆಲಸ ಮುಗಿಸುವುದು ಕಷ್ಟವಾಗುತ್ತದೆ. ಹೀಗಾಗಿ ವರ್ಷಾಖೈರಿನಲ್ಲಿ ಹಣ ಕೊಟ್ಟರೆ ಲ್ಯಾಪ್ಸ್‌ಮಾಡಿ ಮುಂದಿನ ವರ್ಷಕ್ಕೆ ಹಾಕುತ್ತಾರೆ. ಹತ್ತಾರು ವರ್ಷಗಳಿಂದ ಇದೊಂದು ಜಾಡ್ಯವಾಗಿದೆ. ರೈತರಿಗೆ ಹಣ ಸಿಕ್ಕಿ ಸರಿಯಾಗಿ ಸಹಾಯವಾಗಬೇಕಾದರೆ ಬಜೆಟ್ ಅಧಿವೇಶನ ಮುಗಿದ ಕೂಡಲೆ ಬೇಗ ಆರೇಳು ತಿಂಗಳಲ್ಲಿ ಹಣ ಒದಗಿಸಿ ಖರ್ಚುಮಾಡುವುದಕ್ಕೆ ಅವಕಾಶ ಕೊಡಬೇಕು.

ಕೆಲವರು ಅಕ್ವಿಜಿಷನ್ ವಿಚಾರದಲ್ಲಿ ಪ್ರಸ್ತಾಪಮಾಡಿದ್ದಾರೆ. ಬೇರೆ ಕಡೆ ಹೇಗಿದೆ ಎಂಬುದು ನನಗೆ ಗೊತ್ತಿಲ್ಲ, ಬೆಂಗಳೂರಿನಲ್ಲಿ ಮತ್ತು ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಸಹಸ್ರಾರು ಎಕರೆ ಜಮೀನು ಎಲ್ಲಾ ಬಾಬುಗಳಿಗೂ ಅಕ್ವೈರ್ ಮಾಡಿಕೊಂಡಿದ್ದಾರೆ. ಕೈಗಾರಿಕೆಗಳಿಗೆ, ನಿವೇಶನ ಮುಂತಾದುವುಗಳಿಗೆ ಹೀಗೆ ಸ್ವಾಧೀನಪಡಿಸಿಕೊಂಡಿದ್ದಾರೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಬೆಂಗಳೂರು ನಗರದಲ್ಲಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿರುವುದರಿಂದ ವ್ಯವಸಾಯಕ್ಕೆ ಉತ್ತಮವಾಗಿದ್ದ ಒಳ್ಳೆಯ ಭೂಮಿಯೆಲ್ಲಾ ಕೈಬಿಟ್ಟುಹೋಗಿದೆ. ಆದುದರಿಂದ ಮುಂದೆ ಬೆಂಗಳೂರು ನಗರದ ಸುತ್ತಮುತ್ತ ಅಕ್ವಿಜಿಷನ್ ಮಾಡುವುದನ್ನು ತಡೆಗಟ್ಟಬೇಕಾದ್ದು ಅವಶ್ಯಕವಾಗಿದೆ. ಈ ಬಗ್ಗೆ ಆಶ್ವಾಸನೆ ಕೊಡಬೇಕು.

ಬೆಂಗಳೂರು ನಗರದ ಸರ್ವೆ ಕಾರ್ಯ ಬಹಳ ವರ್ಷಗಳಿಂದ ಆಗುವುದರಲ್ಲೇ ಇದೆ, ಹಿಂದೆ ಕಡಿದಾಳ್ ಮಂಜಪ್ಪನವರು ಇದಕ್ಕೆ ಮಾನ್ಯತೆ ಕೊಟ್ಟಿದ್ದರು, ಇದಕ್ಕೆ ಹೆಚ್ಚು ಸಿಬ್ಬಂದಿ ಸಹ ನೇಮಕವಾಗಿದೆ. ಆದರೆ ಹತ್ತಾರು ವರ್ಷಗಳ ಹಿಂದೆಯೇ ಆಗಬೇಕಾಗಿದ್ದ ಕೆಲಸ ಇನ್ನೂ ಆಗಿಲ್ಲ. ಈಗಲಾದರೂ ತ್ವರಿತಗೊಳಿಸಿ ಈ ಕಾರ್ಯ ಮಾಡಬೇಕು. ಹಾಗೆ ಮಾಡದೆ ನಿಧಾನ ಮಾಡಿದಷ್ಟೂ ಸಿಬ್ಬಂದಿ ಸಂಬಳಕ್ಕಾಗಿ ಹೆಚ್ಚು ಖರ್ಚಾಗುತ್ತದೆ. ಎಷ್ಟೋ ಕಡೆ ಕೆಲಸ ಪ್ರಾರಂಭಿಸಲು ಆಗಬೇಕಾದ ಫಾರ್ಮಾಲಿಟೀಸ್ ಆಗದೆ ಕೆಲಸ ತೆಗೆದುಕೊಳ್ಳದೆ ಬಹಳ ಕಾಲದವರೆಗೆ ಸಿಬ್ಬಂದಿ ಸಂಬಳ ಮಾತ್ರ ಪಡೆಯುತ್ತಿರುತ್ತಾರೆ. ಮೇಲಿನ ಅಧಿಕಾರಿಗಳು ಸಿಬ್ಬಂದಿಗೆ ಸರಿಯಾದ ಕೆಲಸ ಕೊಡಬೇಕು. ಹಾಗೆ ಮಾಡದಿದ್ದರೆ ಅಭಾವವಿರುವಾಗ ವೃಥಾ ಹಣ ಖರ್ಚು ಮಾಡಬೇಕಾಗುತ್ತದೆ. ಈ ರೀತಿ ಮಾಡುವುದು ಸರಿಯಲ್ಲ, ವಹಿಸಿರುವ ಕೆಲಸ ಬೇಗ ಮಾಡಿಸು ಪ್ರಯತ್ನ ಮಾಡಬೇಕು.

ರೆವಿನ್ಯೂ ಇಲಾಖೆಯಲ್ಲಿ ಕೆಲವು ಫಾರಂಗಳು ಬೇಕಾಗುತ್ತವೆ. ಅವು ಒಂದೊಂದು ಸಲ ಸಿಕ್ಕದೆ ತೊಂದರೆಯಾಗುತ್ತಿದೆ. ಅವನ್ನು ಒದಗಿಸಬೇಕು. ರೈತರಿಗೆ ಪಟ್ಟೆಗಳು ಅವಶ್ಯಕವಾಗಿ ಬೇಕು, ಅವು ಬೇಗ ಸಿಕ್ಕುವುದಿಲ್ಲ. ಬೇಕಾದ ಫಾರಂಗಳು ಎಷ್ಟೋ ಸಲ ತಾಲ್ಲೂಕು ಆಫೀಸುಗಳಲ್ಲಿ ದೊರೆಯದೆ ಅದಕ್ಕಾಗಿ ಒಂದೆರಡು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಅವಕಾಶವಿಲ್ಲದಂತೆ ಬೇಕಾದ ಫಾರಂಗಳನ್ನು ಬೇಗ ಒದಗಿಸಿ ತೊಂದರೆ ತಪ್ಪಿಸಬೇಕು.

ವೆಟರ್ನರಿ ಖಾತೆ ಮುಖ್ಯವಾದುದು, ಇದಕ್ಕೆಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಅದನ್ನು ಕೊಡಲಾಗಿದೆ. ಇದರ ಅಂಗವಾಗಿ, ಕಾಲೇಜು, ಡೈರಿ ಪ್ರಾಜೆಕ್ಟು ಮುಂತಾದುವನ್ನು ಮಾಡಿದ್ದಾರೆ. ಈ ದಿವಸ ಕಾಲೇಜು ಮುಖ್ಯವಾಗಿ ಬೇಕಾಗಿತ್ತು. ಅಮೃತಮಹಲ್ ದನಗಳು ಇಡೀ ದಕ್ಷಿಣ ದೇಶದಲ್ಲಿ ಹೆಸರುವಾಸಿಯಾಗಿದೆ. ಆದರೆ ಆ ರಾಸುಗಳು ಕಡಮೆಯಾಗುತ್ತಿವೆ. ಇದಕ್ಕೆ ಸರಕಾರ ಎಷ್ಟೋ ಪ್ರೋತ್ಸಾಹ ಕೊಟ್ಟರೂ ಕೂಡ ಅದರ ತಳಿಗಳು ಬರಬರುತ್ತಾ ಕಡಮೆಯಾಗುತ್ತಿವೆ. ಉತ್ತಮವಾದ ಹಾಲು ದೊರೆಯಬೇಕಾದರೆ ತಳಿ ಅಭಿವೃದ್ಧಿ ಮಾಡುವುದಕ್ಕೆ ಹೆಚ್ಚು ಗಮನ ಕೊಡಬೇಕು. ಈಗ ಜರ್ಸಿ ಮುಂತಾದ ತಳಿ ಅಭಿವೃದ್ಧಿ ಮಾಡಲಾಗುತ್ತಿದೆ, ಹಿಂದೆ ದನಗಳಿಗೆ ರೋಗ

(ಶ್ರೀ ಕೆ. ವಿ. ಬೈರೇಗೌಡ)

ಬಂದಾಗ ಅನೇಕ ರಾಸುಗಳು ಸತ್ತವು. ಅವುಗಳಲ್ಲಿ ಒಂದೊಂದು ಒಂದು ಸಾವಿರ ರೂಪಾಯಿ ಬೆಲೆ ಬಾಳುತ್ತಿದ್ದವು. ಆ ರೋಗವನ್ನು ತಡೆಗಟ್ಟಿದ್ದರೆ ರೈತರಿಗೆ ಲಕ್ಷಾಂತರ ರೂಪಾಯಿ ಮಿಗುತ್ತಿತ್ತು. ಮುಂದಾದರೂ ಸರಿಯಾದ ಗಮನ ಕೊಡಬೇಕು. ಎಮ್ಮೆಗಳ ಬಗ್ಗೆ ಇಲಾಖೆಯವರು ಮುರಜಾತಿಯವು, ಉತ್ತರ ಇಂಡಿಯಾ, ಪಂಜಾಬು ಮುಂತಾದ ಕಡೆಗಳಲ್ಲಿರುವ ತಳಿ ತರಬೇಕೆಂದಿದ್ದಾರೆ. ಬೆಂಗಳೂರಿನ ಸುತ್ತಮುತ್ತ ಈ ರಾಸುಗಳನ್ನು ಸಾಕಿ ರೈತರು ಚೇತರಿಸಿಕೊಳ್ಳುವುದು ಕಷ್ಟವಾಗಿದೆ. ಇದಕ್ಕೆ ಬದಲಾಗಿ ಬಾಗಲಕೋಟೆ ಪ್ರಾಂತದಲ್ಲಿ ದೊರೆಯುವ ಮಧ್ಯವರ್ತಿ ಎಮ್ಮೆ ತಳಿ ಉತ್ತಮವಾದುದೆಂದು ತೋರುತ್ತದೆ. ಅದನ್ನು ಸಾಕುವುದಕ್ಕೆ ನಮ್ಮ ರೈತರಿಗೆ ಕಷ್ಟವಾಗುವುದಿಲ್ಲ. ಹಾಲಿನ ವಿಚಾರ ನೋಡಿದರೂ ಸಹಾ ಮುರಾ ಜಾತಿಗಿಂತ ಬಾಗಲಕೋಟೆ ಕಡೆ ದೊರೆಯುವ ಮಧ್ಯವರ್ತಿ ಎಮ್ಮೆಗಳು ಹೆಚ್ಚು ಹಾಲು ಕೊಡುತ್ತವೆ. ಆ ತಳಿಯನ್ನು ಉತ್ತಮಗೊಳಿಸಿ ಹಾಲಿನ ಕೊರತೆಯನ್ನು ಸರಿದೂಗಿಸಬಹುದು.

ಹೆಸರಘಟ್ಟ ಕಾಂಪೋಸಿಟ್ ಲೈವ್‌ಸ್ಟಾಕ್ ಫಾರಂ ಏನಿದೆ ಅದನ್ನು ಇನ್ನೂ ಚೆನ್ನಾಗಿ ಬೆಳೆಸಲು ಸಾಧ್ಯವಿದೆ. ಈ ದಿವಸ ಒಂದು ಸಾವಿರ ಪೌಲ್ಟ್ರಿ ಫಾರಂ ಹೆಚ್ಚು ಮಾಡಿದ್ದಾರೆ. ಆದರೆ ಮೊಟ್ಟೆ ಮಾರಾಟಕ್ಕೆ ತೊಂದರೆ ಇದೆ. ಅದಕ್ಕೆ ಮುಖ್ಯವಾಗಿ ವ್ಯವಸ್ಥೆ ಮಾಡಬೇಕು. ಈಗ ಮಾಡಿರುವುದು ಸಾಲದು. ಮಿಲಿಟರಿಗೆ ಮತ್ತು ಇತರ ಕಡೆಗಳಿಗೆ ಒಳ್ಳೆಯ ಮೊಟ್ಟೆ ಕಳಿಸಲು ಏರ್ಪಾಡು ಮಾಡಿ ವಿದ್ಯಾವಂತ ತರುಣರಿಗೆ ನಿರುತ್ಸಾಹವಾಗದಂತೆ ನೋಡಿಕೊಳ್ಳಬೇಕು. ಈಗ ಪೌಲ್ಟ್ರಿ ಕೋ ಆಪರೇಟೀವ್ ಅಸೋಸಿಯೇಷನ್ ಇದೆ, ಅಲ್ಲಿಗೆ ಆಹಾರ ಸಾಲದೆ ತೊಂದರೆಯಾಗಿರುವುದರಿಂದ ಬೇರೆ ಕಡೆಗಳಿಂದ ಆಹಾರ ಒದಗಿಸಿ ಅದು ಕುಸಿಯದ ಹಾಗೆ ನೋಡಿಕೊಳ್ಳಬೇಕು.

ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಬಳ ಸಾರಿಗೆ ಹೆಚ್ಚಿಸಿರುವುದಾಗಿ ಹೇಳಿದರು. ಮೆಡಿಕಲ್, ಅಗ್ರಿಕಲ್ಚರ್ ಮತ್ತು ವೆಟೆರೆನರಿ ಗ್ರಾಜುಯೇಟುಗಳಿಗೆ ಒಂದೇ ರೀತಿಯಲ್ಲಿ ಸಂಬಳ ಕೊಟ್ಟು ಅವರಿಗೆ ನಿರುತ್ಸಾಹವಾಗದಂತೆ ನೋಡಿಕೊಳ್ಳಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಲ್ಯಾಂಡ್ ಅಕ್ವಿಜೆಷನ್ ವಿಚಾರವಾಗಿ ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಬೈರೇಗೌಡರು ಸವಿಸ್ತಾರವಾಗಿ ಹೇಳಿದ್ದಾರೆ. ಒಂದು ವಿಷಯ ಮಾತ್ರ ನಾನು ಹೇಳುತ್ತೇನೆ. ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ನಮ್ಮಲ್ಲಿ 10—15 ವರ್ಷಗಳಿಂದ ಜಮೀನು ಕಳೆದುಕೊಂಡು ಪರಿಹಾರವಿಲ್ಲದೆ ಅನೇಕ ರೈತರಿಗೆ ತೊಂದರೆಯಾಗಿದೆ. ಲ್ಯಾಂಡ್ ಅಕ್ವೆಜಿಷನ್ ಕೆಲಸ ತುಂಬಾ ನಿಧಾನದಿಂದ ಆಗುತ್ತಿದೆ. ಅಸಿಸ್ಟೆಂಟ್ ಕಮಿಷನರ್ ಅವರು ಇನ್‌ಕ್ವಾಯರಿ ಮಾಡಿದ ಮೇಲೆ ಡೀ.ಸೀ. ಅವರು ನೋಟಿಫಿಕೇಷನ್ ಮಾಡಬೇಕಾಗಿರುವುದರಿಂದ ಕಾಲ ವಿಳಂಬವಾಗುತ್ತದೆ. ರೈತರು ಜಮೀನು ಕಳೆದುಕೊಂಡು ಪರಿಹಾರವಿಲ್ಲದೆ ಇದ್ದರೂ ಕೂಡ ಇನ್ನೂ ಕಂದಾಯ ಕೊಡುತ್ತಿದ್ದಾರೆ. ಆದುದರಿಂದ ಈ ಕೆಲಸ ಆದಷ್ಟು ಬೇಗನೆ ಮಾಡಿ ಅವರ ತೊಂದರೆ ತಪ್ಪಿಸುವುದಕ್ಕೆ ಪೂರ್ವಭಾವಿಯಾಗಿ ಶೇಕಡ 75ರಷ್ಟು ಹಣ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ. ನೋಟಿಫಿಕೇಷನ್ ಹೊರಡಿಸುವ ಹೊಸ ಪದ್ಧತಿಯನ್ನು ತೆಗೆದುಹಾಕಿ ಮೊದಲು ಹೇಗೆ ಇತ್ತೋ ಹಾಗೆ ಮಾಡಬೇಕು. ದಯವಿಟ್ಟು ಇದನ್ನು ಪರ್ಯಾಲೋಚಿಸಿ ಮೊದಲಿನಂತೆ ಮಾಡುವುದು ಅಗತ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನು ಜಮಾಬಂದಿ ವಿಚಾರ. ಇದು ಬಹಳ ತಡವಾಗುತ್ತಿದೆ. ಇದುವರೆಗೆ ತಾತನ ಹೆಸರಿನಲ್ಲಿರುವುದು ಮಕ್ಕಳು ಮೊಮ್ಮಕ್ಕಳ ಹೆಸರಿಗೆ ಪಟ್ಟಾ ಆಗಿಲ್ಲ. ಕಾಗದ ಪತ್ರಗಳು ಹೇಗೆ ಇದ್ದವೋ ಹಾಗೆಯೇ ಇವೆ. ಇದು ವಿಳಂಬವಾಗುವುದರಿಂದ ಅನೇಕರಿಗೆ ತೊಂದರೆಯಾಗಿದೆ. ಒಂದು ಬಾವಿ ತೆಗೆಯಲು ಸಾಲ ಪಡೆಯಲು ಬರುವುದಿಲ್ಲ. ಅವರವರ ಹೆಸರಿನಲ್ಲಿ ಪಟ್ಟಾ ಇದ್ದರೆ ರೈತನಿಗೆ ಅನುಕೂಲವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಸರಕಾರ ಗಮನಕೊಡಬೇಕು ಎಂದು ಹೇಳುತ್ತೇನೆ.

ಎರಡು ತಿಂಗಳ ಹಿಂದೆ ರಾಯಚೂರು ಜಿಲ್ಲೆಯಲ್ಲಿ ಆಲಿಕಣ್ಣು ಮಳೆಯಾಗಿ ರೈತರಿಗೆ ಬಹಳ ನಷ್ಟ ಉಂಟಾಗಿದೆ. ರಾಯಚೂರು ಮತ್ತು ಮಾನವಿ ತಾಲ್ಲೂಕುಗಳಲ್ಲಿ ಒಂದೂವರೆ ಲಕ್ಷ ರೂಪಾಯಿ ಹಾನಿಯಾಗಿದೆ ಎಂದು ಅಂದಾಜು ಮಾಡಲಾಗಿದೆ. ಇದು ವೃತ್ತಪತ್ರಿಕೆಯಲ್ಲಿ ವರದಿಯಾಗಿದೆ. ಈ ಆಲಿಕಲ್ಲು ಮಳೆಯಿಂದ ಜೋಳದ ತೆನೆಗಳಲ್ಲಿಯ ಕಾಳು ಉದುರಿ ಬಹಳ ನಷ್ಟ ಉಂಟಾಗಿದೆ. ಹತ್ತಿ ಬೆಳೆಯಂತೂ ಸಂಪೂರ್ಣವಾಗಿ ನಾಶವಾಗಿದೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಜಕ್ಕಲದಿನ್ನಿ ಗ್ರಾಮದಲ್ಲಿ ಹೆಚ್ಚು ಹಾನಿಯಾಗಿದೆ. ಇದನ್ನು ಸರಕಾರದ ಗಮನಕ್ಕೆ ನಾನು ತಂದಿದ್ದೇನೆ. ಈಗ

ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ಪ್ರದೇಶದಲ್ಲಿಯ ರೈತರಿಗೆ ಕಂದಾಯ ಮಾಫೀ ಮಾಡುವುದಕ್ಕೆ ರೆಮಿಶನ್ ಕೊಡುವುದಕ್ಕೆ ನಿರ್ಣಯ ಮಾಡಬೇಕು. ತಕ್ಕಾವಿ ಸಾಲ ತೆಗೆದುಕೊಂಡ ರೈತರಿಂದ ಹಣ ವಸೂಲ್ಮಾಡಬಾರದು. ಇದಲ್ಲದೆ ಈ ವರ್ಷ ಅವರಿಂದ ಲೆವಿ ತೆಗೆದುಕೊಳ್ಳಬಾರದು. ಹೆಚ್ಚು ತಗಾವಿ ಸಾಲ ರೈತರಿಗೆ ಕೊಡುವ ಅನುಕೂಲತೆ ಮಾಡಿಕೊಡಬೇಕು. ಇದಲ್ಲದೆ ಬಡ ಜನರಿಗೆ 200-300 ರೂಪಾಯಿ ರಿಲೀಫ್ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಇನ್ನು ರೆವೆನ್ಯೂ ಇಲಾಖೆಯಲ್ಲಿ ತಹಶೀಲದಾರರ ಕಚೇರಿಯಲ್ಲಿ ಯಾವ ರೀತಿ ಕೆಲಸ ನಡೆಯು ತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ, ಇವತ್ತಿನ ದಿವಸ 1955 ನೇ ಇಸವಿಯಿಂದ 1965 ರವರೆಗೆ ಅಂದರೆ ಹತ್ತು ವರ್ಷದ ಕಂದಾಯ ಕೊಡಬೇಕೆಂದು ರೈತರಿಗೆ ನೋಟೀಸ್ ಕೊಟ್ಟಿ ದ್ದಾರೆ. ಹತ್ತು ವರ್ಷದ ಕಂದಾಯ ಒಂದೇ ಸಲ ಕೊಡುವುದಕ್ಕೆ ಸಾಧ್ಯವೇ? ಇದನ್ನು ವಿಚಾರ ಮಾಡ ಬೇಕು. ಇದಲ್ಲದೆ 1955 ನೇ ಇಸವಿಯಿಂದ 1960 ನೇ ಇಸವಿಯವರೆಗೆ ಅಲ್ಲಿ ನೀರು ಬಂದಿರಲಿಲ್ಲ. ಇದು ಬರಗಾಲ ಪೀಡಿತ ಪ್ರದೇಶ ಎಂದು 1955 ರಿಂದ 1959 ವರೆಗೆ ಲ್ಯಾಂಡ್ ರೆವಿನ್ಯೂ ಸಸ್ಪೆನ್‌ಷನ್ ಮಾಡಿತ್ತು. ಒಂದೇ ಸಮನೆ 3 ವರ್ಷ ಕಂದಾಯ ಸಸ್ಪೆನ್‌ಷನ್ ಮಾಡುತ್ತಾ ಬಂದಿದ್ದರೆ ಅದಕ್ಕೆ ರೆಮಿಷನ್ ಕೊಡ ಬೇಕಾದುದು ಸರಕಾರದ ಕರ್ತವ್ಯ. ಈ ರೀತಿ ಅಲ್ಲಿ ಪರಿಸ್ಥಿತಿ ಇದ್ದರೂ ಕೂಡ ಒಂದೇ ಸಲ ಹತ್ತು ವರ್ಷದ ಕಂದಾಯ ಕೊಡಬೇಕು ಎಂದು ಹೇಳುವುದು ನ್ಯಾಯವಲ್ಲ. ಯಾವ ರೈತನಿಗೂ ಕೊಡುವುದು ಸಾಧ್ಯವಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ ಮತ್ತು ಇದನ್ನು ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಸೋಜಿಗದ ಸಂಗತಿ ಅಂದರೆ, ಕೆಲವು ರೈತರು ಕಂದಾಯ ಕೊಟ್ಟು ರಸೀದಿ ಪಡೆ ದಿದ್ದರೂ ಕೂಡ ಅಂಥ ರೈತರು ಕಂದಾಯ ಕೊಡಬೇಕೆಂದು ಅವರಿಗೆ ನೋಟೀಸ್ ಮೂಲಕ ನೋಟೀಸ್ ಜಾರಿ ಮಾಡಿದ್ದಾರೆ. ನಿರ್ದಿಷ್ಟ ನಿದರ್ಶನ ಬೇಕಾದರೆ ಕೊಡಬಹುದು. 1963-64 ಮತ್ತು 1964-65 ರಲ್ಲಿ ಕಂದಾಯ ಕೊಟ್ಟ ರಸೀದಿ ಇದ್ದಾಗ್ಯೂ ಬಾಕಿ ಕೊಡಬೇಕು ಎಂದು ನೋಟೀಸ್ ಜಾರಿ ಮಾಡಿದ ಸಂದರ್ಭಗಳು. ಇವೆ. ಈ ರೀತಿ ಕೆಲಸ ಮಾಡುವ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಇದು ಮರ್ಯಾದೆಯ ಪ್ರಶ್ನೆ. ಕಂದಾಯ ಕೊಟ್ಟಂಥವರು ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ. ಕಂದಾಯ ಜಮಾ ಯಾಕೆ ಆಗಿಲ್ಲ ಎಂಬುದನ್ನು ಪರಿಶೀಲಿಸಬೇಕು. ಇಂಥ ಮನೋಭಾವ ಇರತಕ್ಕ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಯಾಕೆಂದರೆ, ಇದರಿಂದ ರೈತಾಪಿ ಜನರಿಗೆ ಬಹಳ ತೊಂದರೆಯಾಗಿದೆ. ಶ್ಯಾನುಭೋಗರು ಬರೆದ ಲೆಕ್ಕ, ರೆವೆನ್ಯೂ ಇನ್‌ಸ್ಪೆಕ್ಟರ್ ಬರೆ ಯುವ ಲೆಕ್ಕ ತಹಶೀಲದಾರರ ಲೆಕ್ಕ ಇವು ಒಂದಕ್ಕೊಂದು ಸಂಬಂಧವಿಲ್ಲ. ನೀರಾವರಿ ಬಂದ ಮೇಲೆ ಕಂದಾಯದ ಮೇಲೆ ಸರಚಾರ್ಜ್ ಹಾಕುತ್ತಾರೆ. ಲ್ಯಾಂಡ್ ರೆವೆನ್ಯೂ ಮತ್ತು ವಾಟರ್‌ರೇಟ್ ಎರಡೂ ಕೂಡಿಸಿ ಅದರ ಮೇಲೆ ಸರಚಾರ್ಜ್ ಹಾಕಿ ವಸೂಲ್ಮಾಡುವುದು ಇದು ಯಾವ ಊರಿನಿಂದ ಬಂದ ಪದ್ಧತಿ? ಈ ರೀತಿ ಮಾಡಿರುವುದು ಸರಿಯಲ್ಲ. ಏಕರೂಪವಾದ ಪದ್ಧತಿಯಿಂದ ವಸೂಲ್ಮಾಡ ಬೇಕು. ಈ ವಿಚಾರದಲ್ಲಿ ಆಫೀಸರರು ತಪ್ಪು ಮಾಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಇನ್ನು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ, ರೂರಲ್ ವೆಟೆರಿನರಿ ಡಿಸ್ಪೆನ್ಸರೀಸ್ ನಾಲ್ಕಾರು ಕಡೆ ಪ್ರಾರಂಭ ಮಾಡಿದ್ದಾರೆ. ಆದರೆ ಅಲ್ಲಿ ಔಷಧಗಳ ಕೊರತೆ ಇದೆ. ಸಿಬ್ಬಂದಿ ಕೊರತೆಯಂತೂ ತುಂಬಾ ಇದೆ. ಶಿರವಾರ, ಕವತಾಳ, ಗೆಜ್ಜಲಗಟ್ಟಾ ಈ ಸ್ಥಳಗಳಲ್ಲಿ ಸ್ಟಾಕ್‌ಮೆನ್ ಇದ್ದರೂ ಡಾಕ್ಟರ್ ಇಲ್ಲ. ಇದೊಂದು ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಿರುವುದರಿಂದ ಕೊನೆಯ ಪಕ್ಷ ಆಯಾಯ ಹೋಬಳಿ ಹೆಡ್ ಕ್ವಾರ್ಟರ್ಸಿನಲ್ಲಿ ಒಬ್ಬ ಡಾಕ್ಟರ್ ಇಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಸಾಕಷ್ಟು ಔಷಧಿ ಸಂಗ್ರಹ ಇರುವ ವ್ಯವಸ್ಥೆ ಮಾಡಬೇಕು ಎಂದು ಸಹ ಹೇಳಬೆಕಾಗಿದೆ.

ಇನ್ನು 'ಅರ್ಟಿಫೀಶಿಯಲ್ ಇನ್‌ಸೆಮಿನೇಶನ್ ಸೆಂಟರ್ಸ್' ತೆರೆಯಬೇಕು ಎಂಬ ಒಂದು ಯೋಜನೆ ಇದೆ. ಇದರಿಂದ ದನಗಳ ಸಂಪತ್ತು ಹೆಚ್ಚು ಹೆಚ್ಚು ಬೆಳೆಸಲು ತುಂಬಾ ಅನುಕೂಲ ನಮ್ಮ ಜಿಲ್ಲೆಯಲ್ಲಿ ಇದೆ. ವಿದ್ಯುತ್ ಶಕ್ತಿ ಪೂರೈಕೆ ಇದೆ. ತುಂಗಭದ್ರಾ ನದಿಯಿಂದ ಐದೂವರೆ ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತದೆ. ಹುಲ್ಲು ಬೆಳೆಸುವುದಕ್ಕೆ ಅನುಕೂಲವಿದೆ. ಹೈ ಬ್ರಿಡ್ ಹುಲ್ಲು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ದನಗಳನ್ನು ಬೆಳೆಸುವುದು ಎಷ್ಟು ಮುಖ್ಯವೋ ಅವುಗಳಿಗೆ ಆಹಾರವಾದ ಒಳ್ಳೆಯ ಜಾತಿಯ ಹುಲ್ಲು ಬೆಳೆಸುವುದು ಸಹ ಅಷ್ಟೇ ಮುಖ್ಯವಾದುದು. ಆದುದರಿಂದ ಹೈ ಬ್ರಿಡ್ ಹುಲ್ಲು ಗಡ್ಡೆಗಳನ್ನು ಸುಲಭ ದರದಲ್ಲಿ ಸಾಧ್ಯವಾದರೆ ಉಚಿತವಾಗಿ ಕೊಟ್ಟು ಹುಲ್ಲು ಬೆಳೆಸುವ ಕಾರ್ಯಕ್ರಮವನ್ನು ಯೋಜನೆ

(ಶ್ರೀಮತಿ ಬಸವರಾಜೇಶ್ವರಿ)

ಯಲ್ಲಿ ಅಳವಡಿಸಿ ಕೊಳ್ಳಬೇಕೆಂದು ಹೇಳುತ್ತೇನೆ. ಇದು ಬಹು ಜನ ರೈತರಿಗೆ ವಿಷಯ ಗೊತ್ತಿಲ್ಲ. ಈ ವಿಷಯ ಕೆಲವೇ ಜನಕ್ಕೆ ಮಾತ್ರ ಗೊತ್ತಿದೆ. ಆದರೆ ಅವರು ಬೇರೆ ಜನರಿಗೆ ಇದುವರೆಗೆ ತಿಳಿಸಿಲ್ಲ. ಈ ಹೈಬ್ರಿಡ್ ಜೋಳದಲ್ಲಿ ತುಂಬ ರಸವಿದ್ದು, ದನಗಳಿಗೆ ಅತಿ ಅಮುಖ್ಯವಾದ ಮೇವಾಗಿರುತ್ತದೆಯೆಂದು ಹೇಳುತ್ತಾರೆ. ಹಸಿರು ಎಲ್ಲಿ ಹೆಚ್ಚು ಹೆಚ್ಚು ಇರುತ್ತದೋ ಅಲ್ಲೆಲ್ಲಾ ಸೈಲೇಜ್ ಮಾಡುವುದಕ್ಕೆ ತುಂಬಾ ಅನುಕೂಲವಾಗುತ್ತದೆ ಎಂದು ಕೇಳಿದ್ದೇನೆ. ಈ ರೀತಿ ಮಾಡುವ ಪದ್ಧತಿ ಬಹಳ ಜನರಿಗೆ ಗೊತ್ತಿಲ್ಲ. ಇದನ್ನು ತಾವು ಎಲ್ಲಾ ರೈತರಿಗೂ ತಿಳಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಕೊನೆಯದಾಗಿ, ಪೌಲ್ಟ್ರಿ ವಿಚಾರದಲ್ಲಿ 'ಡೀಪ್ ಲೀಟರ್ ಸಿಸ್ಟಮ್ ಇನ್‌ಟ್ರಡ್ಯೂಸ್' ಮಾಡಿದಮೇಲೆ ರೈತಾಪಿ ಜನರು ಹೆಚ್ಚಾಗಿ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಇದಕ್ಕಾ 200—300 ರೂಪಾಯಿಗಳವರೆಗೆ ಸಾಲ ಕೊಡುತ್ತಿದ್ದೀರಿ. ತಾವು ಒಂದು ಪ್ರೋಗ್ರಾಮ್ ಹಾಕಿಕೊಂಡು ಒಬ್ಬರಿಗೆ ಒಂದು ಸಾವಿರದವರೆಗೆ ಸಾಲ ಕೊಡುತ್ತೀರೆಂದು ಗೊತ್ತಾಗಿದೆ. ಈ ಪ್ರೋಗ್ರಾಮ್ ಇಡೀ ದೇಶಕ್ಕೆ ಅನ್ವಯಿಸುವಂತೆ ಮಾಡಬೇಕು. ಆಗ ಮಾತ್ರ ಕೇವಲ ಸಣ್ಣ ರೈತರು ಸಹ ಪೌಲ್ಟ್ರಿ ಅಭಿವೃದ್ಧಿ ಮಾಡುವುದಕ್ಕೆ ತುಂಬ ಅನುಕೂಲವಾಗುತ್ತದೆ. ಆದರ ಗೊಬ್ಬರ ಸಹ ಅತೀ ಮುಖ್ಯವಾದ ಉತ್ತಮವಾದ ಗೊಬ್ಬರವೆಂದು ತಿಳಿದುಬಂದಿದೆ. ಆದ್ದರಿಂದ ಈ ಪೌಲ್ಟ್ರಿ ಅಭಿವೃದ್ಧಿ ಇಡೀ ಮೈಸೂರು ರಾಜ್ಯದ ಎಲ್ಲಾ ಭಾಗಗಳಲ್ಲೂ ಆಗುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಯಾರು ಮುಂದೆ ಬರುತ್ತಾರೋ ಅವರಿಗೆ ಸಾಲದ ರೂಪವಾಗಿ ಹಣದ ಜೊತೆಗೆ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸಹ ಕೊಡುವುದಕ್ಕೆ ತಾವು ಏರ್ಪಾಡು ಮಾಡಬೇಕು. ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯ ಸಚಿವರು ಸಭೆಯ ಮುಂದೆ ಮಂಡಿಸಿರುವ ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಭೂಸುಧಾರಣೆ ವಿಷಯದಲ್ಲಿ ಮಾನ್ಯ ಅರ್ಥಿಕ ಮಂತ್ರಿಗಳು, ಅಕ್ಟೋಬರ್ ನೊಳಗೆ ಪರಿಹಾರ ಕೊಡುವುದಕ್ಕೆ ಕೆಲಸ ಮಾಡುವುದು ಸಾಧ್ಯವಿಲ್ಲವೆಂದು, ಅದಕ್ಕೆ ಇನ್ನೂ ಕಾಲ ಹಿಡಿಯುತ್ತದೆಂದು ಹೇಳಿದರು. ಈ ದೇಶದಲ್ಲಿ ಅದಷ್ಟು ಪ್ರಗತಿಯನ್ನು ಸಾಧಿಸುವುದಕ್ಕೆ ತನ್ನ ಮಾತನ್ನು ಉಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅದೇ ಸಂದರ್ಭದಲ್ಲಿ ಹೊಸದಾಗಿ ಸರ್ವೆ ಸೆಟಲ್ ಮೆಂಟ್ ಆಗುತ್ತಿದೆ. ಹೆಚ್ಚು ಜನ ಸರ್ವೆಯರ್‌ಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಒಂದು ಅಭಿಪ್ರಾಯ ಇಟ್ಟುಕೊಂಡಿದ್ದು, ಅದು ಇನ್ನೂ ಪೂರೈಸಲಿಲ್ಲ. ಅವರಿಗೆ ತರಪೇತು ಕೊಡುವ ಕೆಲಸ ವನ್ನು ಇನ್ನೂ ಪೂರ್ತಿಯಾಗಲಿಲ್ಲ. ಭೂಕಂದಾಯದ ಮೇಲೆ ಅಧಿಭಾರವನ್ನು ಸರ್ಕಾರ ಹೇರಿದೆ. ಭೂಕಂದಾಯದ ಪುನರ್ ವಿಮರ್ಷೆಯಾಗುತ್ತಿದೆ, ಕಂದಾಯ ಮತ್ತು ತೆರಿಗೆ ವಸೂಲಾತಿ ಈ ಎರಡು ಈ ಜುಲೈನಿಂದ ಆರಂಭವಾಗುವುದಿದೆ. ಈ ವಿಷಯದಲ್ಲಿ, ಈ ವರ್ಷ ಕೆಟ್ಟ ಕ್ಷಾಮದ ಪರಿಸ್ಥಿತಿ ದೇಶದಲ್ಲಿರುವುದರಿಂದ. ಈ ಭೂಕಂದಾಯ ಮತ್ತು ಅಧಿಭಾರ ತೆರಿಗೆಯನ್ನು ವಸೂಲಿ ಮಾಡುವ ವಿಷಯದಲ್ಲಿ ತೀವ್ರವಾಗಿ ಮಂತ್ರಿಮಂಡಲ ಪುನರ್ವಿಮರ್ಶೆ ಮಾಡಿ ಈಗ ಏನು ತಮ್ಮ ಜಿಲ್ಲಾಧಿಕಾರಿಗಳಿಗೆ ಡಿಸ್‌ಕ್ರಿಷನ್ ಕೊಟ್ಟಿದ್ದೀರೋ, ಆ ಬಗ್ಗೆ ಸರ್ಕಾರದವರು ಒಂದು ತೀರ್ಮಾನಕ್ಕೆ ಬರುವುದು ಯೋಗ್ಯ. ಈಗ್ಗಾಗಲೆ ನಾಲ್ಕನೆ ಬೆಳೆಯಾಗಿದೆ, ಇತ್ಯಾಧಿ, ಇತ್ಯಾದಿ, ಲ್ಯಾಂಡ್ ರೆವಿನ್ಯೂ ಕೋಡ್‌ನಲ್ಲಿ ಏನಿತ್ತು, ಭೂಕಂದಾಯದ ಮಸೂದೆಯಲ್ಲಿ ಹೊಸದಾಗಿ ಏನು ಬರೆದಿದ್ದಾರೆ ಆ ವಿಷಯದಲ್ಲಿ ಕೂಡ ತೀವ್ರ ಪರಿಸ್ಥಿಯನ್ನು ಗಮನದಲ್ಲಿಟ್ಟುಕೊಂಡು ನೇರವಾಗಿ ಮಂತ್ರಿಮಂಡಲ ಒಂದು ತೀರ್ಮಾನ ತೆಗೆದುಕೊಂಡು, ಆ ತೀರ್ಮಾನ ಕಟ್ಟಕಡೆಯದಾಗಿ ಪಂಚಾಯತಿಯ ಮಟ್ಟದಲ್ಲಿ ಕಾರ್ಯಗತವಾಗುವಂತೆ, ಮತ್ತು ಜುಲೈನೊಳಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಮಾನ್ಯ ಸಚಿವರು ಒಂದು ಭರವಸೆ ಕೊಟ್ಟಿದ್ದಾರೆ. ಈ ದೇವಾದಾಯ ಮತ್ತು ಧರ್ಮಾದಾಯ ಇವುಗಳಿಗೆ ಸಂಬಂಧಪಟ್ಟ ಇನಾಂಗಳು ಮತ್ತು ಭೂಹಿಡುವಳಿಗಳ ವಿಷಯವಾಗಿ, ಟೆನೆಂಟಿಗೆ ಸಂಬಂಧಪಟ್ಟ ಹಾಗೆ ಸೂಕ್ತ ಕಾನೂನನ್ನು ಈ ಸಭೆಯ ಮುಂದೆ ಮಂಡಿಸುತ್ತೀರೆಂದು ತಿಳಿದಿದ್ದೆವು. ಏಕೆಂದರೆ, ನಮ್ಮ ಕಡೆ ತಮಗೆ ಗೊತ್ತಿರುವ ಹಾಗೆ ಬಹಳ ಗೇಣಿದಾರರು ಇಂಥ ಜಮೀನುಗಳನ್ನು ಗೇಣಿಗೆ ಪಡೆಯುತ್ತಿದ್ದಾರೆ. ಈ ರೀತಿಯ ಗೇಣಿದಾರರು ಏತಕ್ಕೆ ಮುಂದುವರಿಯಬೇಕು ಎಂಬ ಪ್ರಶ್ನೆಯನ್ನು ಕೂಡ ಸರ್ಕಾರದವರು ಪರಿಶೀಲಿಸಬೇಕು. ಅವರನ್ನು ಸಹ ಈ ಗೇಣಿ ಪದ್ಧತಿಯಿಂದ ಮುಕ್ತಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಈ ಭೂಕಂದಾಯದ ಬಗ್ಗೆ ಒಂದು ಮಾತನ್ನು ನಾನು ಹೇಳುತ್ತೇನೆ. ತೀರ್ಥಹಳ್ಳಿ ತಾಲ್ಲೋಕಿನ ಹಡಗಲಿ ಮತ್ತು ಕುಡಗಲಿ ಗ್ರಾಮಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅಲ್ಲಿ ಕೆಲವು ಇನಾಂ ಜಮೀನುಗಳು ಎನ್ನತಕ್ಕಂಥದ್ದು ಇದ್ದು, ಅದನ್ನು ಕೇರಳದವರು ಕ್ರಯಕ್ಕೆ ತೆಗೆದುಕೊಂಡ ಹಾಗೆ, ಮೊದಲು ಅಲ್ಲಿ ವಾಸ ಮಾಡುವುದಕ್ಕೆ ಆರಂಭ ಮಾಡಿದ ಹಾಗೆ, ಸರ್ಕಾರದ ಅರಣ್ಯ ಇಲಾಖೆಗೆ ಸೇರಿದ ಸಹಸ್ರಾರು ಎಕರೆ ಕಾಡನ್ನು ಕಡಿದು, ಎರಡು ಮೂರು ಕೋಟಿ ರೂಪಾಯಿಗಳ ಅರಣ್ಯವನ್ನು ನಾಶ ಮಾಡಿರುವುದಲ್ಲದೆ, ಸಹಸ್ರಾರು ಎಕರೆಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ, ಅಕ್ರಮವಾದ ರೀತಿಯಲ್ಲಿ ವ್ಯವಹಾರ ನಡೆಯುತ್ತಿದ್ದರೂ ಸಹ, ಇದರ ಬಗ್ಗೆ ಅರಣ್ಯಾಧಿಕಾರಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ, ರಾಜ್ಯದ ಒಂದು ಭಾಗದಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ವಿಚಾರ ಮಾಡಲು ಅಸಮರ್ಥರಾಗಿದ್ದಾರೆ. ಪ್ರತಿ ವರ್ಷವೂ ಸಹ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ, ಅವರು ಯಾವ ಕ್ರಮವನ್ನೂ ತೆಗೆದುಕೊಳ್ಳದೆ, 5-6 ವರ್ಷದಿಂದ ಬೆಳೆ ಬೆಳೆಯುತ್ತಿದ್ದಾರೆ. ಆ ಭಾಗವನ್ನು ನೋಡುವುದಕ್ಕೆ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಈಗಲೂ ಸಹ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಸಂಶಯ ಕಾಣುತ್ತದೆ. ಇದರ ಬಗ್ಗೆ ಸರ್ಕಾರದ ಕ್ರಮ ಯಾವುದೂ ನಡೆಯುತ್ತಿಲ್ಲ. ಮೊನ್ನೆ ಸರ್ಕಾರದ ಪರವಾಗಿ ಕೆಲವು ಅಧಿಕಾರಿಗಳು ಅಲ್ಲಿ ತನಿಖೆ ನಡೆಸಲು ಹೋಗಿದ್ದಾರೆಂದು ತಿಳಿದುಬಂದಿದೆ. ಇದು ಒಂದು ದೊಡ್ಡ ಉದಾಹರಣೆ. ಇದನ್ನು ಸರ್ಕಾರ ತೀರ್ಮಾನ ಮಾಡಬೇಕು. ಕೇರಳ ಸರ್ಕಾರದವರು ಅಥವಾ ಮೈಸೂರು ಸರ್ಕಾರದವರು ಕುಳಿತು ಇದನ್ನು ತೀರ್ಮಾನ ಮಾಡಬೇಕು. ಅದರಲ್ಲಿ ಧೋರಣೆ ಏನಿರಬೇಕು ? ಒಂದು ರಾಜ್ಯದ ಪ್ರಜೆ ಇನ್ನೊಂದು ರಾಜ್ಯಕ್ಕೆ ಹೋಗಿ ವಾಸಮಾಡುವುದಕ್ಕೆ ಒಂದು ರಾಜ್ಯಾಂಗದತ್ತವಾದ ಹಕ್ಕು ಇದೆ. ಆದರೆ ಆ ರಾಜ್ಯದಲ್ಲಿ ಏನು ಒಂದು ಕಾಯಿದೆ ಇದೆಯೋ ಅದನ್ನು ಉಲ್ಲಂಘಿಸಬಹುದೇ ಎನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಈ ಸಮಸ್ಯೆ ಶಿವಮೊಗ್ಗಾ ಜಿಲ್ಲೆಯಲ್ಲಿ ಜ್ವಲಂತ ಸಮಸ್ಯೆಯಾಗಿ, ಬಹಳ ಜನರ ಗಮನವನ್ನು ಸೆಳೆದಿದೆ. ಬಹುಶಃ ಇದು ಕೇಂದ್ರ ಸರ್ಕಾರದ ಗಮನಕ್ಕೂ ಬಂದಿರಬಹುದು. ಇದಕ್ಕೆ ಸೂಕ್ತವಾದ ಶೀಘ್ರವಾದ ಪರಿಹಾರ ಮಾಡುವುದರ ಬಗ್ಗೆ ಮಂತ್ರಿಮಂಡಲ ಸ್ವಲ್ಪ ಜಾಗ್ರತೆ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ಮಾತನ್ನು ಮುಂದುವರಿಸುತ್ತಾ, ಹಳೆಯ ಮೈಸೂರಿನಲ್ಲಿ ಒಂದು ರೋಗ ಇದೆ. ಟಿ. ಟಿ. ಅಂದರೆ ತಕರಾರು ತಃಖ್ತೆ ಬಾಬಿನಿಂದ ಹೊಸನಗರದ ಒಂದೇ ತಾಲ್ಲೋಕಿನಲ್ಲಿ ಪ್ರತಿವರ್ಷ 30 ಸಾವಿರ ರೂಪಾಯಿ ವಸೂಲಾಗುತ್ತಿದೆಯೆಂದು ಕೇಳಿದ್ದೇನೆ. 10-15 ವರ್ಷಗಳವರೆಗೆ ಜನರು ತಕರಾರು ತಖ್ತೆಗೆ 100 ರೂಪಾಯಿಗಳನ್ನು ಕೊಟ್ಟರೆ, ಶಾನುಭೋಗ ಮತ್ತು ಇನ್ಸ್‌ಪೆಕ್ಟರ್‌ಗೂ ಸಹ 100 ರೂಪಾಯಿ ಕೊಡುತ್ತಾರೆ. ಕೆಲವು ಜಮೀನುಗಳು ಖಾತೆಯೇ ಆಗಿರುವುದಿಲ್ಲ. ಹೀಗಾದರೆ ಸರ್ಕಾರ ಇದೆಯೆಂದು ಭಾವಿಸೋಣವೇ, ಇಲ್ಲವೆಂದು ಭಾವಿಸೋಣವೆ? ಬೇರೆಯವರ ಜಮೀನಿಗೆ 8—10 ವರ್ಷ ಕಂದಾಯವನ್ನು ಕಟ್ಟಿದರೆ, ನಂತರ ಆ ಜಮೀನು ತನಗೆ ಆಗುತ್ತದೆಂದು, ಒಬ್ಬ ಖದೀಮ 50 ಎಕರೆ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದಾರೆ, ಬೇರೆಬೇರೆಯವರಿಗೆ ಮಾರುತ್ತಿದ್ದಾನೆ. ರೆವಿನ್ಯೂ ಇಲಾಖೆಯವರು ಗೇಣಿಯನ್ನು ವಸೂಲು ಮಾಡುತ್ತಿದ್ದಾರೆ. ಆದರೆ ಈ 50 ಎಕರೆಗೆ ಖಾತೆಯೇ ಇಲ್ಲ. ಯಾವ ಸರ್ವೆ ನಂಬರ್ ಸಹ ಇಲ್ಲ. ಈ ಜಮೀನು ಏನು ರೆವಿನ್ಯೂ ಇಲಾಖೆಗೆ ಸೇರಿದ್ದೋ, ಅಥವಾ ಫಾರೆಸ್ಟ್ ಇಲಾಖೆಗೆ ಸೇರಿದ್ದೋ ಎಂಬುದು ಗೊತ್ತಿಲ್ಲ. ಇದು ಒಂದು ಹೊಸ ನಗರದ ತಾಲ್ಲೋಕಿನ ಕಥೆ. ಇದರಿಂದ ನಿಮ್ಮ ಸರ್ಕಾರ ಎಷ್ಟರಮಟ್ಟಿಗೆ ಜಾಗೃತವಾಗಿದೆ, ಕಾನೂನು ಕಾಯಿದೆಯನ್ನು ನೀವು ಎಷ್ಟರಮಟ್ಟಿಗೆ ಪರಿಪಾಲನೆ ಮಾಡಿದ್ದೀರಿ ಎಂದು ತಿಳಿಯುತ್ತದೆ. ಈ ತಕರಾರು ತಖ್ತೆ ಪದ್ಧತಿಯನ್ನು ತೊಡೆದು ಹಾಕಬೇಕು. ಸರ್ಕಾರಿ ಜಮೀನಿನಲ್ಲಿ ಯಾರಾದರೂ ಪ್ರವೇಶ ಮಾಡಿದರೆ, ಅಕ್ರಮವಾಗಿ ಸಾಗುಮಾಡಿದರೆ, ಅವರ ಮೇಲೆ ತೀವ್ರ ಕ್ರಮ ತೆಗೆದುಕೊಂಡು, ಹೇಗೆ ಅಕ್ರಮ ಪ್ರವೇಶಗಳಿಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೋ, ಅಂಥ ಕ್ರಮವನ್ನು ಇದಕ್ಕೂ ತೆಗೆದುಕೊಳ್ಳಬೇಕು.

5-30 P.M.

ದರಖಾಸ್ತುಗಳನ್ನು ಅಲ್ಲಿ ಆ ಕ್ಷಣದಲ್ಲಿಯೇ ಮಂಜೂರು ಮಾಡಬೇಕು. ಒಂದು ಸಲ ದರಖಾಸ್ತು ದಾನಕ್ಕಾಗಿ ಹೊರಟಿರಿ. ಅದು ಅಪಹಾಸ್ಯದಲ್ಲಿ ಪರಿಣಾಮವಾಯಿತು. ದಾನ ಎಲ್ಲಿ ಹೋಯಿತು ? ಹಾಲಿ ಇರುವ ದರಖಾಸ್ತುಗಳ ವಿಲೇವಾರಿ ಮಾಡುತ್ತಾ ಇಲ್ಲ. ಶ್ಯಾನುಭೋಗರಿಗೆ ಜಮೀನು ಕೊಡತಕ್ಕದ್ದು ಮಹಾರಾಜರಿಗೆ ಜಹಗೀರು ಕೊಡುವ ಹಕ್ಕು ಇದ್ದ ಹಾಗೆ ಎಂದು ತಿಳಿದುಕೊಂಡಿದ್ದಾರೆ. ಎರಡು ಎಕರೆ ಜಮೀನು ಕೊಡಬೇಕಾದರೆ ಎರಡು ಸಾವಿರ ರೂಪಾಯಿ ಕೊಡದೆ ಏತಕ್ಕೆ ಕೊಡಬೇಕು ಎನ್ನುವ ಅಭಿಪ್ರಾಯ ಇದೆ. ಈ ಭೂಮಿ ಕೊಡುವ ವಿಷಯದಲ್ಲಿ ಕಾನೂನು

(ಶ್ರೀ ಎಸ್. ಗೋಪಾಲ ಗೌಡ)

ಮಾಡಿದ್ದಾರೆ. ಈ ಕಾನೂನನ್ನು ಅನುಸರಿಸಿ ಸಾಗುವಳಿಗೆ ಯೋಗ್ಯವಾದ ಭೂಮಿ ಅರಣ್ಯ ಇಲಾಖೆಯಲ್ಲಿದ್ದರೆ, ಅರಣ್ಯ ಖಾತೆಯಿಂದ ಹಾಗೆ ಸಾಗುವಳಿಗೆ ಬರತಕ್ಕ ಜಮೀನನ್ನು ಸಾಗುವಳಿಗೆ ಬಿಡುಗಡೆ ಮಾಡಿಕೊಡುತ್ತಾರೆ. ಮೂರು ಜನ ಕಮಿಟಿಯವರು ನೋಡಿ ಮಾಡಿ ಎಲ್ಲಾ ಆಯಿತು. ರೆವಿನ್ಯೂ ಇಲಾಖೆಗೆ ಅರಣ್ಯ ಇಲಾಖೆಯವರು ಬಿಡುಗಡೆ ಮಾಡಿ ಕೊಟ್ಟಿಲ್ಲ. ಅದಕ್ಕೆ ಮತ್ತೆ ಸಮಿತಿ ಮಾಡಬೇಕು ಎಂದರೆ ಬಹಳ ವಿಳಂಬವಾಗುತ್ತದೆ. ಇಂತಹ ಕೆಲಸವನ್ನು ಸರ್ಕಾರದವರು ಸಂಬಂಧಪಟ್ಟ ಇಲಾಖೆಗಳ ಮೂಲಕ ಮಾಡಿಸುವುದರಲ್ಲಿ ಬಹಳ ವಿಳಂಬ ಮಾಡುತ್ತಾರೆ. ಈ ಕಡೆ ಗಮನ ಕೊಡುತ್ತಾ ಇಲ್ಲ. ಇದು ವಿಷಾದಕರವಾದ ಸಂಗತಿ. ಈ ಕಡೆ ಗಮನ ಕೊಟ್ಟು ಪ್ರಯತ್ನ ಮಾಡುತ್ತಾ ಇದ್ದರೆ ನನಗೆ ದುಃಖ ಇಲ್ಲ, ಆ ಕಡೆ ಗಮನ ಕೊಡಬೇಕು. ಮಾನ್ಯ ಮುಖ್ಯ ಸಚಿವರು ಸೆಕ್ರೆಟೇರಿಯೇಟ್‌ನಲ್ಲಿ ಮೂರು ಗಂಟೆಯ ಸಮಯ ಕೆಲಸ ಹೇಗೆ ನಡೆಯುತ್ತದೆ ಎಂದು ಹೇಳಿದರು. ಮಂತ್ರಿ ಮಂಡಲ ಇದೆ, ಲೆಜಿಸ್ಲೇಚರ್ ಇದೆ, ಎದುರುಗಡೆ ಹೈಕೋರ್ಟ್ ಇದೆ, ಇಲ್ಲಿ ಈ ತರಹ ಕೆಲಸ ನಡೆಯುತ್ತಾ ಇದ್ದರೆ, ನಿಮ್ಮ ಮೂಗಿನ ಕೆಳಗೆ ವಿಳಂಬಗಳು ಅಕೃತ್ಯಗಳು ನಡೆಯುತ್ತಾ ಇರುವುದಾದರೆ, ಹೊಸನಗರದ ಕೊಡಚಾದ್ರಿ ಪರ್ವತದ ಬುಡದಲ್ಲಿ ಆರು ತಿಂಗಳು ಬಿಸಿಲು ಕಾಣದೆ ಇರುವ ಸನ್ನಿವೇಶ ಇರುವ ಕಡೆ ಒಬ್ಬ ಶ್ಯಾನುಭೋಗರು ಒಬ್ಬ ಪಟೇಲರು, ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಅವರೇ ಸರ್ಕಾರ, ಅವರಿಗೆ ಅಧಿದೇವತೆಗಳು, ಅಲ್ಲಿ ಎಷ್ಟರಮಟ್ಟಿಗೆ ನಿಮ್ಮ ಕಾನೂನನ್ನು ಜನರ ಹಿತಕ್ಕೆ ಚಲಾಯಿಸಬಹುದು, ಆ ಬಡ ಮುಗ್ಧ ಅಸಹಾಯಕ ಜನತೆಯನ್ನು ಯಾವರೀತಿ ಶೋಷಣೆ ಮಾಡುತ್ತಾ ಇರಬಹುದು ಎನ್ನುವ ಅಭಿಪ್ರಾಯ ತಮಗೆ ಮನವರಿಕೆ ಆಗಿದೆಯೋ ಇಲ್ಲವೋ ನಮಗಂತೂ ಅದು ಅಸಹನೀಯವಾಗಿದೆ. ಈ ಆಡಳಿತ ಹೇಗೆ ಕೊನೆಗಾಣಿಸಬೇಕು ಎಂದು ನಮಗೆ ತೋಚುತ್ತಾ ಇಲ್ಲ. ಅರ್ಜಿಗಳು ಬರೆದದ್ದು ಆಯಿತು, ಅದನ್ನು ತೋರಿಸಿ ಹೇಳಿದ್ದು ಆಯಿತು, ಅಲ್ಲಿ ಲಾ ಅಂಡ್ ಆರ್ಡರ್ ಇಲ್ಲವೇ ಇಲ್ಲ. ಕಾನೂನು ಆಡಳಿತ ಇಲ್ಲವೇ ಇಲ್ಲ. ಅಲ್ಲಿ ಸಬ್ ಇನ್‌ಸ್ಪೆಕ್ಟರೇ ಅಧಿಪತಿ. ಇದನ್ನು ಸರಿಪಡಿಸದೇ ಹೋದರೆ ಹಳ್ಳಿಮಟ್ಟದಲ್ಲಿ ಅಧಿಕಾರ ಕುಸಿದುಬಿದ್ದು ಹೋಗುವುದಲ್ಲದೆ, ಯಾರು ಬೇಕಾದರೂ ಅಧಿಕಾರವನ್ನು ಚಲಾಯಿಸುವ ಸ್ಥಿತಿಗೆ ತಂದುಬಿಟ್ಟಿದ್ದೀರಿ. ಅಧಿಕಾರ ಹಿಡಿದಿರತಕ್ಕ ಯಂತ್ರ ಮೂಲೆಯಲ್ಲಿ ಘೋರವಾದ ನಿದ್ರೆ ಮಾಡುತ್ತಾ ಇದೆ. ಇದನ್ನು ಸರಿಯಾಗಿ ಬಗೆಹರಿಸಬೇಕು.

ಇನ್ನು ಭೂ ಕಂದಾಯಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಂದು ಮಾತಿನಲ್ಲಿ ಮುಗಿಸುತ್ತೇನೆ. ಕ್ಷಾಮ ಪರಿಹಾರದ ಸಂಬಂಧವಾಗಿ ರಾಜ್ಯ ಸರ್ಕಾರದವರ ಮಾತಿನಲ್ಲಿ ನಂಬಿಕೆ ಇಲ್ಲದೆ, ಕೇಂದ್ರ ಸರ್ಕಾರದವರೇ ಖುದ್ದಾಗಿ ಬಂದು ನೋಡಿಕೊಂಡು ಹೋದರು. ಅವರ ವರದಿ ಚೆನ್ನಾಗಿದೆ ಎಂದು ಹೇಳಿದಿರಿ. ದಯವಿಟ್ಟು ಅದನ್ನು ಈ ಮನೆಯ ಮುಂದೆ ಇಡಬೇಕು. ಇಂತಹ ಹೇಳಿಕೆಗಳನ್ನು ಮಾನ್ಯ ಸಭೆಯ ಮುಂದೆ ಇಡದೇ ಇರತಕ್ಕದ್ದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಅದನ್ನು ಮಂಡಿಸಿ ಅದು ನಾವು ಎಷ್ಟುಮಟ್ಟಿಗೆ ವಾಸ್ತವ ಆಗಿದೆ, ಎಷ್ಟು ಮಟ್ಟಿಗೆ ರಾಜ್ಯಕ್ಕೆ ಸಹಾಯವಾಗಿದೆ ಎನ್ನುವುದನ್ನು ನಾವು ನೋಡುತ್ತೇವೆ. ಕ್ಷಾಮ ಪರಿಹಾರ ಎನ್ನುವ ಕೆಲಸ ಏನು ಹಳೇ ಕಾಲದ ರೀತಿಯಲ್ಲಿ ನಡೆದಿದೆ ಇದನ್ನು ಬದಲಾವಣೆ ಮಾಡಬೇಕು. ಪಂಚಾಯಿತಿಗಳ ಮೂಲಕ ಉಚಿತವಾಗಿ ಅನ್ನ ಕೊಡುತ್ತೇವೆ ಎಂದು ಕೂಡ ಆಹಾರ ಸಚಿವರು ಡಂಗುರ ಸಾರಿದ್ದಾರೆ. ಉಚಿತ ಅನ್ನ ಒಂದು ಸಾವಿರ ಟನ್ ಎಲ್ಲೆಲ್ಲಿ ಹೋಗುತ್ತದೆ, ಹೇಗೆ ವಿಲೇವಾರಿ ಆಗುತ್ತದೆ ಎನ್ನುವುದನ್ನು ನೋಡಲು ಬೇಕಾದರೆ, ಪ್ರತಿಯೊಬ್ಬ ಮಾನ್ಯ ಸಭೆಯ ಸದಸ್ಯನ ಸಹಾಯ ತೆಗೆದುಕೊಳ್ಳಿ, ಗ್ರಾಮಗಳಲ್ಲಿ ಎಷ್ಟು ಜನ ನಿಜವಾಗಿ ದರಿದ್ರರು ಇದ್ದಾರೆ, ವಿಷ ತೆಗೆದುಕೊಂಡು ಬಾವಿಗೆ ಹಾರುವ ಸ್ಥಿತಿಗೆ ಎಷ್ಟು ಜನ ಇದ್ದಾರೆ, ಅವರ ಲೆಕ್ಕ ತೆಗೆದುಕೊಂಡು ಅವರಿಗೆ ಊಟ ಹಾಕುವ ವ್ಯವಸ್ಥೆ ಮಾಡಿ. ಒಂದು ಸಾವಿರ ಟನ್ ಅಕ್ಕಿ ಪುಸ್ತಕದಲ್ಲಿ ಇರುವ ಬದಲು ಸರ್ಕಾರದ ಅಕ್ಕಿ ತಿಂದು ಸಾಯಲಿ. ಇಷ್ಟು ಮಾಡಿಸಬೇಕು ಶ್ಯಾನುಭೋಗರು, ಪಟೇಲರು ವಂಶಪಾರಂಪರ್ಯವಾದ ಹಕ್ಕನ್ನು ತೊಡೆದು ಹಾಕಬೇಕೆಂದು ಉಚ್ಚ ನ್ಯಾಯಾಲಯ ಅನುಮತಿ ಕೊಟ್ಟಿದೆ ಅವರಿಗೆ ಪರಿಹಾರವನ್ನು ಏಕಗಂಟಾಗಿ ಕೊಡುವುದು ಒಳ್ಳೆಯದು. ಎರಡು ಕೋಟಿ ರೂಪಾಯಿ ಆದರೂ ಚಿಂತೆ ಇಲ್ಲ. ಅದನ್ನು ಒದಗಿಸಿ ಅವರನ್ನು ಮುಕ್ತರನ್ನಾಗಿ ಮಾಡಿ, ಅವರ ಕೈಯ್ಯಲ್ಲಿನ ಕಾಗದ ಪತ್ರಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಎರಡು ಕೋಟಿ ಖರ್ಚಾದರೂ ಚಿಂತೆ ಇಲ್ಲ. ನಿಮ್ಮ ಪರಿಹಾರವನ್ನು ನೀವು ತೆಗೆದುಕೊಂಡು ಹೋಗಬೇಕು ಎಂದು ಹೇಳಿ. 10 ಸಾವಿರ ರೂಪಾಯಿ ಮೇಲ್ಪಟ್ಟು ಆಗುವುದಾದರೆ ಕಂತಿನಲ್ಲಿ ಕೊಡಿ. ಒಂದು, ಎರಡು, ಮೂರು, ನಾಲ್ಕು ಸಾವಿರ ಬರುವವರಿಗೆ ಕಂತು ಬೇಡ. ಪುನಃ ನೇಮಕ ಮಾಡುವ ಪ್ರಶ್ನೆ ಏನು ಇದೆ ಅದನ್ನು ವಿಚಾರ ಮಾಡಬೇಕು. ನಿಜವಾಗಿ ಚಿಕ್ಕವಯಸ್ಸಿನವರಾಗಿದು

ಸಾಕಷ್ಟು ವಿದ್ಯೆ, ಬುದ್ಧಿ ಇದ್ದು ಎಸ್. ಎಸ್. ಎಲ್. ಸಿ. ಪಾಸ್ ಆಗಿದ್ದರೆ, ಅಂಥವರನ್ನು ಅಧಿಕಾರದಲ್ಲಿ ಇಟ್ಟುಕೊಳ್ಳುವುದಕ್ಕೆ ತೀರ್ಮಾನ ಮಾಡುವ ಹಾಗಿದ್ದರೆ, ತಕ್ಷಣ 100 ಮೈಲಿ ಆಚೆಗಾದರೂ ಅವರನ್ನು ವರ್ಗ ಮಾಡಬೇಕು. ಅದಕ್ಕೆ ಒಪ್ಪಿಕೊಂಡರೆ ಮಾತ್ರ ಅವರನ್ನು ಅಧಿಕಾರದಲ್ಲಿ ಇಟ್ಟುಕೊಳ್ಳಬಹುದು. ಇಲ್ಲದಿದ್ದರೆ ನಾನಂತೂ ಹೇಳುತ್ತೇನೆ, ಅವರನ್ನು ಮನೆಯಲ್ಲಿ ಇಟ್ಟು ಪುನಃ ನೇಮಕ ಮಾಡುವುದು ಖಂಡಿತ ಬೇಡ. ನಮ್ಮಲ್ಲಿ ಪಹಣಿ ಬರೆಯುವುದರಲ್ಲಿ, ಲೆವಿ ಬರೆಯುವುದರಲ್ಲಿ ಅಸಹನೀಯ ಪರಿಸ್ಥಿತಿ ಉಂಟಾಗಿದೆ. ಈ ಪರಿಸ್ಥಿತಿಯನ್ನೇ ಮುಂದುವರಿಸಿಕೊಂಡು ಹೋಗುವುದರಿಂದ ರಕ್ತಪಾತ ಹೊಡೆದಾಟಗಳು ತಲೆಮಂಡೆ ಒಡೆದುಕೊಳ್ಳುವುದು ಇವಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅವರು ಒಂದು ಕಾಗದ ಬರೆಯುತ್ತಾ ಇಲ್ಲ. ಡೆಪ್ಯೂಟಿ ಕಮೀಷನರ್ ಬಂದು ಅಂಗಲಾಚಿ ಬರವಣಿಗೆಯಲ್ಲಿ ಬರೆದುಕೊಡಿ ಎಂದು ಹೇಳುವ ಸ್ಥಿತಿಗೆ ಬಂಧಿದೆ. ಹಿಂದೆ ಮಿರ್ಜಾ ಸಾಹೇಬರ ಜಮಾಬಂದಿ ಹೋಯಿತು, 10 ವರ್ಷದಿಂದ ಟಿ.ಟಿ. ಏತಕ್ಕೆ ಕೊಟ್ಟಿಲ್ಲ, ದರಖಾಸ್ತು ಏತಕ್ಕೆ ಮಂಜೂರು ಆಗಿಲ್ಲ ಎಂದು ಕೇಳುವುದು ಹೋಯಿತು. ಬರೆದದ್ದಕ್ಕೆ ಸೈನ್ ಮಾಡುವುದು, ಒಡೆ ಸಾಂಬಾರು ತಿಂದು ಹೊರಡುವುದು ಹೀಗೆ ಆಗಿದೆ. ಇದು ಏನು ಜಮಾಬಂದಿ! ಇದನ್ನು ಸರಿಪಡಿಸಬೇಕು. ಶ್ಯಾನುಭೋಗರು, ಪಟೇಲರು, ಕಾರ್ಯದರ್ಶಿಗಳು ಇವರನ್ನು ಸರಿಯಾಗಿ ತರಬೇತು ಮಾಡಬೇಕು. ಅವರಿಗೆ ಸೂಕ್ತ ಸಂಬಳ ಕೊಡಬೇಕು. ಇಲ್ಲದಿದ್ದರೆ ಎರಡು ಸಾವಿರ ಆದಾಯ ಬರುವ ಪಂಚಾಯಿತಿಗಳು ಇವೆ. ಒಬ್ಬ ಕಾರ್ಯದರ್ಶಿಗೆ 100 ರೂಪಾಯಿ ಸಂಬಳ ಕೊಟ್ಟರೆ ಅವನ ಸಂಬಳಕ್ಕೆ ಎರಡು ಸಾವಿರ ಆಗುತ್ತದೆ. ಆದ್ದರಿಂದ ಕಾರ್ಯದರ್ಶಿಗಳನ್ನು ನೀವೇ ನೇಮಕ ಮಾಡಿ ಶ್ಯಾನುಭೋಗರಿಂದ ಏನೇನು ಕಾಗದ ಪತ್ರಗಳು ಬರಬೇಕು ಎಂದು ನೋಡಿ ತೆಗೆದುಕೊಂಡು ಗ್ರಾಮ ಮಟ್ಟದಲ್ಲಿ ಪೂರ್ಣವಾದ ಎಲ್ಲಾ ರಿಕಾರ್ಡುಗಳನ್ನೂ ಇಡುವುದಕ್ಕೆ ಏರ್ಪಾಡು ಮಾಡಿ. ಇವೊತ್ತು ಸಾಲಕ್ಕೆ ಕಾಗದ ತರಬೇಕು ಎಂದರೆ, ಸ್ಕಾಲರ್‌ಷಿಪ್ ತರಬೇಕು ಎಂದರೆ, ಇನ್‌ಕಂ ಸರ್ಟಿಫಿಕೇಟ್ ತರಬೇಕೆಂದರೆ, ಕೋ-ಆಪರೇಟೀವ್ ಸೊಸೈಟಿಗೆ ಸರ್ಟಿಫಿಕೇಟ್ ತರಬೇಕೆಂದರೆ, ರೈತ ತೀರ್ಥಹಳ್ಳಿ ತಾಲ್ಲೂಕು ಆಫೀಸಿಗೆ ಓಡಾಡಿ ಸುಸ್ತಾಗುತ್ತಾನೆ. ಸಾಲ ಬೇಡ ನನ್ನ ಕೈಬಿಟ್ಟರೆ ಸಾಕು ಎನ್ನುವ ಸ್ಥಿತಿಗೆ ಬಂದಿದೆ. ಇದನ್ನು ಹೋಗಲಾಡಿಸಬೇಕು. ಗ್ರಾಮ ಮಟ್ಟದಲ್ಲಿ ಚಾವಡಿಯಲ್ಲಿ ಬೇಕಾದ ಎಲ್ಲಾ ರಿಕಾರ್ಡುಗಳೂ ಸಿಕ್ಕುವಂತೆ ಮಾಡಿ. ಬೇಕಾದರೆ 3-4 ಆಣೆ ಫೀ ಹಾಕಿ. ಇನ್ನೊಂದು ವಿಷಯ ಹೇಳಿ ಮುಗಿಸುತ್ತೇನೆ. ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಸರ್ಕಾರದ ಯಾವ ಕಾಗದವೂ ಹೋಗಬಾರದು. ಹೋದರೆ ನಮ್ಮಲ್ಲಿ ಆ ಕಾಗದವನ್ನು ಸುಡಿಸಬೇಕಾಗುತ್ತದೆ. ನೀವು ಬೇಕಾದರೆ, ಜಿಲ್ಲಾಧಿಕಾರಿಗಳಿಗೆ, ಮಂತ್ರಿಗಳಿಗೆ, ಕೇಂದ್ರ ಸರ್ಕಾರಕ್ಕೆ, ಅಥವಾ ಮಹಾರಾಷ್ಟ್ರಕ್ಕೆ ಬರೆಯುವ ಹಾಗಿದ್ದರೆ ಇಂಗ್ಲಿಷ್‌ನಲ್ಲಿ ಬರೆಯಿರಿ. ಆದರೆ ರೈತರಿಗೆ ವ್ಯವಹಾರ ಮಾಡುವಾಗ ಕನ್ನಡ ಹೊರತು ಬೇರೆ ಯಾವ ಭಾಷೆಯಲ್ಲಿಯೂ ಬರೆಯಬೇಡಿರಿ. ಉದಾಹರಣೆಗೆ, ನಿಮ್ಮ ದರಖಾಸ್ತು ರಿಜೆಕ್ಟ್ ಮಾಡಿದ್ದೇವೆ, ಅಥವಾ ಇನ್ನಿತರ ವಿಚಾರಗಳಲ್ಲಿ ಬರೆಯುವಾಗ ಕನ್ನಡದಲ್ಲೇ ಬರೆಯಬೇಕು. ಫಾರಮ್ಸ್ ಇಂಗ್ಲಿಷ್‌ನಲ್ಲಿ ಅಚ್ಚು ಹಾಕಿಸಿದರೆ, ಅದರ ಹಣ ಕೂಡ ಯಾರು ಜವಾಬ್ದಾರರೋ ಅವರು ಕೊಡಬೇಕಾಗುತ್ತದೆ. ಆದ್ದರಿಂದ ಪತ್ರ ವ್ಯವಹಾರ ಕನ್ನಡದಲ್ಲೇ ಸ್ವಚ್ಛವಾಗಿ ಗ್ರಾಮ ಗ್ರಾಮಗಳಲ್ಲಿ ಜಾರಿಗೆ ತರಬೇಕು.

ಇನ್ನು ಪಶುಸಂಗೋಪನೆ ಬಗ್ಗೆ ವೆಟರಿನರಿ ಡಾಕ್ಟರರಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ ಎಂದು ಹೇಳಿದರು. ಅವರು ತಮ್ಮ ಮಾತನ್ನು ಉಳಿಸಿಕೊಂಡು ಹೆಚ್ಚು ಮಾಡಿದ್ದರ ಬಗ್ಗೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಅನೇಕ ಸದಸ್ಯರು ಹೇಳಿದರು, ಪಶುಸಂಗೋಪನೆಗೆ ಎಷ್ಟು ಖರ್ಚು ಮಾಡಬೇಕಾಗಿತ್ತೋ ಅಷ್ಟು ಖರ್ಚು ಮಾಡುತ್ತಾ ಇಲ್ಲ ಎಂದು. ಈ ವಿಷಯದಲ್ಲಿ ಅಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಈಗ ಒಬ್ಬ ರೈತನು ಒಂದು ಸಾವಿರ ರೂಪಾಯಿ ಕೊಟ್ಟು ಒಂದು ಜೊತೆ ಎತ್ತುಗಳನ್ನು ತಂದು, ಅದು ಎಲ್ಲಿಯಾದರೂ ಸತ್ತು ಹೋದರೆ, ಅವನ ಸಂಪೂರ್ಣ ವಂಶವೇ ನಾಶವಾಗುವ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಹೆಚ್ಚು ಹೆಚ್ಚು ವೆಟರಿನರಿ ಸೌಲಭ್ಯಗಳನ್ನು ಒದಗಿಸುವಂತೆ ಮಾಡಬೇಕು. ಮತ್ತು ಮಲೆನಾಡು ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸತಕ್ಕ ಕೆಲಸಗಳನ್ನು ಸರ್ಕಾರದವರು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಹೆಚ್ಚು ಅವಕಾಶ ತೆಗೆದುಕೊಂಡಿದ್ದಕ್ಕೆ ಅಧ್ಯಕ್ಷರು ಕ್ಷಮಿಸುತ್ತಾರೆ ಎಂದು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರುಗಳು ಕಂದಾಯ ಇಲಾಖೆಗೆ ಸಂಬಂಧಪಟ್ಟ ಉಪಯೋಗವಾಗುವಂತಹ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಕೊಟ್ಟ ಎಲ್ಲಾ ಸಲಹೆಗಳನ್ನೂ ಎಲ್ಲೆಲ್ಲಿ ಸಾಧ್ಯವೋ,

(ಶ್ರೀ ಎಂ. ವಿ. ಕೃಷ್ಣಪ್ಪ)

ಅಲ್ಲಲ್ಲಿ ಸರ್ವ ಪ್ರಯತ್ನ ಪಟ್ಟು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ ಮಾನ್ಯ ಸದಸ್ಯರುಗಳು ಈ ಇಲಾಖೆಯಿಂದ ಏನೇನೂ ಅಪೇಕ್ಷಿಸುತ್ತಾರೋ ಅದನ್ನು ನೆರವೇರಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಈ ಕಂದಾಯ ಇಲಾಖೆಯು ಬಹಳ ಪುರಾತನ ವಾದುದು, ಮತ್ತು ರೈತನಿಗೆ ಬಹಳ ಅವಶ್ಯವಾದುದು. ಈ ಇಲಾಖೆಯು 7-8 ವರ್ಷಗಳಿಂದ ಸಮರ್ಪಕವಾದ ಕೆಲಸಮಾಡುತ್ತಾ ಇಲ್ಲ. ಇದಕ್ಕೆ ಕಾರಣಗಳು ಅನೇಕ ಇವೆ. ಈಗ ಮೈಸೂರು ಸಂಸ್ಥಾನದ ಚರಿತ್ರೆಯಲ್ಲೇ ಇದೊಂದು ಪರ್ವ ಕಾಲ. 5-6 ಸಂಸ್ಥಾನದ ಬೇರೆ ಬೇರೆ ಭಾಗಗಳು ಬಂದು ಒಂದು ಸಂಸ್ಥಾನಕ್ಕೆ ಸೇರಿವೆ. ಒಂದೊಂದು ಭಾಗದ ಕಾನೂನು ಒಂದೊಂದು ತರಹ ಇದೆ. ಇದನ್ನೆಲ್ಲಾ ಏಕರೂಪವಾಗಿ ಮಾಡಿ ಸಂಬಂಧಪಟ್ಟ ಎಲ್ಲಾ ಕಾನೂನುಗಳನ್ನೂ ಬದಲಾವಣೆ ಮಾಡಿ ಒಂದು ಯೂನಿಫಾರ್ಮ್ ಲೆಜಿಸ್ಲೇಶನ್ ತರಬೇಕಾದರೆ ಬಹುಶಃ 4-5 ವರ್ಷವಾದರೂ ಹಿಡಿಯಿತು. ಇನ್ನೂ ಅದರ ಜೊತೆಗೆ ಈ ಕಂದಾಯ ಇಲಾಖೆಗೆ ಅನೇಕ ಬೇರೆ ವಿಧವಾದ ಕೆಲಸಗಳು ಇವೆ. ಭೂಮಿಗೆ ಸಂಬಂಧಪಟ್ಟ ಕಾನೂನುಗಳು ಬದಲಾವಣೆಯಾಗುವ ಕಾಲ ಇದು, ಲ್ಯಾಂಡ್ ರೆವೆನ್ಯೂವಿನಿಂದ ಹಿಡಿದು, ಟೆನೆನ್ಸಿ ಲೆಜಿಸ್ಲೇಶನ್ ಮತ್ತು ಈ ಸರ್ವೆ ಸೆಟ್ಲ್‌ಮೆಂಟ್. ಈ ಸರ್ವೆ ಸೆಟ್ಲ್‌ಮೆಂಟ್ 40 ವರ್ಷಕ್ಕೊಮ್ಮೆ ಬರುವುದು ಇದೇ ಕಾಲಕ್ಕೆ ಬಂತು. ಇವೆಲ್ಲಾ ಒಟ್ಟಿಗೆ ಸೇರಿ ಕೊಂಡು ತಾಲೂಕ್ ಮಟ್ಟದಲ್ಲಾಗಲೀ, ಜಿಲ್ಲಾ ಮಟ್ಟದಲ್ಲಾಗಲೀ, ಹಿಂದೆ ಹತ್ತಾರು ವರ್ಷಗಳ ಹಿಂದೆ ಏನು ಕೆಲಸ ಇತ್ತೊ, ಅದರ 10-12 ಪಾಲಷ್ಟು ಕೆಲಸ ಜಾಸ್ತಿಯಾಗಿದೆ. ಇದರಿಂದ ಏನಾಗಿದೆ ಎಂದರೆ, ಒಬ್ಬ ಸಾವಿರ ರೂಪಾಯಿಯ ಸಾಲಗಾರನು ಅದನ್ನು ಮರುಪಾವತಿ ಮಾಡ ಬಹುದು ಎಂದು ಯೋಚಿಸಬಹುದು, ಆದರೆ ಅದೇ 10-6 ಸಾವಿರಕ್ಕೆ ಏರಿ ಹೋದರೆ, ಅವನಿಗೆ ಅಲ್ಲಿಯೇ ಒಂದು ಅಲಸ್ಯ ಹಿಡಿದುಬಿಡುತ್ತದೆ. ಅದೇ ರೀತಿಯಾದ ಮನೋಭಾವ ಈ ಇಲಾಖೆಯಲ್ಲೂ ಬಂದಿದೆಯೋ ಎಂದು ನನಗನಿಸುತ್ತದೆ. ಈ ಇಲಾಖೆಯಲ್ಲಿ ಅನೇಕ ಪೆಂಡಿಂಗ್ ಕೆಲಸಗಳು ಜಾಸ್ತಿ ಯಾಗಿವೆ. ಇದು ಜಾಸ್ತಿಯಾಗಿರುವುದರಿಂದ ಈ ಇಲಾಖೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡ ಬೇಕಾದ ಪರಿಸ್ಥಿತಿ ಇತ್ತು. ಈ ದೃಷ್ಟಿಯಿಂದ ಕಂದಾಯ ಇಲಾಖೆಯಲ್ಲಿ ಬುನಾದಿ ರೂಪದಲ್ಲಿದ್ದಂತಹ ವಿಲೇಜ್ ಆಫೀಸರ್ಸ್‌ರಾದ ಶ್ಯಾನುಭೋಗ, ಪಟೇಲ, ತೋಟಿ, ತಳವಾರ, ನೀರಗಂಟಿ ಮೊದಲಾ ದವರು ರೈತನಿಗೆ ನ್ಯಾಯವನ್ನು ಕಂದಾಯ ಇಲಾಖೆಯಿಂದ ಕೊಡತಕ್ಕಂತವರು. ಅಂಥವರನ್ನು ಬದಲಾವಣೆ ಮಾಡಬೇಕೆಂದು ಸರ್ಕಾರ ನಾಲ್ಕು ವರ್ಷದ ಕಾಲ ಯೋಚನೆ ಮಾಡಿ ಒಂದು ಕಾನೂ ನನ್ನು ತಂದಿದೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಅದು ಆಗಿದ್ದರೆ ಬಹಳ ಕೆಲಸ ಕಡಿಮೆಯಾಗುತ್ತಿತ್ತು. ಅದು ಕೋರ್ಟಿನಲ್ಲಿ ಹೋದುದರಿಂದ ಬಹಳ ತೊಂದರೆಯಾಗಿದೆ. ಇದರ ಉದ್ದೇಶ ಈ ಅನಾದಿಕಾಲ ದಲ್ಲಿದ್ದಂತಹ ಹೆರಿಡಿಟರಿ ಹಕ್ಕನ್ನು ತೆಗೆದುಹಾಕಿ ನೇರವಾದ ನೇಮಕಯಾಡುವುದು. ಮಾನ್ಯ ಶ್ರೀ ಗೋಪಾಲ ಗೌಡರು ಹೇಳಿದುದರಲ್ಲಿ ಸತ್ಯಾಂಶವಿದೆ. ಈ ವಿಲೇಜ್ ಆಫೀಸರ್ಸ್ ಹಳ್ಳಿಗಳಲ್ಲಿ ಸರಿಯಾಗಿ ಕಂದಾಯವನ್ನು ವಸೂಲು ಮಾಡುತ್ತಾ ಇಲ್ಲ, ಸರಿಯಾಗಿ ಪಹನಿ ರಿಕಾರ್ಡ್ ಬರೆಯುತ್ತಾ ಇಲ್ಲ, ಕೆಲವು ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹೋಗಿ ಶಾನುಭೋಗನ ಹತ್ತಿರ ಲೆಕ್ಕಪತ್ರಗಳೇ ಮೊದಲಾದುವುಗಳನ್ನು ಬರೆದು ಮುಗಿಸಿ ತಂದು ಕೊಡಿ ಎಂದು ಹೇಳಿದ್ದು ಉಂಟು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅದು ಹಳೆಯದು ಸ್ವಾಮಿ, ಹೊಸದು ಹೇಳಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದು ಪಬ್ಲಿಕ್ ಮೀಟಿಂಗಿಗೆ ಬಂದರೆ ಅಲ್ಲಿ ಹೇಳುತ್ತೇನೆ.

ಇದರಿಂದ ಈ ವಿಲೇಜ್ ಆಫೀಸರ್ಸ್ ಒಂದು ತ್ರಿಶಂಕು ಸ್ವರ್ಗದಲ್ಲಿದ್ದರು. ಇನ್ನು ಇದು ಸರಿ ಹೋಗುತ್ತದೆ. ಈಗ ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ಆಗಿದೆ. ಇನ್ನು ಅವರನ್ನೆಲ್ಲಾ ತೆಗೆದು ಹೊಸಬರನ್ನು ನೇಮಕ ಮಾಡುತ್ತೇವೆ. ಅವರು ಮುಂದೆ ಯಾವ ತರಹ ಇರುತ್ತಾರೆ, ಕೆಲಸ ಮಾಡುತ್ತಾರೆ ಎಂಬುದು ಬೇರೆ ಮಾತು. ಆದರೆ ಅವರ ಮೇಲೆ ಒಂದು ಹತೋಟಿ ಸರ್ಕಾರಕ್ಕೆ ಇರುತ್ತದೆ. ಇದರಿಂದ ಇನ್ನು ಮುಂದೆ ರೆವೆನ್ಯೂ ಇಲಾಖೆಯಲ್ಲಿ ಲೆಕ್ಕಪತ್ರಗಳನ್ನು ಸಮರ್ಪಕವಾದ ರೀತಿಯಲ್ಲಿ ಇಡಬಹುದು ಎಂಬುದನ್ನು ನಾನು ಇಲ್ಲಿ ಹೇಳುತ್ತೇನೆ. ಇದನ್ನು ವಾಗ್ದಾನ ಮಾಡಿ ಉಳಿಸಿಕೊಳ್ಳುವ ಶಕ್ತಿ ಸರ್ಕಾರಕ್ಕೆ ಬರುತ್ತದೆ. ಮತ್ತು ಈಗ ಏಕರೀತಿಯ ಯುನಿಫಾರ್ಮ್ ಲೆಜಿಸ್ಲೇಶನ್ ಆಗಿ ಈ ರೆವೆನ್ಯೂ ಇಲಾಖೆಯ ಜೊತೆಗೆ ಬರುವುದು ಸರ್ವೆ ಇಲಾಖೆ. ಈ ಸರ್ವೆ ಇಲಾಖೆಯಲ್ಲಿ 10-12 ವರ್ಷಗಳ ರೆವೆನ್ಯೂ ಸೆಟ್ಲ್‌ಮೆಂಟ್ ನಡೆದು ಈಗ ಮುಗಿಯುತ್ತಾ ಇದೆ. ಈಗ ಸರ್ವೇಯರ್ಸ್ ಆಗಿ 500 ಜನರನ್ನು ತೆಗೆದುಕೊಳ್ಳಬೇಕೆಂದು ಪಿ. ಎಸ್. ಸಿ. ಗೆ ಬರೆದಿದ್ದೇವೆ. ಬಹುಶಃ ಸರ್ಕಾರದವರು ನೇರವಾಗಿ ತೆಗೆದುಕೊಳ್ಳಬೇಕೆಂಬ ಯೋಚನೆ ಮಾಡುತ್ತಿದೆ. ಅವರು

ಅದನ್ನು ಪಬ್ಲಿಷ್ ಮಾಡಬೇಕು, ಅವರಿಗೆ ಸಮಯ ಕೊಡಬೇಕು. 500 ನೇಮಕ ಮಾಡಬೇಕಾದರೆ, ಅದಕ್ಕೆ 5,000 ಅರ್ಜಿಗಳು ಬರುತ್ತವೆ. ಒಬ್ಬೊಬ್ಬನಿಗೆ ಇಂಟರ್‌ವ್ಯೂಗೆ ಕಡಿಮೆ ಪಕ್ಷ 6 ನಿಮಿಷವಾದರೂ ತೆಗೆದರೆ, ಪಿ. ಎಸ್. ಸಿ. ಗೆ ಆರು ತಿಂಗಳು ಆದರೂ ಆಗಬಹುದು. ಅವರೆಲ್ಲರೂ ಒಂದೇ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅನೇಕ ಇಲಾಖೆಗಳ ಕೆಲಸಗಳು ಅವರಿಗೆ ಇರುತ್ತವೆ. ಕೊಂಡಿ ಕೆಲಸ ಪೂರ್ತಿಯಾಗುತ್ತದೆ. ರೈತನಿಗೆ ಇರುವ ಕಿರುಕುಳವನ್ನು ತಪ್ಪಿಸ ಬೇಕಾದರೆ ಸಾಧ್ಯವಾದಷ್ಟುಮಟ್ಟಿಗೂ ಸರ್ವೆ ಕೆಲಸ ನಡೆಯಬೇಕು. ಅದಾಗಬೇಕಾದರೆ 500 ಸರ್ವೇ ಯರುಗಳಿಗೆ ಸಾಧ್ಯವಾದಷ್ಟು ಬೇಗ ತರಬೇತಿಯನ್ನು ಕೊಟ್ಟು ಸರ್ವೆ ಕೆಲಸಕ್ಕೆ ಹಾಕಬೇಕಾಗುತ್ತದೆ. ಆ ಕೆಲಸ ಆಗುವವರೆಗೂ ರೈತರಿಗೆ ಕಿರುಕುಳ ಇದ್ದೇ ಇರುತ್ತದೆ. ರೈತನಿಗೆ ಭೂಮಿಯ ಮೇಲೆ ಸಾಲ ಸೋಲವನ್ನು ಸರ್ಕಾರ ಕೊಡುತ್ತದೆ. ಹಾಗೆ ಕೊಡುವಾಗ ಪ್ರತಿಯೊಂದಕ್ಕೂ ಖಾತೆ ಅವನ ಹೆಸರಿ ನಲ್ಲಿರಬೇಕು. ಇಲ್ಲದೆ ಇದ್ದರೆ ಅವನಿಗೆ ಸರ್ಕಾರದಲ್ಲಿ ಸಾಲ ಸಿಕ್ಕುವುದಿಲ್ಲ. ಇಂಥ ನೂರಾರು ಕಿರುಕುಳ ಗಳಿಗೆ ರೈತ ಸಿಕ್ಕಿದ್ದಾನೆ. ಒಟ್ಟಿನಲ್ಲಿ ನಾವು ಪ್ರಜಾಪ್ರಭುತ್ವವನ್ನೇ ಇದಕ್ಕಾಗಿ ಟೀಕಿಸಬೇಕು ಎಂದು ನನಗನ್ನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಕೆಲವು ಮೂಲಭೂತವಾದ ಹಕ್ಕುಗಳಿವೆ. ಯಾರಿಗಾದರೂ ಅನಾನುಕೂಲವಾಗಿದೆ ಎಂದು ಭಾವನೆ ಬಂದರೆ ಅವನು ಕೋರ್ಟಿಗೆ ಹೋಗುತ್ತಾನೆ. ಅದು ತೀರ್ಮಾನವಾಗಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಹೀಗೆ ನಾನಾ ಕಾರಣಗಳಿಂದ ರೈತನಿಗೆ ಸಂಬಂಧಪಟ್ಟ ಕಾರ್ಯಗಳೂ ನಿಧಾನವಾಗುತ್ತವೆ. ಆದರೆ ಈಗ ಅಂಥ ಸ್ಥಿತಿ ಇಲ್ಲ. ಸರ್ವೆ ಇಲಾಖೆಯಲ್ಲಿ ಮುಂಚೆ ಸರಿಯಾದ ಪ್ರೋತ್ಸಾಹ ಇರಲಿಲ್ಲ. ಈಗ ಅನೇಕ ತರಹ ಪ್ರಮೋಷನ್ ಕೊಡುವುದಕ್ಕೆ ಅವ ಕಾಶವಾಗಿರುವುದರಿಂದ ಅಲ್ಲಿ ಕೆಲಸ ಮಾಡುವವರಿಗೂ ಉತ್ಸಾಹ ಬಂದಿದೆ. ಇನ್ನು ಮುಂದೆ ಕೆಲಸ ಸುಗಮವಾಗಿ ನೆರವೇರುತ್ತದೆ ಎನ್ನುವ ಭಾವನೆ ಇದೆ.

ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಲಂಚರುಷುವತ್ತುಗಳು ಪೂರ್ವದಿಂದಲೂ ಇರುವುದನ್ನು ಕೇಳುತ್ತಿ ದ್ದೇವೆ. ಅದಕ್ಕೆ ಮುಖ್ಯವಾದ ಒಂದು ಕಾರಣವೇನಿತ್ತು ಎಂದರೆ ಸಬ್ ರಿಜಿಸ್ಟ್ರಾರ್ ಆಗಿ ಕೆಲಸಕ್ಕೆ ಸೇರಿದವನು ಸಬ್‌ರಿಜಿಸ್ಟ್ರಾರ್ ಆಗಿಯೇ ರಿಟೈರ್ ಆಗುತ್ತಿದ್ದ. ಅವರಿಗೆ ಯಾವ ಪ್ರಮೋಷನ್‌ಗಳೂ ಸಿಕ್ಕುವುದಕ್ಕೆ ಅವಕಾಶ ಇರಲಿಲ್ಲ. ಒಂದೇ ಹುದ್ದೆಯಲ್ಲಿಯೇ ಅವರು ಇರಬೇಕಾಗಿದ್ದುದರಿಂದ ನಮಗೆ ಪ್ರಮೋಷನ್ ಬೇಡವೇ ಬೇಡ ಎನ್ನುವ ರೀತಿಯಲ್ಲಿ ಅವರ ಮನಸ್ಸು ಬಂದು ಲಂಚ ರುಷುವತ್ತುಗಳಿಗೆ ಅವಕಾಶವಾಗಲು ಇದು ಒಂದು ಕಾರಣ ಎಂದು ತಜ್ಞರು ಹೇಳುತ್ತಾರೆ. ಅದನ್ನು ತಪ್ಪಿಸಬೇಕು ಎನ್ನುವ ಉದ್ದೇಶದಿಂದ ಪ್ರಮೋಷನ್‌ಗಳನ್ನು ಕೊಡುವುದಕ್ಕೆ ಅವಕಾಶ ಮಾಡಿ 119 ಗೆಜೆಟೆಡ್ ಹುದ್ದೆಗಳನ್ನು ಮಾಡಿ ಏಳೆಂಟು ಅಸಿಸ್ಟೆಂಟ್ ಕಮಿಷನರುಗಳ ಹುದ್ದೆಗಳನ್ನೂ, ಇನ್‌ಸ್ಪೆಕ್ಟರ್ ಆಫ್ ಸ್ಟ್ಯಾಂಪ್ಸ್ ಎಂದು ಕೆಲವು ಹುದ್ದೆಗಳನ್ನೂ ನಾಲ್ಕೈದು ತಿಂಗಳ ಹಿಂದೆ ಮಾಡಿದ್ದೇವೆ. ಒಟ್ಟಿನಲ್ಲಿ ಆ ಇಲಾಖೆಯಲ್ಲಿ ಉತ್ಸಾಹ ಬಂದಿದೆ. ಅವರೂ ಕೂಡ ಉತ್ಸಾಹದಿಂದ ಕೆಲಸ ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ.

ನಮಗೆ ಕೆಲವು ಡಿನಾಮಿನೇಷನ್ ಸ್ಟ್ಯಾಂಪುಗಳು ಬೇಕಾಗಿವೆ, ಅವುಗಳ ಅಭಾವವಿದೆ. ಇವು ನಾಸಿಕದಲ್ಲಿ ಅಚ್ಚಾಗಿ ಬರಬೇಕು. ನಾವು ಇವುಗಳನ್ನು ಮಾಡುವುದಕ್ಕಾಗುವುದಿಲ್ಲ. ಸ್ಟ್ಯಾಂಪುಗಳ ಅಭಾವ ಜಾಸ್ತಿಯಾಗಿರುವುದಕ್ಕೆ ನಮ್ಮಲ್ಲಿ ಜನಸಂಖ್ಯೆ ಹೆಚ್ಚಾಗಿರುವುದೂ ಒಂದು ಕಾರಣ. ಜನಸಂಖ್ಯೆ ಜಾಸ್ತಿ ಆದಷ್ಟೂ ಇರುವ ಭೂಮಿಯನ್ನು ಹಂಚಿಕೊಳ್ಳಬೇಕು. ಇದರಿಂದ ಕೆಲವು ಜಗಳಗಳು ಬರು ತ್ತವೆ. ಆಗ ಟ್ರಾನ್ಸ್‌ಫರ್ಸ್ ಇವೆಲ್ಲ ಜಾಸ್ತಿಯಾಗಿ ಸ್ಟ್ಯಾಂಪ್ ಪೇಪರುಗಳ ಅಭಾವ ಹೆಚ್ಚಾಗಲು ಒಂದು ಕಾರಣವಾಗಿದೆ. ಸ್ಟ್ಯಾಂಪ್ ಪೇಪರುಗಳ ಅಭಾವವನ್ನು ಆದಷ್ಟು ಬೇಗ ಪರಿಹಾರ ಮಾಡುವು ದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ರೆವಿನ್ಯೂ, ಸರ್ವೆ, ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಸಾಧ್ಯವಾದಷ್ಟೂ ರೈತರಿಗೆ ಕಿರು ಕುಳವನ್ನು ಕಡಮೆ ಮಾಡಿ ಆಡಳಿತ ಸುಗಮವಾಗಿ ನಡೆಯುವುದಕ್ಕೆ ಏನು ಮಾಡಬೇಕೋ ಆ ಪ್ರಯ ತ್ನಗಳನ್ನು ನಾವು ಈಗ ಪ್ರಾರಂಭ ಮಾಡಿದ್ದೇವೆ. ನಾವು ಆಡಳಿತ ದೃಷ್ಟಿಯಿಂದ ಕೆಲವು ತಿದ್ದು ಪಾಟುಗಳನ್ನು ಮಾಡಿ ಸಾಧ್ಯವಾದಷ್ಟೂ ಸರಿಪಡಿಸುತ್ತಿದ್ದೇವೆ. People will get the Government they deserve ಎನ್ನುವ ನಾಣ್ನುಡಿ ಸತ್ಯವಾಗುತ್ತದೆ. ನನ್ನ ಒಂದು ಇಲಾಖೆ ಯನ್ನು ನಾನು ಸರಿಮಾಡುತ್ತೇನೆ, ಹೆದರಿಸಿ, ಬೆದರಿಸಿ ಸರಿ ಮಾಡುತ್ತೇನೆ ಎಂದು ಹೋದರೆ ಎಷ್ಟು ದಿವಸ ಹಾಗೆ ಇರುತ್ತದೆ? ಪತ್ರಿಕೆಗಳಲ್ಲಿ ಬರುವ ವರದಿಗಳನ್ನು ನೋಡಿ ಸಂತೋಷಪಡಬೇಕಾಗುತ್ತದೆ. ಆ ಒಂದೇ ಇಲಾಖೆಯನ್ನು ಸರಿಪಡಿಸುವುದು ಎಂದರೆ ಆಗುವುದಿಲ್ಲ. ಜನರೂ ಸರಿಹೋಗಬೇಕು.

ಈಚೆಗೆ ಭೂಮಿ ಭಾಗ ಇಟ್ಟುಕೊಳ್ಳುವುದು ಜಾಸ್ತಿಯಾಗಿದೆ. ಹಂಚುವುದಕ್ಕೆ ಇದ್ದ ಭೂಮಿ ಎಲ್ಲ ಮುಗಿದುಹೋಯಿತು. ಕೆಲವು ಜಿಲ್ಲೆಗಳಲ್ಲಿ ಹಂಚುವುದಕ್ಕೆ ಭೂಮಿ ಇಲ್ಲ. ಶಿವಮೊಗ್ಗ, ಹಾಸನ ಮೊದಲಾದ ಮಲೆನಾಡು ಜಿಲ್ಲೆಗಳ ಹೊರತು ಉಳಿದ ಜಿಲ್ಲೆಗಳಲ್ಲಿ ಹಂಚುವುದಕ್ಕೆ ಭೂಮಿ ಇಲ್ಲ. ಇರುವ ಭೂಮಿಯನ್ನೇ ಎಲ್ಲರೂ ಹಂಚಿಕೊಂಡು ಹೊಡೆದಾಟ ಮಾಡುತ್ತಿದ್ದಾರೆ. ಜನಗಳಲ್ಲಿ ಮೋಸ, ದಗಾಬಾಜಿ ಬಂದು ಬೇರೆಯವರ ಜಮೀನನ್ನು ಉತ್ತುಕೊಳ್ಳುವುದಕ್ಕೆ ಬರುತ್ತಾರೆ. ಆಗ ಅಧಿಕಾರಿಗಳೂ ತಪ್ಪು ದಾರಿಗೆ ಹೋಗುತ್ತಾರೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಟಿ. ಟಿ. ಕೇಸುಗಳ ಸಂಬಂಧವಲ್ಲಿ ಸರ್ಕಾರ ಒಂದು ತೀರ್ಮಾನ ಮಾಡಿದೆ. ಅಂಥದ್ದನ್ನೆಲ್ಲ ರೆಗ್ಯುಲರೈಸ್ ಮಾಡಬೇಕೆಂದು ಮಂತ್ರಿಮಂಡಲ ತೀರ್ಮಾನ ತಗೆದುಕೊಂಡಿದೆ. ಆದರೆ ಅದನ್ನೇ ಫೈನಲ್ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಒಂದು ಸಲ ರೆಗ್ಯುಲರೈಸ್ ಮಾಡಿದರೆ ಅದೇ ಅಂತಿಮವಾಗುವುದಿಲ್ಲ. ಅದಾದ ಮಾರನೆಯ ದಿನವೇ ಸರ್ಕಾರಿ ಜಮೀನು ಎಲ್ಲಿದೆಯೋ ಅಲ್ಲಿ ಮತ್ತೆ ಬಗರ್ ಹುಕುಂ ಸಾಗುವಳಿಗೆ ಪ್ರಾರಂಭ ಮಾಡುತ್ತಾರೆ. ಟಿ. ಟಿ. ಇದ್ದೇ ಇರುತ್ತದೆ, ಅದನ್ನು ತಪ್ಪಿಸುವುದು ಕಷ್ಟ. ಮೈಸೂರು ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಆರು ಸಾವಿರ ಟಿ. ಟಿ. ಕೇಸುಗಳಿವೆ. ಅವನ್ನು ರೆಗ್ಯುಲರೈಸ್ ಮಾಡುತ್ತೇವೆಂದರೆ ಮಾರನೇ ದಿನವೇ ಸರ್ಕಾರಿ ಜಮೀನನ್ನು ಉತ್ತುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ರೈತರು ತಮ್ಮ ಭೂಮಿ ಎಷ್ಟಿದೆ, ಸರ್ಕಾರ ನ್ಯಾಯವಾಗಿ ಎಷ್ಟು ಮಂಜೂರು ಮಾಡಿದೆ ಅಷ್ಟನ್ನು ಉತ್ತುಕೊಳ್ಳುವುದು ಅಗತ್ಯ, ಅದು ಅವನ ಹಕ್ಕು. ಆದರೆ ಸಾಕಾದಷ್ಟು ಉತ್ತುಕೊಳ್ಳೋಣ ಎನ್ನುವ ಮನೋಭಾವನೆ ಜನರಲ್ಲಿ ಬೆಳೆದು ಬರುತ್ತಿದೆ. ಆದುದರಿಂದ ಟಿ. ಟಿ. ಇಲ್ಲದಂತೆ ಅದನ್ನು ಕೊನೆ ಮಾಡುತ್ತೇವೆಂದು ಧೈರ್ಯವಾಗಿ ಹೇಳುವುದಕ್ಕಾಗುವುದಿಲ್ಲ. ಇದನ್ನು ಹೇಗೆ ಬಗೆಹರಿಸಬೇಕು ಎನ್ನುವ ವಿಚಾರದಲ್ಲಿ, ಮಂತ್ರಿಮಂಡಲದಲ್ಲಿ ತೀರ್ಮಾನವಾಗಿದ್ದರೂ ಕೂಡ, ನಾನು ರೆವಿನ್ಯೂ ಸೆಕ್ರೆಟರಿಯವರಲ್ಲಿ ಚರ್ಚೆ ಮಾಡಿ ಯಾವ ಯಾವ ಸಂದರ್ಭಗಳಲ್ಲಿ ರೆಗ್ಯುಲರೈಸ್ ಮಾಡುವುದಕ್ಕಾಗುತ್ತದೆ, ಎನ್ನುವ ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ. ಅನಧಿಕೃತವಾಗಿ ಉತ್ತುಕೊಂಡಿರುವ ರೈತರಿಗೆಲ್ಲ ಅವರು ಉತ್ತುಕೊಂಡಿರುವ ಜಮೀನನ್ನು ಕೊಟ್ಟು, ಅವರಿಗೆ ಖಾಯಂ ಮಾಡುವುದಾದರೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾನೆ ಎನ್ನುವುದರ ಬಗ್ಗೆ ರಿಕಾರ್ಡುಗಳನ್ನು ಸೃಷ್ಟಿಮಾಡಬಲ್ಲ ಕದೀಮರು ನಮ್ಮಲ್ಲಿದ್ದಾರೆ. ಎರಡು ವರ್ಷಗಳ ಹಿಂದಿನಿಂದ ರಿಕಾರ್ಡುಗಳನ್ನು ಕಲ್ಪನೆ ಮಾಡಿ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸ್ಮಶಾನಗಳನ್ನೆಲ್ಲ ಉತ್ತುಕೊಂಡು, ರಸ್ತೆಗಳನ್ನೆಲ್ಲ ಉತ್ತುಕೊಂಡು, ಬೆಟ್ಟದ ಮೇಲೆ ಕೂಡ ಸ್ವಲ್ಪವೂ ಜಮೀನನ್ನು ಬಿಡದೆ ಉತ್ತುಕೊಂಡಿದ್ದಾರೆ. ಕೆಲವು ಕಡೆ ದೇವಸ್ಥಾನದ ಅಂಗಳವನ್ನು ಕೂಡ ಉತ್ತುಕೊಂಡಿದ್ದಾರೆ. ನಾವು ಪ್ರವಾಸ ಹೋದಾಗ ಇಂಥ ಅರ್ಜಿಗಳು ಬರುತ್ತವೆ, ಅದನ್ನೆಲ್ಲ ನೋಡಿ ನನಗೆ ಆಶ್ಚರ್ಯವಾಗುತ್ತದೆ.

ಒಂದು ದಿವಸಕ್ಕೆ ನನಗೆ 300-400 ಅರ್ಜಿಗಳು ಬರುತ್ತವೆ. ನಾನು ಆಫೀಸಿನಲ್ಲಿರುವಾಗ ಅರ್ಜಿಗಳನ್ನು ತಂದು ಕೊಡುತ್ತಾರೆ, ಬೇರೆ ಮಂತ್ರಿಗಳು ಪ್ರವಾಸ ಹೋದಾಗ ನನಗೆ ಸಂಬಂಧಪಟ್ಟ ಅರ್ಜಿಗಳನ್ನು ಕೊಡುತ್ತಾರೆ, ಪೋಸ್ಟ್ ಮೂಲಕ ಅರ್ಜಗಳು ಬರುತ್ತವೆ. ಹೀಗೆ ಸುಮಾರು 300-400 ಅರ್ಜಿಗಳು ಬರುತ್ತವೆ. ಇವುಗಳನ್ನೆಲ್ಲ ನೋಡಿ ಸೈನ್ ಮಾಡಲಿಕ್ಕೆ ಒಂದೆರಡು ಗಂಟೆಗಳ ಕಾಲ ಹಿಡಿಯುತ್ತದೆ. ಒಂದೊಂದಕ್ಕೂ ಒಂದೊಂದು ಫೈಲ್ ಬಿಲ್ಡ್ ಅಪ್ ಮಾಡಬೇಕು. ಅವುಗಳಲ್ಲಿ ಬಹುಮಟ್ಟಿಗೆ ರಿಜೆಕ್ಟ್ ಆಗುತ್ತವೆ. ಹೀಗೆ ರಿಜೆಕ್ಟ್ ಆಗಿರುವುದಕ್ಕೆ ಮತ್ತೆ ಅರ್ಜಿಯನ್ನು ಕೊಡುತ್ತಾರೆ. ಆಗ ಅದಕ್ಕೆ ಸಂಬಂಧಪಟ್ಟ ಫೈಲನ್ನು ತೆಗೆದು ಪುನಃ ಮೊದಲಿನಂತೆ ಅದರ ಕೆಲಸ ಮಾಡಬೇಕು. ಒಟ್ಟಿನಲ್ಲಿ ಈ ಇಲಾಖೆಯಲ್ಲಿ ಕೆಲಸ ವಿಳಂಬವಾಗುವುದಕ್ಕೆ ಅರ್ಜಿಗಳನ್ನು ಗುಜರಾಯಿಸಿಕೊಳ್ಳುವ ಪದ್ಧತಿ ಎಂದರೆ ತಪ್ಪಾಗಲಾರದು. ಈ ರೀತಿ ಅರ್ಜಿ ಗುಜರಾಯಿಸುವ ಪದ್ಧತಿ ಎಷ್ಟು ಬೇಗ ಹೋದರೆ ಅಷ್ಟು ಬೇಗ ಇಲಾಖೆಯಲ್ಲಿ ದಕ್ಷತೆಯನ್ನು ತರಬಹುದು. ವಿಧಾನ ಸಭೆ ನಡೆಯುವಾಗ ರೈತರ ಒತ್ತಾಯಕ್ಕೆ ಕಟ್ಟು ಬಿದ್ದು ಅನೇಕ ಸದಸ್ಯರು ನನ್ನಲ್ಲಿ ಅರ್ಜಿಗಳನ್ನು ಕೊಡುತ್ತಾರೆ. ಅವು ನನ್ನ ಆಫೀಸು ಬೆಟ್ಟು ಹೋಗಬೇಕಾದರೆ ಏಳೆಂಟು ದಿನಗಳಾಗುತ್ತವೆ. ಹಿಂದಿನಿಂದ ಉಳಿದಿರುವುದನ್ನು ಮುಗಿಸಿ ಆ ಮೇಲೆ ಹೊಸದಾಗಿ ಕೊಟ್ಟ ಅರ್ಜಿಗಳನ್ನು ತೆಗೆದುಕೊಂಡು ಅವುಗಳ ವಿಲೇವಾರಿ ಮಾಡಬೇಕಾದರೆ ಎಷ್ಟು ದಿನಗಳಾಗುತ್ತವೆ ಎನ್ನುವುದನ್ನು ಮಾನ್ಯ ಸದಸ್ಯರು ಊಹೆ ಮಾಡಬಹುದು. ನನ್ನ ಆಫೀಸಿನಲ್ಲಿಯೇ ಈ ರೀತಿ ಆಗುವಾಗ ಡಿವಿಜನಲ್ ಕಮಿಷನರ ಆಫೀಸಿನಲ್ಲಿ ಹೇಗೆ ನಡೆಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಅರ್ಜಿಗಳು ಕಡಮೆಯಾದರೆ ಅದರಿಂದ ಇಲಾಖೆಯಲ್ಲಿ ದಕ್ಷತೆ ಹೆಚ್ಚಾಗುತ್ತದೆ ಎಂದು ನಾನು ಮಾನ್ಯ ರೇವಣ್ಣಸಿದ್ದಪ್ಪನವರಿಗೆ ಹೇಳಬಯಸುತ್ತೇನೆ.

ಶ್ರೀಮಾನ್ ಅಣ್ಣಾರಾಯರು ಮಾತನಾಡುವಾಗ ಹೇಳಿದರು, ಕಂದಾಯದ ಇಲಾಖೆಗೆ ಬಹಳ ಖರ್ಚಾಗುತ್ತಿದೆ, ವಸೂಲು ಮಾಡುವುದು ನಾಲ್ಕೂವರೆ ಕೋಟಿ ರೂಪಾಯಿ, ಖರ್ಚು ಮಾಡುವುದು ಎರಡೂವರೆ ಕೋಟಿ ರೂಪಾಯಿ ಎಂದು. ಇದನ್ನು ಬೇರೆ ಇಲಾಖೆಗಳಿಗೂ ಹೋಲಿಸಬೇಕು. ರೆವಿನ್ಯೂ ಇಲಾಖೆಯಲ್ಲಿ ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರು, ತಹಸೀಲ್ದಾರರು, ಇವರ ಸಿಬ್ಬಂದಿ, ಶಾನುಭೋಗರು, ಪಟೇಲರು, ತೋಟಿ ತಳವಾರರು ಇವರ ಸಂಬಳವೆಲ್ಲ ಸೇರಿ ಎರಡೂವರೆ ಕೋಟಿ ರೂಪಾಯಿ ಆಗುತ್ತದೆ. ಇವರೆಲ್ಲ ಕಂದಾಯವನ್ನು ವಸೂಲಿ ಮಾಡುವ ಅಧಿಕಾರಿಗಳು ಮಾತ್ರವಲ್ಲ, ಅವರು ಎಲ್ಲ ಕೆಲಸಗಳನ್ನೂ ಮಾಡುತ್ತಾರೆ.

6-00 P.M.

ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ರೆವಿನ್ಯೂ ಇಲಾಖೆ ಕೆಲಸವನ್ನು ಮಾತ್ರ ಮಾಡುತ್ತಿಲ್ಲ. ಎಲ್ಲಾ ಇಲಾಖೆಗಳ ಕೆಲಸವನ್ನೂ ಮಾಡುತ್ತಿದ್ದಾರೆ. 4-5 ಕೋಟಿ ರೂಪಾಯಿಗಳ ಕಂದಾಯ ಜೊತೆಗೆ ಕೋಟ್ಯಾಂತರ ರೂಪಾಯಿಗಳಷ್ಟು ರೆವಿನ್ಯೂ ಬರತಕ್ಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಶ್ರೀ ಕೇಶವ ಮೂರ್ತಿಗಳು ಇರತಕ್ಕ ಊರಿನಲ್ಲಿ ಯಾರಾದರೂ ಸತ್ತರೆ ತಹಸೀಲ್ದಾರರನ್ನು ಕರೆಯಿರಿ ಎಂದು ಹೇಳುತ್ತಾರೆ. ಈರೀತಿ ರೆವೆನ್ಯೂ ಇಲಾಖೆ ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಅದಕ್ಕೋಸ್ಕರ ಹಣಕಾಸಿನ ಲೆಕ್ಕದಲ್ಲಿ ವಸೂಲಿ ಮಾಡತಕ್ಕ ಸಿಬ್ಬಂದಿಗೆ ಬಹಳ ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆಂದು ಶ್ರೀಮಾನ್ ಅಣ್ಣಾರಾವ್ ಅವರು ಹೇಳಿದ ಒಂದು ಭಾವನೆ ಸರಿಯಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಇನ್ನು ಅನಿಮಲ್ ಅಸ್ಬೆಂಡ್ರಿ ವಿಷಯವಾಗಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಕೆಲಸಗಳನ್ನು ಆ ಇಲಾಖೆ ಮಾಡುತ್ತಿದೆ. ಬೆಂಗಳೂರು ಡ್ಶೈರಿ ಕಾಮಧೇನು ಕಲ್ಪವೃಕ್ಷ ಇದ್ದ ಹಾಗೆ ಇದೆ. ತಿಪಟೂರು ತಾಲ್ಲೂಕಿನಲ್ಲಿ ಬೆಳೆಯುವ ತೆಂಗಿನ ಮರದಿಂದ 8 ವರ್ಷಗಳಾದರೂ ಏನೂ ಪ್ರತಿಫಲ ಬರುವುದಿಲ್ಲ. ಪ್ರತಿಫಲ ಬರಲಿಲ್ಲವೆಂದು ಸುಮ್ಮನಿರಬಾರದು. ತೆಂಗಿನ ಗಿಡ ನೆಟ್ಟಮೇಲೆ ಒಂದನೇ ವರ್ಷ ಏನೂಬರುವುದಿಲ್ಲ. ಎರಡು-ಮೂರು-ನಾಲ್ಕು-ಐದು-ಆರನೇ ವರ್ಷಕ್ಕೆ ಕಾಯಿ ಬರುತ್ತದೆ. ಆ ಮೇಲೆ ಕಲ್ಪತರುವಾಗಿ ಆಗುತ್ತದೆ. ಹಾಗೆಯೇ ಮಿಲ್ಕ್ ಡ್ಶೈರಿಯೂ ಸಹ ಪ್ರಪಂಚದಲ್ಲಿ ಎಲ್ಲೇ ನೋಡಲಿ ಯಾವ ಡ್ಶೈರಿಯೂ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಮಿಲ್ಕ್ ಡ್ಶೈರಿಯೇನೋ ಅಲ್ಲಲ್ಲಿ ಆಗುತ್ತಲೇ ಇದೆ. ಆದರೆ ಈ ಬೆಂಗಳೂರು ಡ್ಶೈರಿ ಲಾಭದಾಯಕವಾಗಿ ಕೆಲಸ ಮಾಡಬೇಕಾದರೆ ಖಂಡಿತವಾಗಿ ಲಕ್ಷ ಪೌಂಡುಗಳಷ್ಟು ಹಾಲು ಬರಬೇಕು. ಅಷ್ಟು ಹಾಲು ಈಗ ಎಲ್ಲಿದೆ? ಹಾಲು ಉತ್ಪಾದನೆಯಾಗಬೇಕಾದರೆ ಡ್ಶೈರಿಗಳಾಗಬೇಕು. ಡ್ಶೈರಿಗಳನ್ನು ಚಿಕ್ಕದಾಗಿ ಕೊಡುವುದಕ್ಕಾಗುವುದಿಲ್ಲ. ಇಲ್ಲಿ $1\frac{1}{4}$ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿಲ್ಲ. ಯೂನಿಸೆಫ್‌ನವರು 40 ಲಕ್ಷ ರೂಪಾಯಿಗಳಷ್ಟು ಮೆಷಿನರಿಗಳನ್ನು ಕೊಟ್ಟಿದ್ದಾರೆ. ಮಿಕ್ಕಿದ್ದನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇನ್ನು 5-6 ವರ್ಷಗಳಲ್ಲಿ ಒಂದು ದೊಡ್ಡ ಡ್ಶೈರಿಯನ್ನು ಮಾಡಬೇಕೆಂದಿದ್ದೇವೆ. ಸುತ್ತಲೂ ಹಾಲಿನ ಡ್ಶೈರಿಯನ್ನು ಮಾಡಬೇಕೆಂದಿದ್ದೇವೆ. ಮದ್ರಾಸ್ ಮಾಧವರಾಂ ಡ್ಶೈರಿಗೆ ನಮ್ಮ ಡ್ಶೈರಿಯನ್ನು ಹೋಲಿಸಿದರೂ ನಮ್ಮ ಡ್ಶೈರಿಯೇ ಅದಕ್ಕಿಂತ ಚೆನ್ನಾಗಿ ನಡೆಯುತ್ತಿದೆ. ಇವತ್ತು ಆ ಮದ್ರಾಸ್ ಡ್ಶೈರಿಯಲ್ಲಿ ಹಾಲು ನಮ್ಮಷ್ಟು ಉತ್ಪಾದನೆಯಾಗುತ್ತಾ ಇಲ್ಲ. ಈ ವರ್ಷ ಮಳೆ ಇಲ್ಲದ ಕಾರಣ ದನಗಳಿಗೆ ಸಾಕಷ್ಟು ಮೇವು ಇಲ್ಲ. ಹುಲ್ಲು ಇಲ್ಲ, ಹಸೀ ಹುಲ್ಲು ಎಲ್ಲಿ ಸಿಗುತ್ತದೆಂಬುದೇ ಗೊತ್ತಿಲ್ಲ. ನೀರಿಗೆ ತೊಂದರೆ ಬಂದಿರುವಾಗ ಇನ್ನು ಹುಲ್ಲು ಎಲ್ಲಿ ಸಿಗುತ್ತದೆ? ಹುಲ್ಲಿಗೆ ತುಂಬಾ ಅಭಾವ ಈಗ ಬಂದಿರುವಾಗಲೂ ನಮ್ಮ ಡ್ಶೈರಿಯಲ್ಲಿ ಈಗ 20 ಸಾವಿರ ಲೀಟರ್ ಹಾಲು ದೊರೆಯುತ್ತಿದೆ. ಅದರಲ್ಲಿ 16 ಸಾವಿರ ಲೀಟರನ್ನು ಬೆಂಗಳೂರಿನಲ್ಲಿ ಹಂಚುತ್ತಿದ್ದೇವೆ. ಇದಕ್ಕಾಗಿ 16 ಅಥವಾ 18 ಬೂತ್‌ಗಳನ್ನು ನಿರ್ಮಾಣ ಮಾಡಿದ್ದೇವೆ. ಆದ್ದರಿಂದ ಬೆಂಗಳೂರು ಡ್ಶೈರಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದೇ ರೀತಿ ಮಂಗಳೂರಿನಲ್ಲಿಯೂ ಹಾಲಿನ ಕೇಂದ್ರಗಳು ಜಾಸ್ತಿಯಾಗುತ್ತಿವೆ. ಅಲ್ಲಿ ಮುನಿಸಿಪಾಲಿಟಿಯೂ ಸಹ ಈ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ರಸ್ತೆ ಕೆಲಸ ಬಹಳ ಚೆನ್ನಾಗಿ ಅಲ್ಲಿ ನಡೆಯುತ್ತಿರುವುದರಿಂದ ಮಂಗಳೂರಿನಲ್ಲಿ ಒಳ್ಳೆಯ ಭವಿಷ್ಯ ಇದೆಯೆಂದು ಹೇಳುತ್ತೇನೆ. ಡ್ಶೈರಿ ಯೋಜನೆಗಳು ಈಗ ಕಾರ್ಯಗತವಾಗುತ್ತಿವೆ, ಶಿವಮೊಗ್ಗಾ-–ಭದ್ರಾವತಿ, ಹುಬ್ಬಳ್ಳಿ-ಧಾರವಾಡ–ಈ ಪ್ರಾಂತಗಳಲ್ಲಿ ಒಳ್ಳೆಯ ಡ್ಶೈರಿಗಳು ಪ್ರಾರಂಭವಾಗಲಿವೆ. ಇದು ಇನ್ನುಮುಂದೆ ಮೈಸೂರು ಸಂಸ್ಥಾನದಲ್ಲಿ ಚೆನ್ನಾಗಿ ನಡೆಯುತ್ತದೆ. ಇನ್ನು ಈ ಇಲಾಖೆಯಲ್ಲಿ ಕೆಲವು ರಿಟ್ ಅರ್ಜಿಗಳು ಇದ್ದ ಕಾರಣ ಕೆಲವು ಪ್ರೊಮೋಷನ್‌ಗಳನ್ನು ಮಾಡಲಿಕ್ಕೆ ಆಗಲಿಲ್ಲ. ಈ ಇಲಾಖೆಯಲ್ಲಿ ಕೆಲಸಮಾಡಲು ನೌಕರರಿಗೆ ಒಂದು ಉತ್ಸಾಹ ಬರುವಂತೆ ಸಂಬಳ ಸಾರಿಗೆ ಇರಬೇಕೆಂದು ಹೇಳಿದ್ದಾರೆ. ವೆಟರಿನರಿ ಗ್ರಾಜುಯೇಟ್ಸ್ ಇತ್ತೀಚೆಗೆ ಸ್ಟ್ರೈಕ್ ಮಾಡಿದರು ಎಂಬುದಾಗಿ ಒಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅವರು ಆ ರೀತಿ ಮುಷ್ಕರ ಹೂಡಿದ್ದರಿಂದ ಅವರ ಸಂಬಳ ಸಾರಿಗೆ ಪ್ರಶ್ನೆಯೊಂದೇ ಅಲ್ಲ, ಇನ್ನೂ ಇತರ ಎಲ್ಲಾ ಟೆಕ್ನಿಕಲ್ ಸಬ್ಜೆಕ್ಟ್ಸ್ ಸಹ ಸರ್ಕಾರ ತೀರ್ಮಾನ ಮಾಡಿದೆ. ಈಗ ಅವರುಗಳಿಗೆ 50 ರೂಪಾಯಿಗಳಷ್ಟು ಸಂಬಳ ಜಾಸ್ತಿ ಬರುತ್ತದೆ. ವೆಟರಿನರಿ ಡಾಕ್ಟರುಗಳಿಗೆ 170 ರೂಪಾಯಿಗಳ ಬೇಸಿಕ್ ಸಂಬಳದಿಂದ 225 ರೂಪಾಯಿಗಳ ಬೇಸಿಕ್ ಸಂಬಳವಾಗಿದೆ. ಈ ರೀತಿ ಸಂಬಳವನ್ನು ಜಾಸ್ತಿ ಮಾಡಿರುವುದರ ಜೊತೆಗೆ ವೆಟರಿನರಿ ಡಾಕ್ಟರುಗಳ ಹೆಸರನ್ನು ಬದಲಾಯಿಸಿ ಈಗ ಅವರಿಗೆ ವೆಟರಿನರಿ ಸರ್ಜನ್ ಎಂಬುದಾಗಿ ಒಂದು ಹೊಸದಾಗಿ ಒಳ್ಳೆಯ ಹೆಸರನ್ನು ಕೊಟ್ಟಿದ್ದೇವೆ. ಇದರಿಂದ ಸರ್ಕಾರಕ್ಕೆ 20-22 ಲಕ್ಷ ರೂಪಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಗಳು ಜಾಸ್ತಿ ಖರ್ಚಾಗುತ್ತದೆ. ಬೇರೆ ಗ್ರಾಜುಯೇಟುಗಳ ಹಾಗೆ ಈ ವೆಟರಿನರಿ ಗ್ರಾಜುಯೇಟ್‌ಗಳೂ ಸಹ ಉತ್ಸಾಹದಿಂದ ಇರಬೇಕೆಂದು ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಂಡಿದೆ. ಮಾನ್ಯ ಆರೋಗ್ಯ ಮಂತ್ರಿಗಳೂ ಸಹ ಟೆಕ್ನಿಕಲ್ ಗ್ರಾಜುಯೇಟುಗಳಿಗೂ ಸಹ ಅಕ್ಕಪಕ್ಕದಲ್ಲಿರುವ ಮದ್ರಾಸ್ ಮತ್ತು ಇತರ ಪ್ರಾಂತಗಳಲ್ಲಿರುವಂತೆ ಸಂಬಳ ಸಾರಿಗೆ ಇರಬೇಕೆಂದು ಹೇಳಿದ್ದರು. ಆ ವಿಚಾರ ಸರ್ಕಾರದ ಗಮನದಲ್ಲಿತ್ತು. ಅದನ್ನು ಈಗ ಸರ್ಕಾರದವರು ಜಾರಿಗೆ ತಂದಿದ್ದಾರೆ.

ಕಡೆಯದಾಗಿ ಫ್ಯಾಮಿನ್‌ರಿಲೀಫ್ ವಿಷಯವಾಗಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಶ್ರೀ ರೇವಣ್ಣಸಿದ್ದಪ್ಪನವರು ಬಹಳ ಕಾತುರವಾಗಿ ಆ ವಿಚಾರವನ್ನು ಕೇಳುವುದಕ್ಕೆ ಇಷ್ಟಪಟ್ಟಿದ್ದಾರೆ. ಆಹಾರ ಮಂತ್ರಿಗಳು ಆಹಾರ ಚರ್ಚೆಯ ಕಾಲದಲ್ಲಿ ಫ್ಯಾಮಿನ್ ವಿಷಯವಾಗಿ ಸರ್ಕಾರದವರು ಕೈಗೊಂಡಿರತಕ್ಕ ಅನೇಕ ಕೆಲಸಗಳನ್ನು ಹೇಳಿದ್ದಾರೆ. ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಅಭಾವ ಪರಿಸ್ಥಿತಿ ಬಂದಿದ್ದರಿಂದ ಈಗ ಫ್ಯಾಮಿನ್ ಹೆಡ್ಡಿನಲ್ಲಿ ಸುಮಾರು 50 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರಲ್ಲಿ ಒಂದು ಅರಿಕೆ. ಹಣ ಖರ್ಚಾಗಿರುವುದು ಹಿಂದಿನ ರೀತಿಯಲ್ಲಿ ಅಲ್ಲ. ಬಹಳ ಬದಲಾವಣೆಗಳಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಫ್ಯಾಮಿನ್ ರಿಲೀಫ್‌ಗೆ ಕೊಟ್ಟಿರುವುದು 5 ಅಥವಾ 6 ಲಕ್ಷ ರೂಪಾಯಿಗಳು. ಬೇರೆ ರೂಪದಲ್ಲಿ ಸುಮಾರು 20-30 ಲಕ್ಷ ರೂಪಾಯಿಗಳು ಅದೇ ಜಿಲ್ಲೆಗೆ ಹೋಗಿದೆ. ಅಲ್ಲಿ ಕಾಂಟೂರ್‌ಬಂಡಿಂಗ್ ಕೆಲಸ ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಬಾವಿಗಳನ್ನು ಅಗೆಯುವುದಕ್ಕೆ ಇರಿಗೇಷನ್ ವರ್ಕ್ಸ್‌ಗಾಗಿ ಒಂದೊಂದು ಜಿಲ್ಲೆಗೆ 15-20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಿ.ಡಬ್ಲ್ಯು.ಡಿ. ಮೈನರ್ ಇರಿಗೇಷನ್ ವರ್ಕ್ಸ್‌ಗೆ, ಕೆರೆಗಳ ನಿರ್ಮಾಣ ಕಾರ್ಯಗಳಿಗೆ, ಅರಣ್ಯಗಳನ್ನು ಬೆಳೆಸುವುದಕ್ಕೋಸ್ಕರ ಹೆಚ್ಚಿನ ಮೊಬಲಗನ್ನು ಈ ವರ್ಷದಲ್ಲಿ ಕೊಟ್ಟಿದ್ದಾರೆ. ಪಂಪುಸೆಟ್ಟುಗಳನ್ನೂ ಕೊಟ್ಟಿದ್ದಾರೆ. ಡಿ-ಸಿಲ್ಟ್ ಮಾಡಲು ಫೀಡರ್ ಚಾನಲ್ಲಿಗಾಗಿ ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ಆದರೆ ಹಿಂದಿನ ಫ್ಯಾಮಿನ್ ಕೋಡನ್ನೂ ಏಕೆ ನೋಡಲಿಲ್ಲವೆಂದು ಒಬ್ಬ ಮಾನ್ಯ ಸದಸ್ಯರು ಕೇಳಿದರು. I have not seen the Famine Code.

Sri C. J. MUCKANNAPPA.—The Government have come forward and said that the Famine Could be maintained.

Sri M. V. KRISHNAPPA.—We have never followed nor it is possible to follow the Famine Code.

ಹಿಂದಿನ ಫ್ಯಾಮಿನ್ ಕೋಡಿನಲ್ಲಿ ಕೊಟ್ಟಿರುವಹಾಗೆ ರಿಲೀಫ್‌ಕೊಟ್ಟರೆ ಅನೇಕರು ಸತ್ತುಹೋಗುತ್ತಾರೆ. ಎಲ್ಲಾ ಕಡೆಯೂ ಗಂಜೀಕೇಂದ್ರಗಳನ್ನು ತೆರೆಯಬೇಕಾಗಿತ್ತು. ಅದನ್ನು ಬಿಟ್ಟು ಈಗ ಸರ್ಕಾರದವರು ಒಂದು ಪಾಲಿಸಿ ಮೇಲೆ ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡು ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಲ್ಲಿ ಪರಿಹಾರಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಇದುವರೆಗೆ ಈ ಬಾಬಿಗೆ ಹೆಚ್ಚಿಗೆ ಖರ್ಚುಮಾಡುತ್ತಾ ಇರಲಿಲ್ಲ. ಮುಂದಿನ ನಾಲ್ಕು ತಿಂಗಳುಗಳು ಬಹಳ ಕಷ್ಟಕರವಾದುವು; ಆದ್ದರಿಂದ ಎಲ್ಲೆಲ್ಲಿ ಏನೇನು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನೂ ತೆಗೆದುಕೊಳ್ಳುತ್ತಿದ್ದೇವೆ. ಈ ಬಾಬಿಗೆ ಕೇಂದ್ರ ಸರ್ಕಾರದವರು 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ನಮಗೆ ಇನ್ನೂ ಕೊಟ್ಟಿಲ್ಲ. ಶ್ರೀ ಯಾರ್ಡಿಯವರು ಇಲ್ಲಿನ ಪರಿಸ್ಥಿತಿಯನ್ನು ನೋಡಿ ಬಹಳ ಚೆನ್ನಾಗಿ ವರದಿಯನ್ನು ಕೊಟ್ಟಿದ್ದಾರೆ. ಬಹಳ ಸಮರ್ಪಕವಾಗಿ ಮೈಸೂರಿನ ಪರಿಸ್ಥಿತಿಯನ್ನು ಶಿಫಾರಸ್ಸುಮಾಡಿದ್ದಾರೆ. 3 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮೈಸೂರಿನ ಹಣಕಾಸಿನ ಪರಿಸ್ಥಿತಿ ಸಮರ್ಪಕವಾಗಿಲ್ಲ. ಆದ್ದರಿಂದ ಕೇಂದ್ರಸರ್ಕಾರದವರು ಹೆಚ್ಚಿಗೆ ಮೈಸೂರಿಗೆ ಹಣ ಸಹಾಯಮಾಡಿದರೆ ಒಳ್ಳೆಯದು ಎಂಬುದಾಗಿ ಸೂಚನೆಕೊಟ್ಟಿದ್ದಾರೆ. ಅವರು ಆ ಸಹಾಯವನ್ನು ಇನ್ನೂ ಕೊಟ್ಟಿಲ್ಲ, ಕೊಡುತ್ತಾರೆ. ನಾವೂ ಕೂಡ ಸರ್ವಪ್ರಯತ್ನಗಳನ್ನು ಮಾಡಿ ಮುಂದೆ ಬರುವ 4-5 ತಿಂಗಳುಗಳಲ್ಲಿ ನಮ್ಮ ಜನಗಳು ಅಭಾವಕ್ಕೊಳಗಾಗದ ಹಾಗೆ ಮಾಡಲು ಯತ್ನಿಸುತ್ತಿದ್ದೇವೆ. ಪ್ರಾಣಹಾನಿ ಯಾವುದೂ ಆಗದ ಹಾಗೆ ಸರ್ಕಾರದವರು ಬಹಳ ಎಚ್ಚರಿಕೆಯಿಂದ ತ್ವರಿತವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ತಾಲ್ಲೂಕು ಲೆವೆಲ್ಲಿನಲ್ಲಿ ರಿಲೀಫ್ ಕಂಡಿಷನ್ಸ್ ಎಂದು ಹೊಸದಾಗಿ ಮಾಡಿದೆ. ಬಹುಶಃ ಮಾನ್ಯ ಸದಸ್ಯರುಗಳು ಈ ಅಧಿವೇಶನದ ನಂತರ ಮನೆಗೆ ವಾಪಸ್ಸು ಹೋಗುವಾಗ ತಂತಮ್ಮ ತಾಲ್ಲೂಕುಗಳಲ್ಲಿ ಏನೇನು ರಿಲೀಫ್ ಕಾಮಗಾರಿಗಳಾಗುತ್ತಿವೆಯೆಂಬುದನ್ನು ನೋಡಬಹುದು. ಈಗಾಗಲೇ ತಾಲ್ಲೂಕು ಲೆವೆಲ್ಲಿನಲ್ಲಿ ತಹಸೀಲ್‌ದಾರ್ ಬಿ. ಡಿ. ಓ. ಅಸೆಂಬ್ಲಿ ಸದಸ್ಯರು, ತಾಲ್ಲೂಕು ಬೋರ್ಡ್ ಚೇರ್‌ಮನ್, ಅವರ ಅಸಿಸ್ಟೆಂಟ್ ಇಂಜಿ

ನಿಯರ್, ಜೊತೆಗೆ ಅಸಿಸ್ಟೆಂಟ್ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಇವರೆಲ್ಲರೂ ತಿಂಗಳಿಗೆ ಒಂದುಸಾರಿ ಸೇರಿ ಈ ಸಂಧರ್ಭದಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕು, ಯಾವ್ಯಾವ ಕೆಲಸಗಳನ್ನು ಪ್ರತ್ಯೇಕವಾಗಿ ಕೂಡಲೇ ಪ್ರಾರಂಭಮಾಡಬೇಕೆಂದು ಕಮಿಟಿಯಲ್ಲಿ ತೀರ್ಮಾನ ಮಾಡಿದ್ದಾರೆ.

ಆ ವಿಚಾರದಲ್ಲಿ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಏನೇನು ಕೆಲಸವನ್ನು ತೆಗೆದುಕೊಳ್ಳಬೇಕು, ಯಾವ ಯಾವ ಕೆಲಸವನ್ನು ಇಂಡಿವಿಜುಯಲ್ ಆಗಿ ಪ್ರಾರಂಭ ಮಾಡಬೇಕೆಂಬ ವಿಷಯ ಕಮಿಟಿಯಲ್ಲಿ ತೀರ್ಮಾನವಾದಮೇಲೆ ಅದನ್ನು ಟಾಂಟಾಂ ಹೊಡೆಸುತ್ತೇವೆ. by beat of tom tom they must inform the people where they are going to start work and the nature of work, ಯಾವ ಯಾವ ಕೆಲಸ ಎಂಬುದನ್ನು ಪಟ್ಟಿ ಮಾಡಿ ಅದನ್ನು ತಾಲ್ಲೂಕು ಲೆವೆಲ್ಲಿನ ಕಮಿಟಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇಲ್ಲಿಂದ ಅಸೆಂಬ್ಲಿ ಮೀಟಿಂಗ್ ಮುಗಿಸಿಕೊಂಡು ಊರಿಗೆ ವಾಪಸ್ಸು ಹೋಗುವುದರೊಳಗಾಗಿ ಸಾಕಷ್ಟು ಕೆಲಸ ಸಿಕ್ಕುತ್ತದೆ. ಇದಲ್ಲದೆ ಬೇರೆ ಬೇರೆ ಇಲಾಖೆಗಳಲ್ಲಿ ಕೂಡ ಬೇರೆ ರೀತಿಯಲ್ಲಿ ಕೆಲಸಗಳನ್ನು ಮಾಡಿಸುವುದಕ್ಕಾಗಿ ಹಣವನ್ನು ಕೊಡುತ್ತಾರೆ.

ಇನ್ನು ನಾವು ಹೇಗಾದರೂ ಆಗಲೀ ಮಕ್ಕಳ ಆರೋಗ್ಯ ಕೆಡಬಾರದು ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಮಕ್ಕಳಿಗಾಗಿ 1,200 ಟನ್ ಮಿಲ್ಕ್ ಪೌಡರನ್ನು ನಮ್ಮ ರಾಜ್ಯಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ದಿರ್ಗತಿಕರು ಮತ್ತು ಮಕ್ಕಳಿಗೆ ಆಹಾರವನ್ನು ಹಂಚುವುದಕ್ಕಾಗಿ ಕೇಂದ್ರ ಸರ್ಕಾರ ದವರು ವಿದೇಶಗಳಿಂದ ಬಂದ ನೆರವಿನಿಂದ ನಮ್ಮ ಮೈಸೂರು ರಾಜ್ಯಕ್ಕೆ 4 ಸಾವಿರ ಟನ್ ಆಹಾರ ಧಾನ್ಯ ಮತ್ತು 1,200 ಟನ್ ಮಿಲ್ಕ್ ಪೌಡರನ್ನು ಒದಗಿಸಿದ್ದಾರೆ. ನಾವು ಇದನ್ನು ಉಪಯೋಗಿಸಿ ಕೊಂಡು ರಿಲೀಫ್ ಸೆಂಟರನ್ನು ಮಾಡಿ ಅದರ ಮೂಲಕ ನಿರ್ಗತಿಕರು, ಮಕ್ಕಳು ಮತ್ತು ಇಳಿವಯಸ್ಸಿನ್ಲಿರ ತಕ್ಕವರಿಗೆ ಹಂಚಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಅದು ದುರ್ವಿನಿಯೋಗ ಆಗದ ಹಾಗೆ, ಈಗ ನಮ್ಮ ರಾಜ್ಯದಲ್ಲಿ ಯಾರು ಜಮೀನಿಲ್ಲದೆ ಕಷ್ಟಪಡುತ್ತಿದ್ದಾರೆ, ಯಾರು ತೀರ ಕೇವಲ ಬಡವರಾಗಿದ್ದಾರೆ, ಮತ್ತು 60, 70 ವರ್ಷ ವಯಸ್ಸಾಗಿ ಅವರನ್ನು ಯಾರೂ ನೋಡಿಕೊಳ್ಳದೆ ಇರುವಂಥವರನ್ನು ಒಂದು ಲಿಸ್ಟ್ ಮಾಡಿ, ಅವರಿಗೆ ರೇಷನ್‌ಕಾರ್ಡ್ ಪ್ರಿಂಟ್ ಮಾಡಿಸಿಕೊಟ್ಟು ಒಂದು ಲಕ್ಷ ಜನಗಳಿಗೆ ಆಹಾರಧಾನ್ಯವನ್ನು ಒದಗಿಸಬೇಕೆಂದೂ, ಮತ್ತು 6 ಲಕ್ಷ ಮಕ್ಕಳಿಗೆ ಹಾಲು ಮತ್ತು ಕೇಂದ್ರ ಸರ್ಕಾರದ ಹಾಗೂ ಕೇರ್ ಸಂಸ್ಥೆಯವರ ಸಹಾಯದಿಂದ ಮಧ್ಯಾನ್ಹದ ಉಪಹಾರ ವನ್ನೂ ಒದಗಿಸಬೇಕೆಂದೂ ನಾವು ತೀರ್ಮಾನಮಾಡಿದ್ದೇವೆ. ಅದಕ್ಕಾಗಿ ಒಬ್ಬರು ಐ. ಎ. ಎಸ್. ಆಫೀಸರನ್ನು ನೇಮಕ ಮಾಡಿದ್ದೇವೆ.

ಇನ್ನು ಈಗ ಒಟ್ಟಿನಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಅಭಾವ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಆ ಕೆಲಸಗಳನ್ನು ರೆವಿನ್ಯೂ ಇಲಾಖೆಯ ತಹಶೀಲ್ದಾರರು ಮಾಡಿಸಬೇಕೇ ಅಥವಾ ಬಿ. ಡಿ. ಓ. ಮಾಡಿಸಬೇಕೇ ಎನ್ನುವ ಒಂದು ತೊಂದರೆ ಬಂದು ಮೈಸೂರು ಜಿಲ್ಲೆಯಲ್ಲಿ ಅದಕ್ಕೆ ಒದಗಿಸಿದ್ದ ಹಣದಲ್ಲಿ ಹೆಚ್ಚಿಗೆ ಖರ್ಚಾಗಿಲ್ಲ. ಎಲ್ಲಾ ಕಡೆಗಳಲ್ಲೂ ತೊಂದರೆ ಬಾರದಹಾಗೆ ಎಷ್ಟೆಷ್ಟು ಕೆಲಸಗಳನ್ನು ಮಾಡಿಸಬೇಕೋ ಅಷ್ಟು ಮಾಡಿಸುವುದಕ್ಕೆ ಪ್ರಯತ್ನ ಮಾಡು ತ್ತೇವೆ. ಅದಕ್ಕೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಸಹಕಾರವನ್ನು ನೀಡಬೇಕು. ಮುಂದೆ ಬರುವ ಪರಾಭವ ಸಂವತ್ಸರವು ಹಿಂದಿನ ಸಂವತ್ಸರವು ಬಿಟ್ಟುಹೋದ ಆಹಾರದ ಅಭಾವವನ್ನು ಪೂರ್ಣವಾಗಿ ಪರಾಭವಗೊಳಿಸುವುದು. ರಾಜ್ಯಕ್ಕೆ ಕಷ್ಟದ ಕಾಲವು ಹೋಗಿ ಸುಖ ಸಮೃದ್ಧಿಯ ದಿನಗಳು ಬರಲಿವೆ. ಈ ವರ್ಷ ಬುಧನು ರಾಜನಾಗಿದ್ದಾನೆ. ಮಂತ್ರಿಸ್ಥಾನದಲ್ಲಿಯೂ ಬುಧನೇ ಇದ್ದಾನೆ. ಸೈನ್ಯಾಧಿ ಪತಿಯೂ ಬುಧನೇ ಆಗಿದ್ದಾನೆ. ಆದ್ದರಿಂದ 12 ಕೊಳಗ ಮಳೆ ಬಂದು 10 ಕೊಳಗ ಬೆಳೆ ಆಗುತ್ತದೆ. ಮುಂದಿನವರ್ಷ ಬಹಳ ಒಳ್ಳೆಯ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ಯಾರೂ ಚಿಂತಿಸಬೇಕಾ ಗಿಲ್ಲ. ಮಾನ್ಯ ಸದಸ್ಯರು ನನ್ನ ಬೇಡಿಕೆಗಳಲ್ಲಿ ಒಂದು ಕಾಸನ್ನೂ ಕಟ್ ಮಾಡುವುದಕ್ಕೆ ಪ್ರಯತ್ನ ಮಾಡದೆ ಅವನ್ನು ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—The question is :

"That the respective sums not exceeding the amounts mentioned in Demands Nos. 2, 7, 8, 22, 33 and 42 moved by the Minister for Revenue be granted to defray the charges which will come in course of payment during the financial year ending 31st March 1967."

(*The motion was adopted.*)

(As directed by the Chair the motion for Demands for Grants voted by the House are reproduced below.)

DEMAND NO. 2.—LAND REVENUE.

9. *Land Revenue.*

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue ."

DEMAND NO. 7.—STAMPS.

14. STAMPS.

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

DEMAND NO. 8.—REGISTRATION.

15. *Registration Fees.*

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

DEMAND NO. 22.—ANIMAL HUSBANDRY.

33. *Animal Husbandry.*

"That sum not exceeding Rs. 2,95,67,000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

DEMAND NO. 33.—FAMINE.

64. *Famine Relief.*

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

DEMAND No. 42.—COMPENSATION TO ZAMINDARS.

92. *Payment of Compensation to Land-holders, etc., on the abolition of Zamindari System.*

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಕಂದಾಯವನ್ನು ಮಾಫೀ ಮಾಡುವ ವಿಷಯವನ್ನು ಹೇಳಲಿಲ್ಲ.

ಅಧ್ಯಕ್ಷರು.—ಕಂದಾಯ ಮಾಫಿ ಮಾಡುವುದನ್ನು ಬರೆದುಕೊಡಿ. ನಾಳೆ ಅಪ್ರೊಪ್ರಿಯೇಷನ್ ಬಿಲ್ ಬಂದ ಸಮಯದಲ್ಲಿ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

The House will now adjourn to reassemble tomorrow at 1 P.M.

The House adjourned at Fifteen Minutes past Six of the Clock to meet again at One of the Clock on Wednesday, the 30th March 1966.